ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಜುಲೈ 10, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 57 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

janathavani@mac.com
www.janathavani.com
08192 254736 91642 99999

# ಅತಿ ಹಿಂದುಳಿದವರಿಗೆ ನ್ಯಾಯ, ಅಧಿಕಾರ

## ಕಾಂಗ್ರೆಸ್ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಡಾ. ಸಿ.ಎಸ್. ದ್ವಾರಕನಾಥ್

ದಾವಣಗೆರೆ ಜು. 9 – ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಹಿಂದುಳಿದವರಲ್ಲೇ ಅತ್ಯಂತ ಹಿಂದುಳಿದವರು ಹಾಗೂ ಅಸ್ಪೃಶ್ಯರಿಗೇ ಅಸ್ಪೃಶ್ಯರಾದವರನ್ನು ಗುರುತಿಸಿ ಸಾಮಾಜಿಕ ನ್ಯಾಯ ಕಲ್ಪಿಸುವ ಜೊತೆಗೆ ಅವರು ಅಧಿಕಾರ ಚಲಾಯಿಸುವ ದಿನಗಳೂ ಬರಬೇಕು ಎಂದು ರಾಜ್ಯ ಕಾಂಗ್ರೆಸ್ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಡಾ. ಸಿ.ಎಸ್. ದ್ವಾರಕನಾಥ್ ಕರೆ ನೀಡಿದರು.



ಕಾಂಗ್ರೆಸ್ ಜಿಲ್ಲಾ ಕಚೇರಿಯಲ್ಲಿ 'ಅವಕಾಶ ವಂಚಿತ ಹಾಗೂ ರಾಜಕೀಯ ವಂಚಿತ' ತಳ ಸಮು ದಾಯಗಳ ಸಂಘಟನೆಯ ಉದ್ದೇಶದಿಂದ ಜಿಲ್ಲಾ ಸಾಮಾಜಿಕ ನ್ಯಾಯ ಸಮಿತಿ ರಚಿಸಲು ಕರೆಯ ಲಾಗಿದ್ದ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ದಕ್ಕಲಿಗ ಸಮುದಾಯದವರು ಅಸ್ಪೃಶ್ಯರಿಗೇ ಅಸ್ಪೃಶ್ಯರಂತಿದ್ದಾರೆ. ಹಿಂದುಳಿದ ವರ್ಗಗಳಲ್ಲಿ 197 ಜಾತಿಯವರಿದ್ದು, ಇವರಲ್ಲಿ ಬಹುತೇಕ ಜಾತಿಯವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವ ಜೊತೆಗೆ ರಾಜಕೀಯ ಅವಕಾಶ ನೀಡುವ ಅಗತ್ಯವಿದೆ. ಈ ಎಲ್ಲ ಸಣ್ಣ ಸಮುದಾಯಗಳಿಗೆ ಮಾನ್ಯತೆ ನೀಡಲು ಸಂಘಟನೆ ಬೇಕಿದೆ ಎಂದರು.

ಮಹಾರಾಷ್ಟ್ರ ಹೊರತು ಪಡಿಸಿದರೆ ಕರ್ನಾಟಕದಲ್ಲೇ ಅಲೆಮಾರಿಗಳ ಸಂಖ್ಯೆ ಅತಿ ಹೆಚ್ಚಾಗಿದೆ. ಬಿಜೆಪಿ - ಆರ್.ಎಸ್.ಎಸ್.ಗಳು ಈ ಸಮುದಾಯಗಳನ್ನು ದಾರಿ ತಪ್ಪಿಸುತ್ತಿವೆ. ಇವರನ್ನು ಸಂಪರ್ಕಿಸಿ ಕಾಂಗ್ರೆಸ್ ಪಕ್ಷಕ್ಕೆ ತರಬೇಕಿದೆ ಎಂದು ದ್ವಾರಕನಾಥ್ ಹೇಳಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಾಮಾಜಿಕ ನ್ಯಾಯ ವಿಭಾಗದದವರು ಆದಿವಾಸಿ ಹಾಗೂ ಅಲೆಮಾರಿಗಳನ್ನು ಸಂಪರ್ಕಿಸಿ ಸಂಘಟಿಸಿದ್ದೆವು. 16-17 ಜಿಲ್ಲೆಗಳಲ್ಲಿ ಸಂಘಟನೆ ನಡೆಸಿದ್ದು, ಈ ಎಲ್ಲ ಕಡೆಗಳಲ್ಲಿ ಕಾಂಗ್ರೆಸ್‌ಗೆ ದೊರೆತ ಮತಗಳು ಶೇ.3-5ರಷ್ಟು ಹೆಚ್ಚಾಗಿವೆ ಎಂದರು.

ಇನ್ನೊಂದು ವರ್ಷದಲ್ಲಿ ಲೋಕಸಭಾ ಚುನಾವಣೆ ಬರಲಿದೆ. ಅಷ್ಟರ ಒಳಗೆ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಬರಲಿವೆ. ಕಾಂಗ್ರೆಸ್ ಪಕ್ಷ ಬಲಪಡಿಸುವ ಸಲುವಾಗಿ ತಳ ಸಮುದಾಯಗಳನ್ನು ಸಂಪರ್ಕಿಸಬೇಕು ಎಂದವರು ಕರೆ ನೀಡಿದರು.

**ಮಹಿಳೆಯರಿಗೆ ಶೇ.50 ಪ್ರಾತಿನಿಧ್ಯ :** ಜಿಲ್ಲಾ ಹಾಗೂ ಬ್ಲಾಕ್ ಮಟ್ಟದಲ್ಲಿ ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚನೆ ಮಾಡಲಾಗುವುದು.

ಈ ಸಮಿತಿಗಳಲ್ಲಿ ಮಹಿಳೆಯರಿಗೆ ಶೇ.50ರಷ್ಟು ಪ್ರಾತಿನಿಧ್ಯ ಕೊಡಲೇಬೇಕು ಎಂದು ಡಾ. ಸಿ.ಎಸ್. ದ್ವಾರಕಾನಾಥ್ ಹೇಳಿದರು.

**ಮುಸ್ಲಿಂರಲ್ಲಿ 150 ಜಾತಿ :** ಮುಸ್ಲಿಂರಲ್ಲೂ ಜಾತಿಗಳಿವೆ. ಈ ಸಮುದಾಯದಲ್ಲಿ 150ರಷ್ಟು ಜಾತಿಗಳಿವೆ. ಮುಸ್ಲಿಮರಲ್ಲೂ ಅವಕಾಶ ವಂಚಿತ ಜಾತಿಯವರಿಗೆ ಸಾಮಾಜಿಕ ನ್ಯಾಯ ಕಲ್ಪಿಸಬೇಕಿದೆ ಎಂದವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್. ಬಿ. ಮಂಜಪ್ಪ, ಕಾಂಗ್ರೆಸ್ ಪಕ್ಷವು ಸಾಮಾಜಿಕ ನ್ಯಾಯ ಪರಿಕಲ್ಪನೆಯಲ್ಲಿ ಕೆಲಸ ಮಾಡುತ್ತಿದೆ. ಹಿಂದುಳಿದ ವರ್ಗಗಳಲ್ಲಿ ಸಾಮಾಜಿಕ ನ್ಯಾಯದ ಅರಿವು ಮೂಡಿಸಲು ಹಾಗೂ ಅವಕಾಶ ಕಲ್ಪಿಸಲು ಸಮಿತಿಗಳನ್ನು ರಚಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ವೇದಿಕೆಯ ಮೇಲೆ ರಾಜ್ಯ ಸಮಿತಿಯ ಉಪಾಧ್ಯಕ್ಷೆ ವಿ. ಪದ್ಮಾವತಿ, ಪ್ರಧಾನ ಕಾರ್ಯದರ್ಶಿಗಳಾದ ಚಮನ್ ಪರ್ಜಾನಾ, ನಾಗರಾಜ್, ಸಂಘಟನಾ ಕಾರ್ಯದರ್ಶಿ ಸಂತೋಷ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾ **(2ನೇ ಪುಟಕ್ಕೆ)**



# ಹರಪನಹಳ್ಳಿ-ಅರಸೀಕೆರೆ-ದಾವಣಗೆರೆ ನೂತನ ಸಾರಿಗೆ ಬಸ್‌ಗೆ ಚಾಲನೆ

ಹರಪನಹಳ್ಳಿ, ಜು.9- ಹರಪನಹಳ್ಳಿಯಿಂದ ಅರಸೀಕೆರೆ ಮಾರ್ಗವಾಗಿ ದಾವಣಗೆರೆಗೆ ಸಂಚರಿಸುವ ನೂತನ ಸಾರಿಗೆ ಬಸ್ಸನ್ನು ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹಾಗೂ ಸಂಸದ ಜಿ.ಎಂ. ಸಿದ್ದೇಶ್ವರ್ ಹಿರೇಮೇಗಳಗೆರೆ ಗ್ರಾಮದಲ್ಲಿ ಚಾಲನೆ ನೀಡಿದರು.

ನೂತನ ಬಸ್‌ಗೆ ಚಾಲನೆ ನೀಡಿ ಮಾತನಾಡಿದ ಎಂ.ಪಿ.ಲತಾ ಮಲ್ಲಿಕಾರ್ಜುನ್, ಈ ಭಾಗದ ಗ್ರಾಮೀಣ ಪ್ರದೇಶದ ಜನರಿಗೆ ಮತ್ತು ಶಾಲಾ- ಕಾಲೇಜ್ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ನೂತನ ಸಾರಿಗೆ ಬಸ್ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು. ಇದು ನಿತ್ಯ ಹರಪನಹಳ್ಳಿಯಿಂದ ಅರಸೀಕೆರೆ ಮಾರ್ಗವಾಗಿ ಕಂಭತ್ತಹಳ್ಳಿ, ಪುಣಭಘಟ್ಟ, ಹಿರೇಮೇಗಳಗೆರೆ, ವಡ್ನಹಳ್ಳಿ, ಪುಟಗನಹಾಳ್, ಬೇತೂರು ಮೂಲಕ ದಾವಣಗೆರೆಗೆ ಸಂಚರಿಸಲಿದೆ. ಪುನಃ ದಾವಣಗೆರೆಯಿಂದ ಇದೇ ಮಾರ್ಗವಾಗಿ ಹರಪನಹಳ್ಳಿಗೆ ಬರಲಿದೆ ಇದರ ಉಪಯೋಗವನ್ನು ಜನರು ಪಡೆದುಕೊಳ್ಳಬೇಕೆಂದರು.

ಇದೇ ವೇಳೆ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹಿರೇಮೇಗಳಗೆರೆ ಗ್ರಾಮದಲ್ಲಿ ನೂತನ ಗ್ರಂಥಾಲಯ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ, ಹಿರೇಮೇಗಳಗೆರೆ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಉಮಾ ಮಂಜುನಾಥ್, ತಾಲ್ಲೂಕು **(3ನೇ ಪುಟಕ್ಕೆ)**


# ಸಹಭಾಗಿತ್ವದೊಂದಿಗೆ ಬಾಹ್ಯಾಕಾಶ ಬೆಳವಣಿಗೆ

ನವದೆಹಲಿ, ಜು. 9 – ಜಾಗತಿಕ ಸಹಭಾಗಿತ್ವಕ್ಕೆ ಅವಕಾಶ ಪಡೆದುಕೊಂಡಿರುವ ಭಾರತದ ಬಾಹ್ಯಾಕಾಶ ನವೋದ್ಯಮಗಳು, ಅಂತರಿಕ್ಷದಲ್ಲಿ ಉಪಗ್ರಹಗಳ ಇಂಧನ ಮರು ಭರ್ತಿಯಿಂದ ಹಿಡಿದು ಭೂಮಿಯ ಅಧ್ಯಯನದವರೆಗೆ ಹಲವಾರು ಸೇವೆಗಳ ಕಡೆ ಗಮನ ಹರಿಸಿವೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಅಮೆರಿಕಗೆ ಭೇಟಿ ನೀಡಿದ ಸಂದರ್ಭದಲ್ಲಿ ಆರ್ಟೆಮಿಸ್ ಅಕಾರ್ಡ್ಸ್ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಇದರೊಂದಿಗೆ ಭಾರತದ ಖಾಸಗಿ ಉದ್ಯಮಗಳಿಗೆ ಅಮೆರಿಕದ ಬಾಗಿಲು ತೆರೆಯಲಿದೆ ಎಂದು ಉದ್ಯಮದ ನಾಯಕರು ಹೇಳಿದ್ದಾರೆ.

2020ರ ನಂತರ ಭಾರತ ಬಾಹ್ಯಾಕಾಶ ವಲಯವನ್ನು ಖಾಸಗಿ ಉದ್ಯಮಗಳಿಗೆ ತೆರೆದಿತ್ತು. ನಂತರ ಸುಮಾರು 150 ನವೋದ್ಯಮಗಳು ಈ ವಲಯದಲ್ಲಿ ಆರಂಭಗೊಂಡಿವೆ. ರಾಕೆಟ್ ಹಾಗೂ ಉಪಗ್ರಹಗಳ ನಿರ್ಮಾಣ, ಗಗನಯಾತ್ರಿಗಳ ತರಬೇತಿ ಕೇಂದ್ರಗಳ ಸ್ಥಾಪನೆ ಹಾಗೂ ಬಾಹ್ಯಾಕಾಶ ಪ್ರವಾಸೋದ್ಯಮದ ಅವಕಾಶ ಸೇರಿದಂತೆ ಹಲವಾರು ವಲಯಗಳಲ್ಲಿ ಖಾಸಗಿ ವಲಯ ಕಾರ್ಯ ನಿರ್ವಹಿಸುತ್ತಿದೆ.

10 – 15 ವರ್ಷಗಳ ಹಿಂದೆ ಅಮೆರಿಕ ರಕ್ಷಣೆ ಇಲ್ಲವೇ



**ಖಾಸಗಿ ಉದ್ಯಮಗಳಿಂದ ಹೊಸ ಅವಕಾಶಗಳ ಹುಡುಕಾಟ**

ಬಾಹ್ಯಾಕಾಶ ತಂತ್ರಜ್ಞಾನವನ್ನು ಭಾರತಕ್ಕೆ ಪೂರೈಸುವುದನ್ನು ಊಹಿಸಲು ಆಗುತ್ತಿರಲಿಲ್ಲ. ಈಗ ಉತ್ತಮ ಆರಂಭ ಕಂಡಿದ್ದೇವೆ ಎಂದು ಮನಸ್ತು ಸ್ಪೇಸ್ ಸಹ ಸ್ಥಾಪಕ ತುಶಾರ್ ಜಾಧವ್ ಹೇಳಿದ್ದಾರೆ.

ಮುಂಬೈನ ಮನಸ್ತು ಸಂಸ್ಥೆಯು ಉಪಗ್ರಹಗಳಿಗಾಗಿ ಹಸಿರು ಇಂಧನದ ತಂತ್ರಜ್ಞಾನ ರೂಪಿಸುತ್ತಿದೆ. ಮುಂದಿನ ವರ್ಷ ಇದರ ಪರೀಕ್ಷಾ ಉಡಾವಣೆ ನಡೆಯುವ ನಿರೀಕ್ಷೆ ಇದೆ. ಉಪಗ್ರಹಗಳಿಗೆ ಬಾಹ್ಯಾಕಾಶದಲ್ಲಿ ಇಂಧನ ಕೇಂದ್ರ ಆರಂಭಿಸಲೂ ಸಹ ಸಂಸ್ಥೆ ಉದ್ದೇಶಿಸಿದೆ. ಪ್ರಸಕ್ತ ಉಪಗ್ರಹಗಳಲ್ಲಿ ಇಂಧನ ಮುಗಿದ ನಂತರ ಅವು ನಿಷ್ಪ್ರಯೋಜಕವಾಗುತ್ತಿವೆ.

ಕಳೆದ ವರ್ಷ ನವೆಂಬರ್‌ನಲ್ಲಿ ಹೈದರಾಬಾದ್‌ನ ಸ್ಕೈರೂಟ್ ಏರೋಸ್ಪೇಸ್ ಕಂಪನಿಯು ವಿಕ್ರಮ್ - ಎಲ್ ರಾಕೆಟ್ ಉಡಾವಣೆಯಲ್ಲಿ ಯಶಸ್ಸು ಕಂಡಿತ್ತು. ಇದು ಭಾರತದಲ್ಲಿ ತಯಾರಿಸಲಾದ ಮೊದಲ ಖಾಸಗಿ ಬಾಹ್ಯಾಕಾಶ ರಾಕೆಟ್ ಆಗಿದೆ.

ಇಸ್ರೋದ ಮಾಜಿ ವಿಜ್ಞಾನಿಗಳು ಹಾಗೂ ಇಂಜಿನಿಯರ್‌ಗಳು ಈ ಕಂಪನಿ ಸ್ಥಾಪಿಸಿದ್ದರು. ಕಂಪನಿ ಈಗ ವಿಕ್ರಮ್ ಸರಣಿಯಲ್ಲಿ ಮೂರು ರೀತಿಯ ರಾಕೆಟ್ ಉತ್ಪಾದನೆಯಲ್ಲಿ ತೊಡಗಿದೆ. ಇವುಗಳನ್ನು ಸಣ್ಣ ಉಪಗ್ರಹಗಳ ಉಡಾವಣೆಗೆ ಬಳಸಲಾಗುವುದು.

ಖಾಸಗಿ ವಲಯವು ಇಸ್ರೋ ಮಾದರಿಯ ಕೆಲಸವನ್ನು ಮಾಡುತ್ತಿಲ್ಲ. ಸ್ಕೈರೂಟ್ ಹಾಗೂ ಅಗ್ನಿಕುಲ್ ಸಂಸ್ಥೆಗಳು ವಿಶಿಷ್ಟವಾದ ರಾಕೆಟ್ ರೂಪಿಸುತ್ತಿವೆ ಎಂದು ಇನ್-ಸ್ಪೇಸ್ ಅಧ್ಯಕ್ಷ ಪವನ್ ಗೋಯಂಕ ಹೇಳಿದ್ದಾರೆ.

ಕಳೆದ ವರ್ಷ ಚೆನ್ನೈನ ಅಗ್ನಿಕುಲ್ ಕಾಸ್ಮೋಸ್ ಸಂಸ್ಥೆಯು ಶ್ರೀಹರಿಕೋಟಾದಲ್ಲಿರುವ ಇಸ್ರೋದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿ ತನ್ನದೇ ಆದ ಉಡಾವಣಾ ತಾಣ ಪಡೆದುಕೊಂಡಿತ್ತು.

ಭಾರತದಲ್ಲಿ ಬಾಹ್ಯಾಕಾಶ ತಂತ್ರಜ್ಞಾನ **(3ನೇ ಪುಟಕ್ಕೆ)**



**ವಾರಾಂತ್ಯದಲ್ಲಿ ತುಂಗಭದ್ರೆ ವೀಕ್ಷಣೆ**

ಕಳೆದ ಹತ್ತು, ಹನ್ನೆರಡು ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಹರಿಹರದ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದೆ. ವಾರಾಂತ್ಯದಲ್ಲಿ ಜನರು ರಾಘವೇಂದ್ರ ಸ್ವಾಮಿ ಮಠದ ಹಿಂಬದಿಯಲ್ಲಿ ತುಂಗಾರತಿ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು.

# ಜುಲೈನಲ್ಲಿ ಕೊರತೆ ನೀಗಿ ಹೆಚ್ಚುವರಿ ಮಳೆ

ನವದೆಹಲಿ, ಜು. 9 – ಜುಲೈ ಆರಂಭದಿಂದ ದೇಶದ ಹಲವಾರು ಭಾಗಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ, ಮುಂಗಾರು ಮಳೆ ಕೊರತೆಯಿಂದ ಹೆಚ್ಚುವರಿಯತ್ತ ಬಂದಿದೆ.

ಹವಾಮಾನ ಇಲಾಖೆಯ ವರದಿಯ ಪ್ರಕಾರ ಇದುವರೆಗಿನ ಸಾಮಾನ್ಯ ಮಳೆ ಪ್ರಮಾಣ 239.1 ಮಿ.ಮೀ. ಆಗಿದ್ದರೆ, ಸುರಿದಿರುವ ಮಳೆ 243.2ರಷ್ಟಾಗಿದೆ. ವಾಡಿಕೆಗಿಂತ ಶೇ.2ರಷ್ಟು ಹೆಚ್ಚು ಮಳೆಯಾಗಿದೆ.

ಆದರೆ, ದೇಶದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸುರಿದಿರುವ ಮಳೆಯ ಪ್ರಮಾಣದಲ್ಲಿ ಅಜಗಜಾಂತರ ವ್ಯತ್ಯಾಸ ಇದೆ.

ಪೂರ್ವ ಹಾಗೂ ಈಶಾನ್ಯದಲ್ಲಿ ಶೇ.17ರಷ್ಟು ಮಳೆಯ ಕೊರತೆ ಇದೆ. ಉತ್ತರ ಭಾರತದಲ್ಲಿ ಶೇ.59ರಷ್ಟು ಹೆಚ್ಚು ಮಳೆಯಾಗಿದೆ. ಮಧ್ಯ ಭಾರತದಲ್ಲಿ ಶೇ.4ರಷ್ಟು ಹೆಚ್ಚು ಮಳೆಯಾಗಿದೆ. ದಕ್ಷಿಣ ಭಾರತದಲ್ಲಿ ಶೇ.23ರಷ್ಟು ಮಳೆಯ ಕೊರತೆ ಇದೆ. ಜೂನ್ ಅಂತ್ಯದ ವೇಳೆಗೆ 148.6 ಮಿ.ಮೀ. ಮಳೆಯಾಗಿತ್ತು. ಇದು ಸಾಮಾನ್ಯಕ್ಕಿಂತ ಶೇ.10ರಷ್ಟು ಕಡಿಮೆ. ಆದರೆ, ಜುಲೈನಲ್ಲಿ ಮಳೆಯಲ್ಲಿ ಚೇತರಿಕೆಯಾಗಿದೆ.

ಜುಲೈ ತಿಂಗಳಲ್ಲಿ ದೀರ್ಘಾವಧಿ ಸರಾಸರಿಯ ಶೇ.94ರಿಂದ 106ರಷ್ಟು ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಈ ಹಿಂದೆ ತಿಳಿಸಿತ್ತು. ಕಳೆದ ಶನಿವಾರದಿಂದ ವಾಯುವ್ಯ ಭಾಗದಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು, ಹಲವೆಡೆ ದಾಖಲೆ ಮುರಿಯುವಷ್ಟು ಮಳೆಯಾಗಿದೆ.

ಶನಿವಾರ – ಭಾನುವಾರದ 24 ಗಂಟೆ ಅವಧಿಯಲ್ಲಿ ದೆಹಲಿಯಲ್ಲಿ 153 ಮಿ.ಮೀ. ಮಳೆಯಾಗಿದೆ. 1982ರ ನಂತರ ಜುಲೈನಲ್ಲಿ ಒಂದೇ ದಿನ ಇಷ್ಟು ಮಳೆ ಸುರಿದಿರುವುದು ಇದೇ ಮೊದಲು. ಚಂಡೀಘಡ ಹಾಗೂ **(3ನೇ ಪುಟಕ್ಕೆ)**

# ಉದ್ಯಮಗಳ ಹೆಚ್ಚುವರಿ ಐ.ಟಿ.ಸಿ.ಗೆ ವಿವರಣೆ ಕೇಳಲು ಜಿಎಸ್ಟಿ ಕಾಯ್ದೆಯಲ್ಲಿ ಹೊಸ ನಿಯಮ

ನವದೆಹಲಿ, ಜು. 9 – ಉದ್ಯಮಗಳು ಹೆಚ್ಚುವರಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐ.ಟಿ.ಸಿ.) ಪಡೆದರೆ ಇಲ್ಲವೇ ಹೆಚ್ಚುವರಿ ಹಣವನ್ನು ಠೇವಣಿ ಮಾಡಿದರೆ ಆ ಬಗ್ಗೆ ವಿವರಣೆ ಕೇಳಲು ಜಿ.ಎಸ್.ಟಿ. ಕಾಯ್ದೆಯಲ್ಲಿ ಹೊಸ ನಿಯಮ ಸೇರ್ಪಡೆ ಮಾಡುವ ಸಾಧ್ಯತೆ ಇದೆ.

ಐ.ಟಿ.ಸಿ.ಯಲ್ಲಿ ಆಗುವ ವ್ಯತ್ಯಾಸದ ಬಗ್ಗೆ ಉತ್ತರಿಸಬೇಕು ಇಲ್ಲವೇ ಹಣ ಪಾವತಿಸಬೇಕು ಎಂದು ಕಂಪನಿಗಳಿಗೆ ತಿಳಿಸಲು ನಿಯಮ ರೂಪಿಸಬೇಕು ಎಂದು ಕೇಂದ್ರ ಹಾಗೂ ರಾಜ್ಯಗಳ ತೆರಿಗೆ ಅಧಿಕಾರಿಗಳನ್ನು ಒಳಗೊಂಡ ಜಿ.ಎಸ್.ಟಿ. ಕಾನೂನು ಸಮಿತಿಯು ಅಭಿಪ್ರಾಯ ಪಟ್ಟಿದೆ.

ವ್ಯತ್ಯಾಸವು ಶೇ.20ಕ್ಕಿಂತ ಹೆಚ್ಚಾದರೆ ಮತ್ತು 25 ಲಕ್ಷ ರೂ.ಗಳಿಗೂ ಹೆಚ್ಚಿದ್ದರೆ ಈ ನಿಯಮ ಅನ್ವಯವಾಗಬೇಕು ಎಂದು ಸಮಿತಿ ಸಲಹೆ ನೀಡಿದೆ. ಜುಲೈ 11ರಂದು ನಡೆಯಲಿರುವ ಜಿ.ಎಸ್.ಟಿ. ಮಂಡಳಿ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು.

# ರಾಜ್ಯದಲ್ಲಿ ಶೇ.24ರಷ್ಟು ಮಳೆಯ ಕೊರತೆ

ಜುಲೈ 9ರವರೆಗೆ ಕರ್ನಾಟಕದಲ್ಲಿ ವಾಡಿಕೆಗಿಂತ ಶೇ.24 ರಷ್ಟು ಕಡಿಮೆ ಮಳೆಯಾಗಿದೆ. ಈ ಅವಧಿಯಲ್ಲಿ ವಾಡಿಕೆ ಮಳೆ ಪ್ರಮಾಣ 268.8 ಮಿ.ಮೀ. ಆಗಿದೆ. ವಾಸ್ತವಿಕವಾಗಿ 204.2 ಮಿ.ಮೀ. ಮಳೆ ಸುರಿದಿದೆ. ಬಾಗಲಕೋಟೆ, ಬೆಳಗಾವಿ, ಕೊಡ ಗು, ಧಾರವಾಡ, ಶಿವಮೊಗ್ಗ, ಹಾಸನ ಹಾಗೂ ವಿಜಯಪುರ ಗಳಲ್ಲಿ ಶೇ.50ರಷ್ಟು ಮಳೆಯ ಕೊರತೆಯಾಗಿದೆ. ದಾವಣಗೆರೆ, ಬೀದರ್ ಹಾಗೂ ಬೆಂಗಳೂರು ನಗರಗಳಲ್ಲಿ ವಾಡಿಕೆಯಷ್ಟೇ ಮಳೆಯಾಗಿದೆ. ಚಿತ್ರದುರ್ಗದಲ್ಲಿ ವಾಡಿಕೆಗಿಂತ ಶೇ.40ರಷ್ಟು ಹೆಚ್ಚಿನ ಮಳೆಯಾಗಿದೆ.

# ಉತ್ತರದಲ್ಲಿ ಧಾರಾಕಾರ ಮಳೆ, 19 ಸಾವು

ನವದೆಹಲಿ, ಜು. 9 – ಉತ್ತರ ಭಾರತದಲ್ಲಿ ಭಾನುವಾರ ಧಾರಾಕಾರ ಮಳೆ ಸುರಿದಿದ್ದು, ಮಳೆ ಸಂಬಂಧದ ಘಟನೆಗಳಿಂದ 19 ಜನ ಸಾವನ್ನಪ್ಪಿದ್ದಾರೆ.

ದಾಖಲೆ ಮಳೆಯಿಂದಾಗಿ ದೆಹಲಿ ಸೇರಿದಂತೆ, ಹಲವಾರು ನಗರಗಳ ರಸ್ತೆಗಳು ಜಲಾವೃತವಾಗಿವೆ. ನದಿ ದಂಡೆಗಳಲ್ಲಿರುವ ವಸತಿ ಪ್ರದೇಶಗಳಿಗೆ ನೀರು ನುಗ್ಗಿದೆ. ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ದೆಹಲಿಗಳಲ್ಲಿ ಮಳೆ ಅನಾಹುತ ಹೆಚ್ಚಾಗಿದೆ.

ಜಮ್ಮು ಮತ್ತು ಕಾಶ್ಮೀರ, ಲಡಾಖ್ ಹಾಗೂ ಹಿಮಾಚಲ ಪ್ರದೇಶಗಳಲ್ಲಿ ಭಾರೀ ಮಳೆಯ ಎಚ್ಚರಿಕೆ ನೀಡಲಾಗಿದೆ. 1982ರ ನಂತರ ದೆಹಲಿಯಲ್ಲಿ ಜುಲೈ ತಿಂಗಳಲ್ಲಿ ಒಂದೇ ದಿನ ದಾಖಲೆಯ 153 ಮಿ.ಮೀ. ಮಳೆ ಸುರಿದಿದೆ.

ಚಂಡೀಘಡದಲ್ಲಿ 322.2 ಮಿ.ಮೀ. ಹಾಗೂ ಹರಿಯಾಣದ ಅಂಬಾಲದಲ್ಲಿ 224.1 ಮಿ.ಮೀ. ಮಳೆಯಾಗಿದೆ. ಹಿಮಾಚಲ ಪ್ರದೇಶದ ಸೋಲನ್‌ನಲ್ಲಿ 135 ಮಿ.ಮೀ. ಮಳೆಯಾಗಿದೆ. ದೆಹಲಿ ಹಾಗೂ ಸುತ್ತಲಿನ **(2ನೇ ಪುಟಕ್ಕೆ)**

# ಬದುಕಿದ್ದಾಗಲೇ ಮಾತನಾಡಿಸಿ

## ಡಾ. ಜಿ.ಸಿ. ಬಸವರಾಜ ಅವರ 'ಸಾಧನೆಯ ಹಾದಿಯಲ್ಲಿ' ಕೃತಿ ಲೋಕಾರ್ಪಣೆ ಕಾರ್ಯಕ್ರಮದ ಡಾ.ಗುರುಬಸವ ಶ್ರೀ



ದಾವಣಗೆರೆ, ಜು. 9- ವ್ಯಕ್ತಿ ಮೃತಪಟ್ಟಾಗ ಇಂದ್ರ-ಚಂದ್ರ ಎನ್ನುವ ಬದಲು ಇದ್ದಾಗಲೇ ಸೌಜನ್ಯಕ್ಕಾದರೂ ಮಾತನಾಡಿಸುವ ಪ್ರವೃತ್ತಿ ಹೆಚ್ಚಾಗಬೇಕು ಎಂದು ಕಮ್ಮತ್ತಹಳ್ಳಿ ಪಾಂಡೋಮಟ್ಟಿ ಶ್ರೀ ವಿರಕ್ತಮಠದ ಡಾ. ಗುರುಬಸವ ಮಹಾಸ್ವಾಮೀಜಿ ಹೇಳಿದರು.

ಭಾನುವಾರ ಸಂಜೆ ರೋಟರಿ ಕ್ಲಬ್‌ನಲ್ಲಿ ಡಾ.ಜಿ.ಸಿ. ಬಸವರಾಜ ಸ್ನೇಹ ವೃಂದ ಬಳಗದ ವತಿಯಿಂದ ವೈದ್ಯಕೀಯ ಕ್ಷೇತ್ರದಲ್ಲಿ ಅನನ್ಯ ಸೇವೆ ಸಲ್ಲಿಸಿದ ಹಿರಿಯ ಕೀಲು ಮೂಳೆ ತಜ್ಞ ಡಾ.ಜಿ.ಸಿ. ಬಸವರಾಜ ಅವರ 'ಸಾಧನೆಯ ಹಾದಿಯಲ್ಲಿ' ಕೃತಿ ಲೋಕಾರ್ಪಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಮನುಷ್ಯ-ಮನುಷ್ಯನ ನಡುವೆ ದ್ವೇಷ, ಅಸೂಯೆ ಹೆಚ್ಚಾಗುತ್ತಿರುವ ಇಂದಿನ ದಿನಗಳಲ್ಲಿ ಬಾಂಧವ್ಯಕ್ಕೆ ಧಕ್ಕೆಯಾಗದ ರೀತಿಯಲ್ಲಿ ಪ್ರೀತಿಯ ನೆಲೆಗಟ್ಟಿನ ಮೇಲೆ ಜೀವನ ನಡೆಸಲು ಮುಂದಾಗಬೇಕು ಎಂದು ಕರೆ ನೀಡಿದರು.

ವೈದ್ಯಕೀಯ ಕ್ಷೇತ್ರಕ್ಕೂ ಧಾರ್ಮಿಕ ಕ್ಷೇತ್ರಕ್ಕೂ ಅವಿನಾಭಾವ ಸಂಬಂಧವಿದೆ. ಧಾರ್ಮಿಕ ಕ್ಷೇತ್ರವು ಸಂಸ್ಕೃತಿ, ಸಂಸ್ಕಾರ, ಆಚಾರ-ವಿಚಾರ ಕಲಿಸಿದರೆ, ವೈದ್ಯಕೀಯ ಕ್ಷೇತ್ರವು ಆರೋಗ್ಯವನ್ನು ಉತ್ತಮವಾಗಿಟ್ಟುಕೊಳ್ಳುವುದು ಹೇಗೆ ಎಂದು ತಿಳಿಸಿಕೊಡುತ್ತದೆ ಎಂದು ಹೇಳಿದರು.

ಇಂದು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು ಹೆಚ್ಚಾಗಿವೆ. ಬುದ್ಧಿವಂತ ವೈದ್ಯರಿದ್ದಾರೆ. ಆದಾಗ್ಯೂ ಮನುಷ್ಯನ ಜೀವ ಉಳಿಸುವ ಕೊನೆಯ ಹಂತದಲ್ಲಿ 'ನಮ್ಮ ಪ್ರಯತ್ನ ನಾವು ಮಾಡಿದ್ದೇವೆ. ಇನ್ನೇನಿದ್ದರೂ ದೇವರ ಕೈಯಲ್ಲಿದೆ' ಎಂದು ವೈದ್ಯರು ಹೇಳುವುದನ್ನು **(3ನೇ ಪುಟಕ್ಕೆ)**

ಈ ಮಾನ್ಸೂನಲ್ಲಿ, ಅತ್ಯಾಕರ್ಷಕ ಪ್ರಯೋಜನಗಳೊಂದಿಗೆ
ಹ್ಯುಂಡಾಯ್‌ನಲ್ಲಿ ಸಂತೋಷದಾಯಕ ಸವಾರಿಯನ್ನು ಆನಂದಿಸಿ




ALCAZAR ₹20 000* ವರೆಗೆ ಲಾಭಗಳು
Grand i10 NIOS ₹38 000* ವರೆಗೆ ಲಾಭಗಳು
i20 & i20 Nline, DCT ₹20 000* ವರೆಗೆ ಲಾಭಗಳು
+ ₹15 000* ಹೆಚ್ಚುವರಿ ಲಾಭಗಳು

ಇಂದೇ ಭೇಟಿ ನೀಡಿ ನಿಮ್ಮ ಕೆ ಜೆ ಹ್ಯುಂಡಾಯ್ ಕಾರ್ ಶೋರೂಮಿಗೆ. ಕೊಡುಗೆಗಳು ಜುಲೈ 25ರವರೆಗೆ ಲಭ್ಯ

*Terms and conditions apply. Hurry offer valid for limited stocks only.

HYUNDAI

K J HYUNDAI
371/271, Avaragere, P B Road, Davangere, Ph: 7022001207 / 7022001205 / 7022042241 / 7406555077
NH-13, Holalkere Road, Channagiri Branch - 577213, Ph: 7022425985 / 9148004999
BVKS Layout, Bheemasamudra Main Road, Chitradurga-577501, Ph: 9980759983, 7022898487, 7022426017

# ಶಾಂತಿ ಎಂಬ ಶ್ರೇಣಿಯಿಂದ ಗಣಿತದಲ್ಲಿ ಪಾಸಾದಾಗ ಮುಕ್ತಿಯೆಂಬ ರ್‍ಯಾಂಕ್ ದೊರಕುತ್ತದೆ

ರಾಣೇಬೆನ್ನೂರು, ಜು.9- ತಾಯಿ ಸ್ವರೂಪಿಯಾದ ಗುರು ಕರುಣೆ ಇಲ್ಲದೇ ಯಾವ ಮಾನವನು ಸದ್ಗತಿಯನ್ನು ಹೊಂದಲು ಸಾಧ್ಯವಿಲ್ಲ. ಅಂತಪ್ಪ ಗುರುವಿನ ಮಾರ್ಗದರ್ಶನ ಪಡೆದು, ಶಾಶ್ವತ ಸುಖವನ್ನು ಪಡೆಯಬೇಕು ಎಂದು ಗುರು ನಾಗರಾಜಾನಂದ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸುಕ್ಷೇತ್ರ ಖಂಡೇರಾಯನಹಳ್ಳಿಯ ಶ್ರೀ ಸಿದ್ಧಾಶ್ರಮದಲ್ಲಿ ಶನಿವಾರ ರಾತ್ರಿ ಗುರು ಪೂರ್ಣಿಮೆಯ ಅಂಗವಾಗಿ ಶ್ರೀಮಠದ ಭಕ್ತರ ವತಿಯಿಂದ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಗುರುವಂದನೆ ಸ್ವೀಕರಿಸಿ ಶ್ರೀಗಳು ಆಶೀರ್ವಾದ ನೀಡಿದರು.

ಗುರುವಿನಮಾರ್ಗದರ್ಶನವಿಲ್ಲದೇ ಜೀವನವಿಲ್ಲ. ಸುಂದರ ಬದುಕು ರೂಪಿಸಿಕೊಳ್ಳಲು ಗುರು ಬೇಕು, ಆತನ ಕಾರುಣ್ಯದಿಂದ ಮಾತ್ರ ಬದುಕು ಬೆಳಕಾಗಲು ಸಾಧ್ಯ. ಗುರು ಎಂದರೆ ಅಜ್ಞಾನದಿಂದ ಸುಜ್ಞಾನದೆಡೆಗೆ ಜನರನ್ನು ಕೊಂಡೊಯ್ಯುವುದೇ ಆಗಿದೆ ಎಂದು ನುಡಿದರು.

ಈ ಭೂಮಿಯ ಮೇಲಿರುವ 84 ಲಕ್ಷ ಜೀವರಾಶಿಗಳಲ್ಲಿ 'ಚಿಂತನ ಮಂಥನ' ಮಾಡುವ ಏಕೈಕ ಜೀವಿಯಾಗಿರುವ ಮಾನವನು ಜೀವನದುದ್ದಕ್ಕೂ ಸತ್ಯ, ಪ್ರಾಮಾಣಿಕ, ನ್ಯಾಯ, ನೀತಿಯ ದಾರಿಯಲ್ಲಿಯೇ ಸಾಗಿ ಉತ್ತಮ ಬದುಕು ಸಾಗಿಸಬೇಕು.



ಇಂದು ಆಧುನಿಕ ಜಗತ್ತಿನಲ್ಲಿ ಅತಿಯಾದ ತಂತ್ರಜ್ಞಾನದ ಬಳಕೆಯಿಂದಾಗಿ ಮನುಷ್ಯನ ಮನಸ್ಸಿಗೆ ನೆಮ್ಮದಿ ಸಿಗದಂತಾಗಿದೆ. ಜೀವನವೆಂಬುವುದು ಗಣಿತವಿದ್ದಂತೆ, ಒಳ್ಳೆಯ ಗುಣಗಳೆಂಬ ಅಂಕಿಗೆ ಸಾತ್ವಿಕ ಗುಣವೆಂಬ ಅಂಕಿಯನ್ನು ಕೂಡಿಸಬೇಕು, ಕೆಟ್ಟ ಗುಣಗಳೆಂಬ ಅಂಕಿಯನ್ನು ಕಳೆಯಬೇಕು, ಸಂಸ್ಕಾರವೆಂಬ ಅಂಕಿಯನ್ನು ಗುಣಿಸುತ್ತಾ ಹೋಗಿ ದುರ್ಗುಣಗಳನ್ನು ಭಾಗಿಸಿ, ಉಳಿಯುವ ಶೇಷವೇ ಧರ್ಮಗುಣ.

- ಗುರು ನಾಗರಾಜಾನಂದ ಸ್ವಾಮೀಜಿ, ಖಂಡೇರಾಯನಹಳ್ಳಿ

ಅನೇಕ ಮನುಷ್ಯರು ತಮ್ಮ ಜೀವಿತಾವಧಿಯಲ್ಲಿ ಮಾಡಬಾರದ್ದನ್ನು ಮಾಡಿ ಇಹಲೋಕ ತ್ಯಜಿಸುತ್ತಾರೆ. ಕೆಲವರು ಬದುಕಿದಂತೆ ಅವರ ಅನುಪಮ ಸೇವೆ ಬಿಟ್ಟು ಹೋಗುತ್ತಾರೆ. ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯ ಬೆಳೆಸಿಕೊಳ್ಳಬೇಕು.

ದಾರ್ಶನಿಕರು ಬಾಹ್ಯದ ಬದಲು ಆಂತರಿಕಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದು, ಜೀವನ ನವನವೀನವಾಗಬೇಕು. ಅದಕ್ಕಾಗಿ ಅಧ್ಯಾತ್ಮಕತೆಯತ್ತ ದೃಷ್ಟಿ ಹರಿಸಬೇಕು ಎಂದು ಶ್ರೀಗಳು ಹೇಳಿದರು.

ಸಂಸ್ಕಾರ ಗರ್ಭಧಾರಣೆಯಿಂದ ಹಿಡಿದು ಭೂಗರ್ಭಕ್ಕೆ ಹೋಗುವತನಕ ಇರಬೇಕು. ಪ್ರಾಣಿ, ಪಕ್ಷಿಗಳಲ್ಲಿ ನಾವು ಸಂಸ್ಕಾರವನ್ನು ಕಾಣುತ್ತೇವೆ.

ಆದರೆ ಅರಿವಿನ ಜನ್ಮ ತಾಳಿದ ಮನುಷ್ಯ ಸಂಸ್ಕಾರದಿಂದ ವಂಚಿತನಾಗಬಾರದು. ಬೇಕು, ಬೇಕು ಎನ್ನುವ ಅಂಕಿಯನ್ನು ಕೂಡಿಸುತ್ತಾ ಹೋದರೆ ದುಃಖವೇ ಪ್ರಾಪ್ತಿಯಾಗುತ್ತದೆ. ದುಃಖದಿಂದ ಮುಕ್ತಿ ಪಡೆಯಬೇಕಾದರೆ, ಬೇಕು ಎಂಬ ಅಂಕಿಯನ್ನು ಕಳೆದು ಸಾಕು ಎಂಬ ಅಂಕಿಯನ್ನು ಕೂಡಿಸಿದಾಗ ಲೆಕ್ಕ ಪರಿಪೂರ್ಣವಾಗುತ್ತದೆ. ಆಗ ಶಾಂತಿ ಎಂಬ ಶ್ರೇಣಿಯಿಂದ ಗಣಿತದಲ್ಲಿ ಪಾಸಾಗಿ ಮುಕ್ತಿಯೆಂಬ ರ್‍ಯಾಂಕ್ ದೊರಕುತ್ತದೆ. ಇದುವೇ ಜೀವನದ ಲೆಕ್ಕವಾಗಿದೆ ಎಂದು ಶ್ರೀಗಳು ನುಡಿದರು.

ಈ ಸಂದರ್ಭದಲ್ಲಿ ಶ್ರೀಮಠದ ಭಕ್ತರು ಗುರು ನಾಗರಾಜಾನಂದ ಸ್ವಾಮೀಜಿಗಳವರಿಗೆ ಕಿರೀಟ ತೊಡಿಸಿ ಪಾದ ಪೂಜೆ ಹಾಗೂ ವಿವಿಧ ಹೂವುಗಳ ಮಳೆಗರೆದು ಮತ್ತು ಫಲ-ಪುಷ್ಪ ಹಾಗೂ ಮಹಾಮಂಗಳಾರತಿಯೊಂದಿಗೆ ಗುರು ನಮನ ಸಲ್ಲಿಸಿದರು.

ಶ್ರೀಮಠದ ಅಧ್ಯಕ್ಷ ಫಕ್ಕೀರಪ್ಪ ಗೌಡ್ರ, ಜನಾರ್ಧನ ಕಡೂರ, ಗೋಪಾಲ ಕೊಡ್ಲೇರ, ಡಾಕೇಶ್ ಲಮಾಣಿ, ಶಿವಣ್ಣ ಬಣಕಾರ, ಗುಡ್ಡಪ್ಪ ಹೆಡಿಯಾಲ, ಪ್ರಕಾಶ್ ಚನ್ನಗೌಡ್ರ, ಗುರುಶಾಂತಪ್ಪ ಬಾಗಿಲದವರ, ಜಯಪ್ಪ ನೆಲಹೊನ್ನಿ, ಮೈಲಾರೆಪ್ಪ ಸೋಮಲಾಪುರ, ಬಸವರಾಜ ಕಮಲಾಪುರ, ಬೀರೇಶ್ ಹರಿಹರ, ಆಕಾಶ ಗೌಡ್ರ, ಶಾಂತಮ್ಮ ಬಾಗಿಲದವರ, ಗಂಗಮಾಳವ್ವ ಹೆಡಿಯಾಲ, ಮಂಜುಳಾ ಗೌಡ್ರ, ಸುಮಾ ಚನ್ನಗೌಡ್ರ, ಶಾಂತಾ ಹೊಸಕುರುಬರ ಸೇರಿದಂತೆ ನೂರಾರು ಮಹಿಳೆಯರು, ಮಕ್ಕಳು ಇದ್ದರು.

# ಕಾಂಗ್ರೆಸ್ ಪಕ್ಷ ಲಂಬಾಣಿ ಸಮುದಾಯವನ್ನು ಗೌರವಯುತವಾಗಿ ನಡೆಸಿಕೊಂಡಿದೆ



ಹೊನ್ನಾಳಿ, ಜು. 9- ಕಾಂಗ್ರೆಸ್ ಪಕ್ಷವು ಲಂಬಾಣಿ ಸಮುದಾಯವನ್ನು ಗೌರವಯುತವಾಗಿ ನಡೆಸಿಕೊಂಡಿದೆ ಎನ್ನುವುದಕ್ಕೆ ನಾನೇ ಅತ್ಯುತ್ತಮ ಉದಾಹರಣೆ ಎಂದು ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ ಹೇಳಿದರು.

**ಹೊನ್ನಾಳಿ : ಅಭಿನಂದನಾ ಸಮಾರಂಭದಲ್ಲಿ ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ**

ಪಟ್ಟಣದ ಗುರುಭವನದಲ್ಲಿ ಹೊನ್ನಾಳಿ-ನ್ಯಾಮತಿ ತಾಲ್ಲೂಕುಗಳ ಬಂಜಾರ ಸಮಾಜದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಮತ್ತು ಅಭಿಮಾನಿ ಬಳಗದ ವತಿಯಿಂದ ಇಂದು ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪಕ್ಷ ಯಾವುದೇ ತೀರ್ಮಾನ ತೆಗೆದುಕೊಂಡರೂ ಅದಕ್ಕೆ ನಾನು ಬದ್ಧನಾಗಿದ್ದು, ಹುದ್ದೆಯನ್ನು ತಿರಸ್ಕರಿಸಿದ್ದೆ, ನಂತರ ಪಕ್ಷದ ವರಿಷ್ಠರ ಒತ್ತಾಯದ ಮೇರೆಗೆ ಉಪಸಭಾಪತಿ ಸ್ಥಾನವನ್ನು ಒಪ್ಪಿಕೊಂಡಿದ್ದೇನೆ ಎಂದು ಅವರು ತಿಳಿಸಿದರು.

ಕಾಂಗ್ರೆಸ್ ಪಕ್ಷ ಮಾತ್ರವೇ ಎಲ್ಲಾ ವರ್ಗದವರಿಗೂ ಸಾಮಾಜಿಕ ನ್ಯಾಯದಡಿ ಅವಕಾಶಗಳನ್ನು ಕೊಡುವುದರ ಜೊತೆಗೆ ಅಂಬೇಡ್ಕರ್ ತತ್ವ-ಸಿದ್ಧಾಂತಗಳನ್ನು ಅಳವಡಿಸಿಕೊಂಡು ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬಂತೆ ನಡೆದುಕೊಳ್ಳುತ್ತದೆ ಎಂದು ಹೇಳಲು ನನಗೆ ಹೆಮ್ಮೆಯಾಗುತ್ತದೆ ಎಂದು ತಿಳಿಸಿದರು.

ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿಸುವ ಮಹತ್ವಾಕಾಂಕ್ಷಿ ಯೋಜನೆ ಕಾಂಗ್ರೆಸ್ ಸರ್ಕಾರದ್ದಾಗಿದ್ದು, ನಮ್ಮದೇ ಯೋಜನೆಯ ಬೋರ್ಡ್ ಬಳಸಿಕೊಂಡು ಸರ್ಟಿಫಿಕೇಟ್ ಕೊಡಲು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮುಂದಾಗಿದ್ದರೂ ಯಶಸ್ಸು ಪಡೆಯಲು ವಿಫಲರಾದರು ಎಂದು ವ್ಯಂಗ್ಯವಾಡಿದರು.

ಶಾಸಕ ಡಿ.ಜಿ. ಶಾಂತನಗೌಡ ಮಾತನಾಡಿ, ನನ್ನ ಸಹೋದರನಂತಿರುವ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ಸಿಗದ ಸಂದರ್ಭದಲ್ಲಿ ಸಮಾಜದ ಸ್ವಾರ್ಥ ಜನಾಂಗಕ್ಕೆ ಮಂತ್ರಿಸ್ಥಾನ ಸಿಗಲಿಲ್ಲ ಎನ್ನುವುದಾದರೆ, ನನ್ನ ಸ್ವಾರ್ಥ ಸೂರಗೊಂಡನಕೊಪ್ಪದ ಸಮಾರಂಭದಲ್ಲಿ ಸೇರುವ ಜನಸ್ತೋಮಕ್ಕೆ ಏನು ಉತ್ತರ ಹೇಳಲಿ ಎಂಬ ಕಾತುರದ ಸ್ವಾರ್ಥ ನನ್ನದಾಗಿತ್ತು ಎಂದರು.

ರುದ್ರಪ್ಪನವರಿಗೆ ಸಿಕ್ಕಿರುವ ಸ್ಥಾನದ ಮಹತ್ವ ಅವರಿಗೂ-ನಮಗೂ ತಿಳಿದಿರಲಿಲ್ಲ. ಅದನ್ನು ಬಲ್ಲವರಿಂದ ತಿಳಿದು 34 ಜನ ಕ್ಯಾಬಿನೆಟ್ ದರ್ಜೆ ಸಚಿವರಲ್ಲಿ 32 ಸಚಿವರ ಮೇಲೆ ನೀವು ಇರುತ್ತೀರಿ, ಅವರನ್ನೊಳಗೊಂಡಂತೆ ಸಿಎಂ ರವರನ್ನು ನೀವಿದ್ದ ಕ್ಷೇತ್ರಕ್ಕೆ ಕರೆಸಿಕೊಳ್ಳಬಹುದೆಂಬ ಸ್ಥಾನದ ಪಾವಿತ್ರ್ಯತೆ ತಿಳಿದು ಹುದ್ದೆಯನ್ನು ಅನಿವಾರ್ಯವಾಗಿ ಒಪ್ಪಿಕೊಂಡ ಸಂದರ್ಭವನ್ನು ಶಾಂತನಗೌಡ ವಿವರಿಸಿದರು.

ದಾವಣಗೆರೆಯ ವಕೀಲ ಎನ್. ಜಯದೇವನಾಯ್ಕ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಅಭಿನಂದನಾ ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ, ಕೆಪಿಸಿಸಿ ಸದಸ್ಯ ಡಾ.ಎಲ್.ಈಶ್ವರ್ ನಾಯ್ಕ್, ಹೊನ್ನಾಳಿ ಬ್ಲಾಕ್ ಮತ್ತು ಸಾಸ್ವೆಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಎಚ್.ಬಿ.ಶಿವಯೋಗಿ, ಆರ್.ನಾಗಪ್ಪ, ಜಿ.ಪಂ. ಮಾಜಿ ಸದಸ್ಯ ಎಂ. ಆರ್.ಮಹೇಶ್, ಬಂಜಾರ ಸಮಾಜದ ಅಧ್ಯಕ್ಷರುಗಳಾದ ಅಂಜುನಾಯ್ಕ್, ಸೂರ್ಯಾನಾಯ್ಕ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎಚ್. ಎಸ್.ರಂಜಿತ್, ಕಾಂಗ್ರೆಸ್ ಮುಖಂಡರುಗಳಾದ ಬಿ.ಸಿದ್ದಪ್ಪ, ಎಚ್.ಎ.ಉಮಾಪತಿ, ನುಚ್ಚಿನ್ ವಾಗೀಶ್, ಚೀಲೂರ್ ವಾಜಿದ್, ವಕೀಲ ಜಯದೇವನಾಯ್ಕ್, ರಾಘವೇಂದ್ರ ನಾಯ್ಕ್, ದೂದ್ಯಾನಾಯ್ಕ್, ಚೌಹಾಣ್, ವಸಂತನಾಯ್ಕ್, ಪೀರ್ಯಾನಾಯ್ಕ್, ಶಿವರಾಂ ನಾಯ್ಕ್, ಅರಕೆರೆ ಮಧುಗೌಡ, ರಾಘವೇಂದ್ರನಾಯ್ಕ್, ಪ್ರಭುದೇವನಾಯ್ಕ್ ಮತ್ತಿತರರು ಉಪಸ್ಥಿತರಿದ್ದರು.

# ಚಿತ್ರದುರ್ಗ ಜಿಲ್ಲೆಗೆ ನಿರೀಕ್ಷೆ ಮೀರಿ ಮನ್ನಣೆ ನೀಡಿದ ಬಜೆಟ್: ಚಂದ್ರಪ್ಪ ಸಂತಸ

ಚಿತ್ರದುರ್ಗ, ಜು.9- ಪ್ರತಿ ಬಾರಿ ಪ್ರಸ್ತಾಪ ಆಗಿ ಮರೆಯಾಗುತ್ತಿದ್ದ ಮೆಡಿಕಲ್ ಕಾಲೇಜ್ ಆರಂಭಕ್ಕೆ, ತರಗತಿಗೆ ಪ್ರವೇಶಕ್ಕೆ ಮುಂದಾಗಿ, ಚಿತ್ರದುರ್ಗ ಜಿಲ್ಲೆಯ ಜನರ ಬಹುದಿನಗಳ ಕನಸನ್ನು ಸಿದ್ದರಾಮಯ್ಯ ನನಸು ಮಾಡಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಬಿ.ಎನ್. ಚಂದ್ರಪ್ಪ ಸಂತಸ ವ್ಯಕ್ತಪಡಿಸಿದ್ದಾರೆ.

ಜತೆಗೆ ಮೊಳಕಾಲ್ಮೂರು ರೇಷ್ಮೆ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರತ್ಯೇಕ ಹಾಲು ಒಕ್ಕೂಟ ಆರಂಭಕ್ಕೆ ಕ್ರಮಕೈಗೊಂಡಿರುವುದು ಸ್ವಾಗತಾರ್ಹ. ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಹೇಳಿದ್ದ ಬಹುಪಾಲು ಅಂಶಗಳನ್ನು ಮೊದಲ ಬಜೆಟ್‌ನಲ್ಲಿಯೇ ಈಡೇರಿಸುತ್ತಿರುವುದು ಐತಿಹಾಸಿಕ ನಡೆ ಆಗಿದೆ ಎಂದರು.

## ಸಿ.ಆರ್.ಸಿ ಸಂಸ್ಥೆಯಿಂದ ಡಿ.ಇಡಿ. ವಿಶೇಷ ಶಿಕ್ಷಣ ಕೋರ್ಸ್‌ಗಳಿಗೆ ಅರ್ಜಿ

ದಾವಣಗೆರೆ, ಜು. 9 - ನಗರದ ದಿವ್ಯಾಂಗ ವ್ಯಕ್ತಿಗಳ ಕೌಶಲ್ಯ ಅಭಿವೃದ್ಧಿ ಪುನರ್ವಸತಿ ಮತ್ತು ಸಬಲೀಕರಣಗಳ ಸಂಯುಕ್ತ ಪ್ರಾದೇಶಿಕ ಕೇಂದ್ರದಿಂದ 2023-24 ನೇ ಸಾಲಿನ ಡಿ.ಇಡಿ. ವಿಶೇಷ ಶಿಕ್ಷಣ (ಐ.ಡಿ.ಡಿ) ಮತ್ತು ಡಿ.ಇಡಿ. ವಿಶೇಷ ಶಿಕ್ಷಣ (ಹೆಚ್.ಐ) ಕೋರ್ಸ್‌ಗಳ ಪ್ರವೇಶಕ್ಕೆ ದಿವ್ಯಾಂಗ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ. 50 ಹಾಗೂ ಪರಿಶಿಷ್ಠ ವರ್ಗ ಪಂಗಡದವರು ಕನಿಷ್ಠ ಶೇ.45 ಅಂಕಗಳಿಂದ ಉತ್ತೀರ್ಣರಾಗಿರಬೇಕು.

ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 15 ರೊಳಗಾಗಿ ದಿವ್ಯಾಂಗ ವ್ಯಕ್ತಿಗಳ ಕೌಶಲ್ಯ ಅಭಿವೃದ್ಧಿ ಪುನರ್ವಸತಿ ಮತ್ತು ಸಬಲೀಕರಣಗಳ ಸಂಯುಕ್ತ ಪ್ರಾದೇಶಿಕ ಕೇಂದ್ರ, ದೇವರಾಜ ಅರಸು ಬಡಾವಣೆ, ಬಿ ಬ್ಲಾಕ್ ಶಿವಾಲಿ ಟಾಕೀಸ್ ದಾವಣಗೆರೆ ಇಲ್ಲಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ : 08192-233464/465, ಮೋ.ಸಂ : 8746043062, 9490020080 ಅಥವಾ ವೆಬ್‌ಸೈಟ್:director.crcdvg@gmail.com/ academics.crcdvg@gmail.com / https://crcdvg.nic.in ಸಂಪರ್ಕಿಸಲು ಥಮರೈ ಸೆಲ್ವಾನ್ ಕೋರಲಾಗಿದೆ.

# ಪ್ಲಾಸ್ಟಿಕ್ ಮುಕ್ತ ಪರಿಸರ ಅಭಿಯಾನಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ

ಜಗಳೂರು, ಜು.9- ಪ್ಲಾಸ್ಟಿಕ್ ಮುಕ್ತ ಪರಿಸರ ಅಭಿ ಯಾನಕ್ಕೆ ಸಾರ್ವಜನಿಕರು ಕೈಜೋಡಿಸಿ, ಯಶಸ್ವಿಗೊಳಿಸ ಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ಕರೆ ನೀಡಿದರು.

ಪಟ್ಟಣದ ಹಳೇ ಪಟ್ಟಣ ಪಂಚಾಯಿತಿ ಮುಂಭಾಗ ಮಾಸಿಕವಾಗಿ ಹಮ್ಮಿಕೊಂಡಿರುವ ಪೌರಕಾರ್ಮಿಕ ರೊಂದಿಗೆ 'ಕಸ ಗುಡಿಸುವ ಮೂಲಕ ಸ್ವಚ್ಛತೆಯ ಜಾಗೃತಿ ಅಭಿಯಾನ' ಕುರಿತು ಅವರು ಮಾತನಾಡಿದರು.

ಮಾನವನ ಚಟುವಟಿಕೆಗಳಿಂದ ಪರಿಸರದಲ್ಲಿ ಕೊಳೆಯದಂತಹ ಪ್ಲಾಸ್ಟಿಕ್ ನಂತಹ ತ್ಯಾಜ್ಯ ವಸ್ತುಗಳನ್ನು ಮತ್ತು ಮಾಲಿನ್ಯಕ್ಕೆ ಕಾರಣವಾಗುವ ವಿಷಪೂರಿತ ಘನ ತ್ಯಾಜ್ಯ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆಯದೆ ನಿಗದಿತ ಸ್ಥಳದಲ್ಲಿ ಸಂಗ್ರಹಣೆ ಮಾಡಬೇಕು.



**ಜಗಳೂರು ಶಾಸಕ ಬಿ. ದೇವೇಂದ್ರಪ್ಪ**

ಪಟ್ಟಣವನ್ನು ಸುಂದರವನ್ನಾಗಿಡಲು ಸಾರ್ವಜನಿಕರು ಪೌರ ಕಾರ್ಮಿಕರೊಂದಿಗೆ ಸಹಕರಿಸಬೇಕು ಎಂದರು. ಸ್ವಚ್ಚತೆಯ ಕಾಯಕ ಮಾಡುವ ಪೌರ ಕಾರ್ಮಿಕರಿಗೆ ಗೌರವ ನೀಡಬೇಕು. ನನ್ನ ಆಡಳಿತಾವಧಿಯಲ್ಲಿ ಪೌರ ಕಾರ್ಮಿಕರ ಶ್ರೇಯೋಭಿವೃದ್ಧಿಗೆ ನೆರವಾಗುವೆ ಎಂದು ಹೇಳಿದರು.

**ಅಧಿಕಾರಿಗಳಿಗೆ ತರಾಟೆ:** ಹಳೇ ಸಾರ್ವಜನಿಕ ಆಸ್ಪತ್ರೆ ಹಿಂಭಾಗ ಶವಾಗಾರದ ಸುತ್ತಲೂ ಕಲುಷಿತ ಚರಂಡಿ, ಕಸ, ತ್ಯಾಜ್ಯ ತುಂಬಿ ಕೆಟ್ಟ ವಾತಾವರಣ ಸೃಷ್ಟಿಯಾಗಿದೆ. ಇದನ್ನು ತಕ್ಷಣವೇ ಸ್ವಚ್ಛಗೊಳಿಸ ಬೇಕು ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಹಾಗೂ ಮುಖ್ಯಾಧಿಕಾರಿಗೆ ತರಾಟೆ ತೆಗದುಕೊಂಡರು.

ಪಟ್ಟಣದಲ್ಲಿ ಬಾರ್‌ಗಳ ಮುಂಭಾಗ ದಲ್ಲಿ ಜನರು ಮದ್ಯ ಸೇವಿಸಿ ಖಾಲಿ ಬಾಟಲಿ, ಲೋಟಗಳನ್ನು ಎಲ್ಲೆಂದರಲ್ಲಿ ಎಸೆಯದಂತೆ ಜಾಗೃತಿ ಮೂಡಿಸಿ ಎಂದು ಬಾರ್ ಮಾಲೀಕರಿಗೆ ತಿಳಿಸಿದರು.

ಪಟ್ಟಣದ ಮರೇನಹಳ್ಳಿ, ರಾಜೇಂದ್ರ ಪ್ರಸಾದ್ ರಸ್ತೆ, ಬಯಲು ರಂಗಮಂದಿರ, ಇಂದಿರಾ ಕ್ಯಾಂಟೀನ್, ವಿವಿಧ ರಸ್ತೆಗಳಲ್ಲಿ ಪೌರ ಕಾರ್ಮಿಕರೊಂದಿಗೆ ಕಾಲ್ನಡಿಗೆಯಲ್ಲಿ ಸಂಚರಿಸಿ ಸ್ವಚ್ಛತೆ ಕಾಪಾಡಲು ಸೂಚಿಸಿದರು.

ತಾಲ್ಲೂಕಿನ ಹನುಮಂತಾಪುರ ಗ್ರಾಮದ ಬಸವರಾಜ್ ಎಂಬ ವ್ಯಕ್ತಿ ವಿದ್ಯುತ್ ತಗುಲಿ ಸಾವನ್ನಪ್ಪಿದ್ದು, ಶಾಸಕರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರದ ಬಳಿ ಭೇಟಿ ನೀಡಿ ವೈಯಕ್ತಿಕ ರೂ. 20,000 ನೆರವು ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ಶಾಸಕರು, ಬೆಸ್ಕಾಂ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೂಡಲೇ ಸರ್ಕಾರದಿಂದ ಮೃತರಿಗೆ ಸೌಲಭ್ಯ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ಬಸ್‌ಗಳು ಸಮಯಕ್ಕೆ ಸರಿಯಾಗಿ ರಹದಾರಿಯನ್ವಯ ಸಂಚಾರ ಮಾಡಬೇಕು.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಯಾದ ಶಕ್ತಿ ಯೋಜನೆ ತಾಲ್ಲೂಕಿನ ಮಹಿಳೆಯರಿಗೆ ಸದುಪಯೋಗವಾಗಬೇಕು ಎಂದು ನಿಯಂತ್ರಣ ಅಧಿಕಾರಿಗೆ ಸಲಹೆ ನೀಡಿದರು.

ನಂತರ ಇಂದಿರಾ ಕ್ಯಾಂಟೀನ್‌ನಲ್ಲಿ ಪೌರ ಕಾರ್ಮಿಕ ಹಾಗೂ ಜನಸಾಮಾನ್ಯರೊಂದಿಗೆ ತಿಂಡಿ ಸವಿದು ಸ್ವಚ್ಛತೆ ಕಾಪಾಡಿ, ಗುಣಮಟ್ಟದ ಆಹಾರ ತಯಾರಿಸಲು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಪ.ಪಂ ಸದಸ್ಯರಾದ ಮಹಮ್ಮದ್ ಅಲಿ, ರವಿಕುಮಾರ್, ರಮೇಶ್ ರೆಡ್ಡಿ, ಮಂಜಣ್ಣ, ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಆರೋಗ್ಯ ನಿರೀಕ್ಷಕ ಖಿಫಾಯತ್, ಕಂದಾಯ ನಿರೀಕ್ಷಕ ಮೋದಿನ್, ಟಿಎಚ್‌ಓ ಡಾ.ನಾಗರಾಜ್ ಮತ್ತಿತರರು ಇದ್ದರು.

## ನಗರದಲ್ಲಿ ನಾಳೆ ಸುದರ್ಶನ ಕ್ರಿಯೆ ಶಿಬಿರ

ದಾವಣಗೆರೆ, ಜು.9- ಗುರುದೇವ ಶ್ರೀ ರವಿಶಂಕರ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಪಿ.ಜೆ. ಬಡಾವಣೆಯ ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆಯ 2ನೇ ಮಹಡಿಯಲ್ಲಿ ನಾಡಿದ್ದು ದಿನಾಂಕ 11ರಿಂದ 16 ರವರೆಗೆ ನಡೆಯಲಿದೆ. ಸಂಪರ್ಕಿಸಿ : 99005-01877, 77601-55659.

# ಪಾನಮುಕ್ತ ಸಮಾಜ ನಿರ್ಮಾಣ ವೀರೇಂದ್ರ ಹೆಗ್ಗಡೆ ಅವರ ಗುರಿ

ಮಲೇಬೆನ್ನೂರು, ಜು.9- ಪಾನಮುಕ್ತ ಸುಂದರ ಹಾಗೂ ಸದೃಢ ಸಮಾಜ ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ಡಾ. ವೀರೇಂದ್ರ ಹೆಗ್ಗಡೆ ಅವರು ಜನಜಾಗೃತಿ ವೇದಿಕೆ ಹಾಗೂ ಸಮುದಾಯದ ಸಹಯೋಗದೊಂದಿಗೆ ಮದ್ಯ ವರ್ಜನಾ ಶಿಬಿರಗಳನ್ನು ಆಯೋಜನೆ ಮಾಡುತ್ತಾ ಬಂದಿದ್ದಾರೆ ಎಂದು ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗರಾಜ್ ಹೇಳಿದರು.



ಅವರು ಶನಿವಾರ ಕುಣೆಬೆಳಕೆರೆ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಜನಜಾಗೃತಿ ವೇದಿಕೆಯ ಸಹಯೋಗದಲ್ಲಿ ಮದ್ಯವರ್ಜನಾ ಶಿಬಿರ ಹಮ್ಮಿಕೊಳ್ಳುವ ಕುರಿತು ಚರ್ಚಿಸಲು ಕರೆದಿದ್ದ ಪೂರ್ವಭಾವಿ ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜನಜಾಗೃತಿ ವೇದಿಕೆಯ ಸದಸ್ಯ ಜಿ. ಮಂಜುನಾಥ್ ಪಟೇಲ್ ಸಭೆಯನ್ನು ಉದ್ಘಾಟಿಸಿದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಬಷೀರ್ ಭಾನು, ಬೀರಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಚಂದ್ರಪ್ಪ, ಗ್ರಾಮದ ಮುಖಂಡರಾದ ಕೆ.ಸಿದ್ದಪ್ಪ, ಸತ್ತೂರು ಅಂಜಿನಪ್ಪ, ಜಿ.ಸಿ.ರುದ್ರಪ್ಪ, ಮಡಿವಾಳರ ಮಲ್ಲೇಶಪ್ಪ, ಅಡಿವೆಣ್ಣರ ಬಸವರಾಜಪ್ಪ, ಎನ್.ಡಿ.ಅಂಜಿನಪ್ಪ, ಒಕ್ಕೂಟದ ಅಧ್ಯಕ್ಷರಾದ ಅಜ್ಜೋಳ್ ವಿಜಯಕುಮಾರ್, ಉಮೇಶ್, ಸಲಗನಹಳ್ಳಿ ವಿಜಯಕುಮಾರ್, ಜಯಪ್ಪ, ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಮೇಲ್ವಿಚಾರಕರಾದ ಸಂಪತ್ ಲಕ್ಷ್ಮಿ, ಸಂತೋಷಿನಿ, ರಕ್ಷಿತಾ, ಚಂದ್ರಪ್ಪ, ಹರೀಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೆ.ಬೇವಿನಹಳ್ಳಿ ವಲಯ ಮೇಲ್ವಿಚಾರಕ ಮಾರುತಿಗೌಡ ಸ್ವಾಗತಿಸಿದರು.

## ಸಿಂಗ್ರಿಹಳ್ಳಿ ಈಡಿಗರ ಹನುಮಮ್ಮ ನಿಧನ



ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಸಿಂಗ್ರಿಹಳ್ಳಿ ಗ್ರಾಮದ ವಾಸಿ ದಿ. ಈಡಿಗರ ಅಂಜಿನಪ್ಪನವರ ಧರ್ಮಪತ್ನಿ ಶ್ರೀಮತಿ

**ಈಡಿಗರ ಹನುಮಮ್ಮ**

ಇವರು, ದಿನಾಂಕ 9.7.2023ರ ಭಾನುವಾರ ಬೆಳಿಗ್ಗೆ 9ಕ್ಕೆ ನಿಧನರಾದರು. ಮೃತರಿಗೆ 94 ವರ್ಷ ವಯಸ್ಸಾಗಿತ್ತು. ಆರು ಜನ ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.7.2023ರ ಸೋಮವಾರ ಮಧ್ಯಾಹ್ನ 12ಕ್ಕೆ ಮೃತರ ಸ್ವಗ್ರಾಮವಾದ ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು ಸಿಂಗ್ರಿಹಳ್ಳಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, : ಮೊ : 9972600805**

## ಎರಡನೇ ವರ್ಷದ ಪುಣ್ಯಸ್ಮರಣೆ



**ಶ್ರೀ ದಿ. ಕೆ.ಹೆಚ್. ಬಸವರಾಜಪ್ಪ**


(ನಿಧನ : 10.7.2021)

ಪತ್ರಕರ್ತರು, ಮಾಲೀಕರು : ಶ್ರೀ ವೀರಭದ್ರೇಶ್ವರ ಪ್ರಿಂಟಿಂಗ್ ಪ್ರೆಸ್

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ...

ಪತ್ನಿ : ಶ್ರೀಮತಿ ಅನುಸೂಯಮ್ಮ
ಶ್ರೀಮತಿ ನಿರ್ಮಲ ಕೆ.ಬಿ. ಸುರೇಶ್ ಬಾಬು,
ಶ್ರೀಮತಿ ಸುನೀತ ಟಿ.ಯು. ಮಹೇಶ್, ಚಿ. ಪ್ರಣವ್,
ಕುಂಚೂರು ವಂಶಸ್ಥರು ಹಾಗೂ ಬಂಧು-ಮಿತ್ರರು,
ಫೋ. : 95911 60520, 98446 64444

## ಹೆಚ್.ಎಂ. ಮಲ್ಲಿಕಾರ್ಜುನಯ್ಯ ನಿಧನ



ಹರಿಹರ ತಾಲ್ಲೂಕು ಎಳೆಹೊಳೆ ಗ್ರಾಮದ ವಾಸಿ ಹೆಚ್.ಎಂ. ಶ್ರೀಮತಿ ಸರ್ವಮಂಗಳಮ್ಮ, ದಿ. ಹೆಚ್.ಎಂ. ಸೋಮಶೇಖರಯ್ಯ ಇವರ ಪುತ್ರ ಹಾಲಿ ಬೆಂಗಳೂರು ವಾಸಿ ಸಾಫ್ಟ್‌ವೇರ್ ಇಂಜಿನಿಯರ್

**ಹೆಚ್.ಎಂ. ಮಲ್ಲಿಕಾರ್ಜುನಯ್ಯ**

ಇವರು ದಿನಾಂಕ 8.7.2023ರ ಶನಿವಾರ ಮಧ್ಯಾಹ್ನ 1ಕ್ಕೆ ನಿಧನರಾದರು. ಮೃತರಿಗೆ 59 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.7.2023ರ ಸೋಮವಾರ ಮಧ್ಯಾಹ್ನ 3ಕ್ಕೆ ಮೃತರ ಸ್ವಗ್ರಾಮ ಹರಿಹರ ತಾಲ್ಲೂಕು ಎಳೆಹೊಳೆ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, : ಮೊ : 98450 65761, 90082 75247**

॥ ಶ್ರೀ ಸಿದ್ದೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಚನ್ನಗಿರಿ ತಾಲ್ಲೂಕು ನಲ್ಲುದುರೆ ಗ್ರಾಮದ ವಾಸಿ

**ಶ್ರೀ ಎನ್.ಜಿ. ಮಂಜುನಾಥ**

ನಿವೃತ್ತ ಕೃಷಿ ಅಧಿಕಾರಿಗಳು

ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 03.07.2023 ನೇ ಸೋಮವಾರ ಬೆಳಗಿನ ಜಾವ 1.45ಕ್ಕೆ ನನ್ನ ಧರ್ಮಪತ್ನಿಯಾದ

**ಗೌಡ್ರ ಶ್ರೀಮತಿ ಬಿ. ಬಸಮ್ಮನವರು**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 11.07.2023ನೇ ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಶ್ರೀ ವೀರಭದ್ರೇಶ್ವರ ಸಮುದಾಯ ಭವನ, ನಲ್ಲುದುರೆ ಗ್ರಾಮದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು : ಮೃತರ ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಗೌಡ್ರ ವಂಶಸ್ಥರು, ನಲ್ಲುದುರೆ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ : 80736 54360, 99806 00999**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಪಿ.ನಾಗಣ್ಣ ನಿಧನ



ದಾವಣಗೆರೆ ರಾಜೀವ್‌ಗಾಂಧಿ ಬಡಾವಣೆ 1ನೇ ಮೇನ್, 3ನೇ ಕ್ರಾಸ್ ವಾಸಿ

**ಪಿ. ನಾಗಣ್ಣ**

ಇವರು, ದಿನಾಂಕ 9.7.2023ರ ಭಾನುವಾರ ರಾತ್ರಿ 9.30ಕ್ಕೆ ನಿಧನರಾದರು. ಮೃತರಿಗೆ 56 ವರ್ಷ ವಯಸ್ಸಾಗಿತ್ತು.

ಪತ್ನಿ, ಇಬ್ಬರು ಪುತ್ರರು, ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.7.2023ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ : 95911 45510, 87923 67144**

## ಕರೂರು ಗ್ರಾಮದ ಭರಮಪ್ಪ ನಿಧನ



ದಾವಣಗೆರೆ ಸಮೀಪದ ಕರೂರು ಗ್ರಾಮದ ವಾಸಿ ಶ್ರೀ ಕರೂರು ಭರಮಪ್ಪ ಅವರು ದಿನಾಂಕ 9-7-2023ರ ಭಾನುವಾರ ರಾತ್ರಿ 8 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10-7-2023ರ ಸೋಮವಾರ ಮಧ್ಯಾಹ್ನ 12.30ಕ್ಕೆ ಕರೂರು ಗ್ರಾಮದಲ್ಲಿ ನೆರವೇರಲಿದೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

## ನ್ಯಾಯ, ಅಧಿಕಾರ

(1ನೇ ಪುಟದಿಂದ) ಬಾಯಿ, ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಉತ್ತರ ವಲಯ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

**ಅಹಿಂದ ಮತಗಳಿಂದ ಬಹುಮತ :** ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ, ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗಗಳು ಒಟ್ಟಾಗಿ ಮತದಾನ ಮಾಡದೇ ಹೋಗಿದ್ದರೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಬಹಳ ಕಷ್ಟವಾಗಿರುತ್ತಿತ್ತು ಎಂದು ಕಾಂಗ್ರೆಸ್ ಸಾಮಾಜಿಕ ನ್ಯಾಯ ವಿಭಾಗದ ಅಧ್ಯಕ್ಷ ಡಾ. ಸಿ.ಎಸ್. ದ್ವಾರಕಾನಾಥ್ ಹೇಳಿದರು. ಆ ಸಮುದಾಯಗಳ ಬೆಂಬಲದಿಂದ ಅಷ್ಟೊಂದು ಬಹುಮತ ಪಡೆಯಲು ಸಾಧ್ಯವಾಯಿತು ಎಂದವರು ತಿಳಿಸಿದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಸೇವಾ ಮನೋಭಾವನೆಯಿಂದ ಕೂಡಿರುವ ಶಿಕ್ಷಕ ವೃತ್ತಿ

ಹೊನ್ನಾಳಿ, ಜು.9- ರಾಜಕೀಯ ವ್ಯಕ್ತಿಗಳ 5 ವರ್ಷಗಳ ಸೇವೆಗೆ ಜನ ಬೇಸರಗೊಳ್ಳುತ್ತಾರೆ. ಆದರೆ, ಶಿಕ್ಷಕರು 30 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದ ನಂತರವೂ, ಅವರನ್ನು ಪ್ರೀತಿ, ಗೌರವಗಳಿಂದ ಕಾಣುತ್ತಾರೆ. ಇದುವೇ ಶಿಕ್ಷಣದ ಶಕ್ತಿ ಎಂದು ಶಾಸಕ ಡಿ.ಜಿ. ಶಾಂತನಗೌಡ ಹೇಳಿದರು.

ತಾಲ್ಲೂಕಿನ ಗೊಲ್ಲರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 25 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತಿಯಾದ ಶಿಕ್ಷಕರಾದ ಕೆ.ಆರ್. ಗೋಣಪ್ಪ ಮತ್ತು ಕೆ.ಎಸ್. ಚಂದ್ರಪ್ಪ ಅವರನ್ನು ಹಳೆ ವಿದ್ಯಾರ್ಥಿ ಬಳಗ, ಎಸ್.ಡಿ.ಎಂ.ಸಿ., ಹಾಗೂ ಗೊಲ್ಲರಹಳ್ಳಿಯ ಶಿಕ್ಷಕರ ಬಳಗದ ವತಿಯಿಂದ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಇಂದು ಹಮ್ಮಿಕೊಂಡಿದ್ದ ಗುರುವಂದನೆ ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ ಶಿಕ್ಷಕರುಗಳನ್ನು ಸನ್ಮಾನಿಸಿ, ಗೌರವಿಸಿದ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಇದೇ ವೇಳೆ ತಮ್ಮ ಬಾಲ್ಯದ ಶಿಕ್ಷಣ ವ್ಯವಸ್ಥೆಯನ್ನು ಸ್ಮರಿಸಿಕೊಂಡ ಶಾಸಕ ಶಾಂತನಗೌಡ ಅವರು, ತಮ್ಮ ಗ್ರಾಮದಲ್ಲಿ ಶಿಕ್ಷಕ ವೃತ್ತಿಯನ್ನು ನಿರ್ವಹಿಸಿ ಸೇವೆಯಿಂದ ನಿವೃತ್ತಿಯಾಗುತ್ತಿರುವ ಶಿಕ್ಷಕರನ್ನು ಈ ರೀತಿ ಇಡೀ ಗ್ರಾಮವೇ ನಿಂತು ಅದ್ದೂರಿಯಾದ



ಬೀಳ್ಕೊಡುಗೆ ಸಮಾರಂಭ ಮಾಡುತ್ತಿರುವುದು ಎಲ್ಲಿಯೂ ನೋಡಿಲ್ಲ ಎಂದು ಶ್ಲಾಘಿಸಿದರು.

ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಅವರು ಮಾತನಾಡಿ, ತಾನೂ ಕೂಡ ಒಬ್ಬ ಶಿಕ್ಷಕನ ಮಗ ಎಂದು ಹೇಳಿಕೊಳ್ಳುವುದಕ್ಕೆ ಅತೀವ ಹೆಮ್ಮೆ ಎನಿಸುತ್ತಿದೆ. ತಾಯಿಯೇ ಮೊದಲ ಗುರು ನಂತರದಲ್ಲಿ ಭವಿಷ್ಯದ ಜೀವನ ರೂಪಿಸುವ ಶಿಲ್ಪಿ ಎಂದರೆ ಅದು ಗುರುಗಳು, ಜೀವನದಲ್ಲಿ ಮನುಷ್ಯ ಸೋಲು ಗೆಲುವುಗಳನ್ನು ಸಮನಾಗಿ ಸ್ವೀಕರಿಸುವ ಮನೋಬಲವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಇಂತಹ ಭಾವನೆ ನನ್ನಲ್ಲಿ ಬೆಳೆದು ಬಂದಿದೆ ಎಂದರೆ ಅದಕ್ಕೆ ನನಗೆ ಕಲಿಸಿದ ಗುರುಗಳೇ ಕಾರಣ ಎಂದು ಹೇಳಿದರು.

ಕಾಂಗ್ರೆಸ್‌ನ ಹಿರಿಯ ಮುಖಂಡ ವರದರಾಜಪ್ಪ ಗೌಡ, ಗ್ರಾ.ಪಂ.ಮಾಜಿ ಉಪಾಧ್ಯಕ್ಷೆ ಜಿ.ಪಿ.ಇಂದಿರಮ್ಮ, ಜಿ.ಪಂ. ಮಾಜಿ ಉಪಾಧ್ಯಕ್ಷ ಸುರೇಂದ್ರನಾಯ್ಕ, ಗ್ರಾ.ಪಂ.ಸದಸ್ಯ ನಟರಾಜ್, ದೈಹಿಕ ಶಿಕ್ಷಣಾಧಿಕಾರಿ ಈಶ್ವರಪ್ಪ ಮತ್ತಿತರರು ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಡಿ.ಎಂ.ಸಿ. ಅಧ್ಯಕ್ಷ ಕುಮಾರ್ ಎ.ಕೆ. ವಹಿಸಿದ್ದರು.

ಬಿಆರ್‌ಪಿಗಳಾದ ಜಿ.ಕೆ.ಅರುಣ್‌ಕುಮಾರ್, ಸುನೀಲ್ ಎಸ್. ಸಿಆರ್‌ಪಿ. ಗಿರೀಶ್, ಛೇರ್ಮನ್ ಹಾಲಪ್ಪ, ಗ್ರಾ.ಪಂ. ಸದಸ್ಯರಾದ ಸುಲೋಚನಮ್ಮ ಹಳದಪ್ಪ, ಮುಖಂಡ ರಮೇಶ್‌ದಾಸಳ್ಳಿ ಇದ್ದರು.


ಗಣೇಶ್ ಎಚ್. ಸ್ವಾಗತಿಸಿದರು. ಶಿಕ್ಷಕಿ ಮಂಜುಳ ವಂದಿಸಿದರು. ಶಿಕ್ಷಕ ಸುನೀಲ್ ನಿರೂಪಿಸಿದರು. ಗೊಲ್ಲರಹಳ್ಳಿ ಶಿಕ್ಷಕ ವೃಂದ, ಶ್ರೀವಿನಾಯಕ, ಶನಿಶ್ವೇರ ಸೇವಾ ಸಮಿತಿ, ಶ್ರೀ ದುರ್ಗಾಂಜನೇಯ ಸೇವಾ ಸಮಿತಿ ಪದಾಧಿಕಾರಿಗಳು, ಗ್ರಾಮಸ್ಥರು ಪಾಲ್ಗೊಂಡಿದ್ದರು.

> ಭ್ರಷ್ಟಾಚಾರ ರಹಿತ, ಕೇವಲ ಸೇವಾ ಮನೋಭಾವನೆಯಿಂದ ಮಾಡುವ ಏಕೈಕ ವೃತ್ತಿ ಎಂದರೆ ಅದು ಶಿಕ್ಷಕ ವೃತ್ತಿ. ಒಬ್ಬ ವ್ಯಕ್ತಿ ಜೀವನದಲ್ಲಿ ಎಷ್ಟೇ ದೊಡ್ಡ ವ್ಯಕ್ತಿಯಾಗಿ ಬೆಳದರೂ ಕೂಡ ಆತ ತನ್ನ ಜೀವನದಲ್ಲಿ ಬಂದು ಹೋದ, ತನಗೆ ಅಕ್ಷರ ಕಲಿಸಿದ ಗುರುಗಳನ್ನು ಮರೆಯುವುದಿಲ್ಲ.
>
> -ಡಿ.ಜಿ. ಶಾಂತನಗೌಡ, ಶಾಸಕರು

> ರಾಜಕಾರಣಿಗಳಿಗೆ ನಿವೃತ್ತಿ ಇದೆ. ಆದರೆ ಶಿಕ್ಷಕರಿಗೆ ಒಂದು ಆರ್ಥದಲ್ಲಿ ನಿವೃತ್ತಿ ಇರುವುದಿಲ್ಲ. ಕಾರಣ ಶಿಕ್ಷಕರ ಮಾರ್ಗದರ್ಶನ ನಿರಂತರ ಸಮಾಜಕ್ಕೆ ಅಗತ್ಯವಾಗುತ್ತದೆ. ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ವೃತ್ತಿ ಎಂದರೆ ಅದು ಶಿಕ್ಷಕ ವೃತ್ತಿ.
>
> -ಎಂ.ಪಿ.ರೇಣುಕಾಚಾರ್ಯ, ಮಾಜಿ ಶಾಸಕರು

# ಚಲನಶೀಲತೆ ಇದ್ದಾಗ ಮಾತ್ರ ಪ್ರಗತಿ ಸಾಧ್ಯ

## ಬೆಂಗಳೂರು 'ಸಮಾಜ ಮುಖಿ ನಡಿಗೆ' ತಂಡದ ಸಭೆಯಲ್ಲಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ



ಸಾಣೇಹಳ್ಳಿ ಜು. 9 - ಸಮಾಜ ನಿಂತ ನೀರಾಗಬಾರದು. ಅದಕ್ಕೆ ಚಲನಶೀಲತೆ ಇದ್ದಾಗ ಮಾತ್ರ ಪ್ರಗತಿ ಸಾಧ್ಯ. ನಾವು ಜಂಗಮರಾದರೆ ಸಮಾಜವೂ ಜಂಗಮವಾಗುವುದು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಿಸಿದರು.

ಇಲ್ಲಿನ ಶ್ರೀ ಶಿವಕುಮಾರ ರಂಗಮಂದಿರದಲ್ಲಿ ಬೆಂಗಳೂರಿನ 'ಸಮಾಜಮುಖಿ ನಡಿಗೆ'ಯ 50 ಜನರ ತಂಡ ಕ್ಷೇತ್ರ ವೀಕ್ಷಣೆಗಾಗಿ ಬಂದಾಗ ಆಯೋಜಿಸಿದ್ದ ಅನೌಪಚಾರಿಕ ಸಭೆಯ ಸಾನ್ನಿಧ್ಯ ವಹಿಸಿ ಸ್ವಾಮೀಜಿ ಮಾತನಾಡಿದರು.

ಸಮಾಜದಲ್ಲಿ ಬದಲಾವಣೆ ತರಬೇಕು ಎನ್ನುವ ಮಹದುದ್ದೇಶ ಈ ಸಮಾಜಮುಖಿ ನಡಿಗೆಯ ಸದಸ್ಯರದ್ದು. ಪತ್ರಿಕೆಗಳು ಸಮಾಜಕ್ಕೆ ಹಿಡಿದ ಕನ್ನಡಿ ಇದ್ದಂತೆ. ಅನೇಕ ಬಾರಿ ಸಮಾಜದ ಬದಲಾವಣೆ ಸಾಧ್ಯವೇ ಇಲ್ಲ ಎನ್ನುವ ಮನಸ್ಥಿತಿ ಉಂಟಾಗುವುದು. ಆದರೆ ಅದೇ ಸತ್ಯವಲ್ಲ. ಮನಸ್ಸು ಮಾಡಿದರೆ ಏನೆಲ್ಲವೂ ಸಾಧ್ಯ ಎನ್ನುವುದನ್ನು ಇತಿಹಾಸದಲ್ಲಿ ನೋಡಿದ್ದೇವೆ. ಹಾಗಾಗಿ ನಿರಾಶರಾಗದೆ ಜಂಗಮತ್ವವನ್ನು ಕಾಪಾಡಿಕೊಂಡು, ಆರೋಗ್ಯಯುಕ್ತ ಸಮಾಜವನ್ನು ಕಟ್ಟಲು ಬಯಸುವ ಇನ್ನೂ ಅನೇಕ ಜನ ನಮ್ಮ ಮಧ್ಯೆ ಇದ್ದಾರೆ. ಅಂಥವರನ್ನೆಲ್ಲ ಒಟ್ಟುಗೂಡಿಸಿ ಹೊಸ ಸಮಾಜವನ್ನು ಕಟ್ಟಲು ಸಾಧ್ಯ. ಅಂಥ ಪ್ರಯತ್ನಗಳಲ್ಲಿ ಸಮಾಜಮುಖಿ ನಡಿಗೆಯೂ ಒಂದು ಎಂದು ಭಾವಿಸಿದ್ದೇವೆ ಎಂದು ಹೇಳಿದರು.

ಗೊಲ್ಲಹಳ್ಳಿ ಜಾಗೃತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ್ ಬೆಳಗೆರೆ ಮಾತನಾಡಿ. ಸಮಾಜಮುಖಿ ಪತ್ರಿಕೆಯ ಓದುಗರ ಬಳಗವು 'ಸಮಾಜ ಮುಖಿ ನಡಿಗೆ' ಎನ್ನುವ ಯೋಜನೆಯನ್ನು ಹಾಕಿಕೊಂಡಿದೆ. ಅದರನ್ವಯ ಇದುವರೆಗೆ ಮೂರು ದಿನಗಳಿಗೊಂದರಂತೆ ಇದುವರೆಗೂ 14 ನಡಿಗೆಗಳನ್ನು ರಾಜ್ಯದಾದ್ಯಂತ ಮಾಡಿದೆ.

ಇಂದು 15ನೆ ನಡಿಗೆಯಾಗಿ ಸಾಣೇಹಳ್ಳಿಗೆ ಬಂದಿದೆ. ಜನರ ಹತ್ತಿರ ಹೋಗಿ ಅವರ ಕಷ್ಟ-ಸುಖಗಳನ್ನು ಅರಿತು, ಅವುಗಳಿಗೆ ಸೂಕ್ತವಾಗಿ ಸ್ಪಂದಿಸುವ, ಪ್ರತಿಕ್ರಿಯಿಸುವ ಉದ್ದೇಶ ಈ ನಡಿಗೆಯದ್ದಾಗಿದೆ.

ಈ ನಮ್ಮ ತಂಡದಲ್ಲಿ ಶಿಕ್ಷಣ, ಆರೋಗ್ಯ, ಕೃಷಿ, ನ್ಯಾಯಾಲಯ, ವ್ಯಾಪಾರ ಮೊದಲಾದ ಎಲ್ಲ ಕ್ಷೇತ್ರಗಳನ್ನು ಪ್ರತಿನಿಧಿಸುವ ಪ್ರತಿನಿಧಿಗಳಿದ್ದಾರೆ.

ಕನ್ನಡದ ಮನಸುಗಳಿಗೆ ಜಗತ್ತಿನ ದೃಷ್ಟಿಕೋನ ನೀಡುವ, ಕನ್ನಡದ ಕಂಪನ್ನು ಜಗತ್ತಿನಾದ್ಯಂತ ಹರಡುವ, ಹಳ್ಳಿಯ ಪ್ರತಿಭೆಗಳನ್ನು ಜಗತ್ತಿಗೇ ಪರಿಚಯಿಸುವ ಉದ್ದೇಶವಿದೆ ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಮಹದೇವ್, ಬೆಂಗಳೂರಿನ ಮಕ್ಕಳ ಹಕ್ಕಿನ ಹೋರಾಟಗಾರ್ತಿ ಕವಿತಾರತ್ನ ಉಪಸ್ಥಿತರಿದ್ದರು.

ಅಧ್ಯಾಪಕ ಹೆಚ್.ಎಸ್. ದ್ಯಾಮೇಶ್ ಸಾಣೇಹಳ್ಳಿ ಕ್ಷೇತ್ರದ ಪರಿಚಯ ಮಾಡಿಕೊಟ್ಟರು. ಆರಂಭದಲ್ಲಿ ಸಂಗೀತ ಶಿಕ್ಷಕ ಹೆಚ್.ಎಸ್. ನಾಗರಾಜ್ ತಬಲಾ ಸಾಥಿಯಲ್ಲಿ ಶರಣ್ ತಂಡ ವಚನಗೀತೆಗಳನ್ನು ಹಾಡಿದರು. ಪ್ರಾಥಮಿಕ ಮತ್ತು ಪ್ರೌಢಶಾಲೆಯ ಮಕ್ಕಳು ಆಕರ್ಷಕ ನೃತ್ಯ ರೂಪಕಗಳನ್ನು ನೀಡಿದರು.

ರಮೇಶ್ ಗಬ್ಬೂರು ಜಾಗೃತಗೀತೆ ಹಾಡಿದರು. ಅಧ್ಯಾಪಕಿ ಕಾವ್ಯ ಎನ್. ಆರ್. ಸ್ವಾಗತಿಸಿದರೆ, ಬಿ. ಎಸ್. ಶಿವಕುಮಾರ್ ಕಾರ್ಯಕ್ರಮ ನಡೆಸಿ ಕೊಟ್ಟರು.

# ಅತ್ತಿಗೆರೆ ಅರವಿಂದ ವಿದ್ಯಾಸಂಸ್ಥೆಗೆ ನೀರಿನ ಘಟಕ ದೇಣಿಗೆ




ದಾವಣಗೆರೆ, ಜು. 9 - ದಾವಣಗೆರೆಯ ರೌಂಡ್ ಟೇಬಲ್ 76 ವತಿಯಿಂದ ಅರವಿಂದ ವಿದ್ಯಾಸಂಸ್ಥೆಯ ಶ್ರೀಮತಿ ಚನ್ನಪ್ಪ ಶಿವಲಿಂಗಮ್ಮ ಗುರುಬಸಪ್ಪ ಪದವಿಪೂರ್ವ ಕಾಲೇಜಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆಯಾಗಿ ನೀಡುವ ಮೂಲಕ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಹಾಗೂ ಆಡಳಿತ ಮಂಡಳಿಗೆ ಸಂತೋಷ ತಂದಿದ್ದಾರೆ.

ಶುದ್ಧ ಕುಡಿಯುವ ನೀರಿನ ಘಟಕವನ್ನು ಉದ್ಘಾಟಿಸಿ ಮಾತನಾಡಿದ ರೌಂಡ್ ಟೇಬಲ್ 76ರ ಛೇರ್ಮನ್ ಸುಹಾಸ್ ದತ್ತಾತ್ರೇಯ ಅವರು, ಈ ಸಂಸ್ಥೆಯು ಉಚಿತ ಶಿಕ್ಷಣ ನೀಡುವ ಮೂಲಕ ಸಮಾಜದ ಬಡ, ಹಿಂದುಳಿದ ವರ್ಗದ ಮಕ್ಕಳಿಗೆ ನೆರವಾಗುತ್ತಿರುವುದು ಅತಿ ಸಂತೋಷದ ವಿಷಯ ಎಂದರು. ಇಂತಹ ಮಹತ್ವದ ಸಮಾಜಮುಖಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಅರವಿಂದ ವಿದ್ಯಾಸಂಸ್ಥೆಯ ಅಧ್ಯಕ್ಷ ಪ್ರೊ. ಹೆಚ್.ಚನ್ನಪ್ಪ ಪಲ್ಲಾಗಟ್ಟೆ ಹಾಗೂ ಗೌರವ ಕಾರ್ಯದರ್ಶಿ ಪ್ರೊ. ಕೆ.ಆರ್.ಸಿದ್ದಪ್ಪ ಅವರನ್ನು ಶ್ಲಾಘಿಸಿದರು.

ರೌಂಡ್ ಟೇಬಲ್‌ನ ನಿಕಟ ಪೂರ್ವ ಅಧ್ಯಕ್ಷರು ಹಾಗೂ ಅರವಿಂದ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರಾದ ಚೇತನ್ ಪಲ್ಲಾಗಟ್ಟೆ ಮಾತನಾಡಿ, ನಮ್ಮ ಟೇಬಲ್ ವತಿಯಿಂದ ಇನ್ನೂ ಹೆಚ್ಚಿನ ನೆರವನ್ನು ಕೊಡುವುದಾಗಿಯೂ, ಅದಕ್ಕಾಗಿ ಆಡಳಿತ ಮಂಡಳಿಯವರೂ ಹಣ ನೀಡುವ ಮೂಲಕ ಸಹಕರಿಸುವ ಅಗತ್ಯತೆಯನ್ನು ತಿಳಿಸಿದರು.

ರೌಂಡ್ ಟೇಬಲ್ ವತಿಯಿಂದ ಕಿರಣ್ ಎಂ. ಹಾಗೂ ಅಭಿಷೇಕ್ ಶೇಠ್ ಭಾಗವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಹೆಚ್.ಚಂದ್ರಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು.

ಉಪನ್ಯಾಸಕ ಸುಭಾಷ್ ಶಿಂಧೆ ಸ್ವಾಗತಿಸಿದರು. ಉಪನ್ಯಾಸಕ ಎನ್.ಎಸ್. ಪರಮೇಶ್ವರಪ್ಪ ವಂದಿಸಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕ ಕೆ.ಎಂ.ಬಸವರಾಜಪ್ಪ, ಸಲ್ಮಾ, ನಾಗವೇಣಿ, ಸೌಮ್ಯ, ಭೋಜರಾಜ್ ಮತ್ತಿತರರು ಭಾಗವಹಿಸಿದ್ದರು.

# ಕೊರತೆ ನೀಗಿ ಹೆಚ್ಚುವರಿ ಮಳೆ

**(1ನೇ ಪುಟದಿಂದ)** ಅಂಬಾಲಾಗಳಲ್ಲಿ ಕ್ರಮವಾಗಿ ದಾಖಲೆಯ 322.2 ಮಿ.ಮೀ. ಹಾಗೂ 224.1 ಮಿ.ಮೀ. ಮಳೆಯಾಗಿದೆ.

ಉತ್ತರಾಖಂಡ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಹರಿಯಾಣ, ಉತ್ತರ ಪ್ರದೇಶ, ಮಧ್ಯ ಪ್ರದೇಶ, ಕರಾವಳಿ ಕರ್ನಾಟಕ ಹಾಗೂ ಗುಜರಾತ್‌ಗಳಲ್ಲಿ ಧಾರಾಕಾರ ಮಳೆಯಾಗಿದೆ.

# ಯುಯುಸಿಎಂಎಸ್ ಪೋರ್ಟಲ್ ಅನುಷ್ಠಾನ ಕಡ್ಡಾಯ ಸರ್ವಾಧಿಕಾರಿ ಧೋರಣೆ

## ಎಐಡಿಎಸ್‌ಒ ಖಂಡನೆ

ದಾವಣಗೆರೆ, ಜು. 9- ಯುಯುಸಿಎಂಎಸ್ ಪೋರ್ಟಲ್ ಅನುಷ್ಠಾನ ಕಡ್ಡಾಯಗೊಳಿಸುವ ಉನ್ನತ ಶಿಕ್ಷಣ ಇಲಾಖೆಯ ಆದೇಶ ಅತ್ಯಂತ ಅಪ್ರಜಾ ತಾಂತ್ರಿಕ ಮತ್ತು ಸರ್ವಾಧಿಕಾರಿ ಧೋರಣೆಯಿಂದ ಕೂಡಿದೆ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಖಂಡಿಸಿದ್ದಾರೆ.

ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಈ ಪೋರ್ಟಲ್ ಬಂದಾಗಿನಿಂದಲೂ ಅದು ಹಲವಾರು ತಾಂತ್ರಿಕ ದೋಷಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳಿಗೆ ಉನ್ನತ ಶಿಕ್ಷಣ ಇಲಾಖೆಯೇ ನೇರ ಹೊಣೆ. ಮೊದಲಿನಿಂದಲೂ ಇದು ದೋಷಪೂರಿತವಾಗಿಯೇ ಇತ್ತು ಮತ್ತು ಆ ಕಾರಣದಿಂದ ಪರೀಕ್ಷೆಗಳು ಮತ್ತು ಫಲಿತಾಂಶಗಳು ವಿಳಂಬವಾಗುತ್ತಿದ್ದವು ಮತ್ತು ಶೈಕ್ಷಣಿಕ ವರ್ಷವೇ 6 ತಿಂಗಳಷ್ಟು ಕಾಲ ವಿಳಂಬವಾಗಿತ್ತು.

ಈಗ ಏಕಾಏಕಿ ಎಲ್ಲಾ ಕಾಲೇಜುಗಳು ಈ ಪೋರ್ಟಲ್ ಅಳವಡಿಸಲೇಬೇಕು, ಹಾಗೆ ಮಾಡದ ಶಿಕ್ಷಣ ಸಂಸ್ಥೆಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಆದೇಶ ನೀಡಿರುವುದು ಸರ್ವಾಧಿಕಾರಿ ಧೋರಣೆಯಾಗಿದೆ.

ಪೋರ್ಟಲ್ ಅನ್ನು ಒದಗಿಸಬೇಕಾದರೆ, ಅದರ ಅನುಷ್ಠಾನ ಹೇಗೆ, ಸವಾಲುಗಳು ಏನು ಮತ್ತು ತೊಂದರೆಗಳು ಏನು ಇವೆಲ್ಲವನ್ನೂ ಕೂಲಂಕುಶವಾಗಿ ಸಂಬಂಧಪಟ್ಟವರ ಜೊತೆಗೆ ಚರ್ಚಿಸಿ ಮಾಡಬೇಕಿತ್ತು, ಆದರೆ ವಾಸ್ತವದಲ್ಲಿ ಅದು ಸಾಕಷ್ಟು ಬಿಕ್ಕಟ್ಟುಗಳನ್ನು ತಂದಿತೇ ವಿನಃ ಪೋರ್ಟಲ್ ನ ಕೆಲಸ ಸರಾಗವಾಗಿ ನಡೆದಿರಲಿಲ್ಲ ಎಂಬ ಸತ್ಯಾಂಶ ಎಲ್ಲರಿಗೂ ತಿಳಿದಿದೆ. ಹಾಗಾಗಿ, ಈ ಪೋರ್ಟಲ್ ಅನ್ನು ಕಡ್ಡಾಯ ಅನುಷ್ಠಾನ ಮಾಡಬೇಕು ಎನ್ನುವ ಉನ್ನತ ಶಿಕ್ಷಣ ಇಲಾಖೆ ಹೊರಡಿಸಿರುವ ತನ್ನ ಆದೇಶವನ್ನು ಹಿಂಪಡೆಯಬೇಕು ಎಂದು ಎಐಡಿಎಸ್‌ಒ ಆಗ್ರಹಿಸುತ್ತದೆ ಎಂದು ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ.

# ಜನಪರ ಬಜೆಟ್ ಮಂಡನೆ

ಮುಖ್ಯಮಂತ್ರಿ ಸಿದ್ಧರಾಮಯ್ಯ ಮಂಡಿಸಿರುವ ಬಜೆಟ್ ಜನಪರವಾಗಿದ್ದು, ಬಡವರ ಪರವಾದ ಎಲ್ಲಾ ಗ್ಯಾರಂಟಿ ಯೋಜನೆಗಳ ಜೊತೆಗೆ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಿರುವುದು ಸಂತಸದ ವಿಚಾರವಾಗಿದೆ. ಕಳೆಗುಂದಿದ್ದ ಇಂದಿರಾ ಕ್ಯಾಂಟೀನ್ ಯೋಜನೆ ಪುನಶ್ಚೇತನಗೊಳಿಸುವುದು ಒಳ್ಳೆಯ ಕೆಲಸವಾಗಿದೆ. ಅಲ್ಪಸಂ ಖ್ಯಾತರ, ಹಿಂದುಳಿದ ವರ್ಗಗಳ, ದಲಿತರ ಪರವಾದ ಭರ ಪೂರ ಕೊಡುಗೆಗಳನ್ನು ಈ ಬಜೆಟ್‌ನಲ್ಲಿ ನೀಡಲಾಗಿದೆ.

ಕಳೆದ ಹಲವಾರು ಬಜೆಟ್‌ಗಳಲ್ಲಿ ದಾವಣಗೆರೆ ಜಿಲ್ಲೆಗೆ ಯಾವುದೇ ಯೋಜನೆ ದೊರೆಯಲಿಲ್ಲ. ಆದರೆ, ಈ ಬಜೆಟ್‌ನಲ್ಲಿ ಕೆರೆಗಳಿಗೆ ನೀರು ತುಂಬಿಸುವ ಯೋಜನೆ, ಅತ್ಯಾಧುನಿಕ ಪ್ರಯೋಗಾಲಯ, ಸಂಶೋಧನಾ ಕೇಂದ್ರ, ಅಲ್ಪ ಸಂಖ್ಯಾತರ ಕೌಶಲ್ಯ ತರಬೇತಿ ಕೇಂದ್ರ ಮಂಜೂರು ಮಾಡಿರುವುದು ಸಂತಸ ತಂದಿದೆ.



-ಪ್ರಸನ್ನ ಬೆಳಕೆರೆ,
ಸಾಮಾಜಿಕ ಕಾರ್ಯಕರ್ತ, ದಾವಣಗೆರೆ.

# ಉತ್ತರದಲ್ಲಿ ಧಾರಾಕಾರ ಮಳೆ, 19 ಸಾವು

**(1ನೇ ಪುಟದಿಂದ)** ಪ್ರದೇಶಗಳಲ್ಲಿ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿತ್ತು. ಶಾಲೆಗಳಿಗೆ ಇನ್ನೆರಡು ದಿನ ರಜೆ ಘೋಷಿಸಲಾಗಿದೆ. ರೈಲ್ವೆ ಸೇವೆಗಳ ಮೇಲೂ ಪರಿಣಾಮವಾಗಿದೆ. 17 ರೈಲುಗಳನ್ನು ರದ್ದುಗೊಳಿಸಲಾಗಿದೆ ಹಾಗೂ 12 ರೈಲುಗಳ ಮಾರ್ಗ ಬದಲಿಸಲಾಗಿದೆ.

# ಹರಪನಹಳ್ಳಿ-ಅರಸೀಕೆರೆ-ದಾವಣಗೆರೆ ಬಸ್‌ಗೆ ಚಾಲನೆ

**(1ನೇ ಪುಟದಿಂದ)** ಪಂಚಾಯಿತಿ ಮಾಜಿ ಅಧ್ಯಕ್ಷ ಲಕ್ಕಳ್ಳಿ ಹನುಮಂತಪ್ಪ, ಪುರಸಭೆ ಸದಸ್ಯರಾದ ಎಂ.ವಿ.ಅಂಜಿನಪ್ಪ, ಟಿ. ವೆಂಕಟೇಶ್, ಲಾಟಿ ದಾದಾಪೀರ್, ಗೊಂಗಡಿ ನಾಗರಾಜ್, ಮುಖಂಡರಾದ ಮಹಾಭಲೇಶ್ವರಗೌಡ, ಗಂಗಪ್ಪ, ಎಚ್. ವಸಂತಪ್ಪ, ವೈ.ಕೆ.ಬಿ.ದುರುಗಪ್ಪ, ಎಲ್.ಮಂಜ್ಯಾನಾಯ್ಕ್, ಮತ್ತೂರು ಬಸವರಾಜ್, ಹರಿಯಮ್ಮನಹಳ್ಳಿ ಶಿವರಾಜ ಪ್ರಸಾದ್ ಸೇರಿದಂತೆ ಇತರರು ಇದ್ದರು.

# ಬದುಕಿದ್ದಾಗಲೇ ಮಾತನಾಡಿಸಿ

**(1ನೇ ಪುಟದಿಂದ)** ನೋಡುತ್ತೇವೆ. ಎಲ್ಲರೂ ದೇವರಿಗೆ ಶರಣಾಗಲೇ ಬೇಕು ಎಂಬುದು ಇದರ ಅರ್ಥ ಎಂದು ಶ್ರೀಗಳು ಹೇಳಿದರು.

ಡಾ.ಜಿ.ಸಿ. ಬಸವರಾಜ್ ಅವರ ಕುರಿತ ಈ ಕೃತಿ ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಬಸವರಾಜ್ ಅವರು ಸಾಕಷ್ಟು ಸಾಧನೆ ಮಾಡಿದ್ದಾರೆ. ನಾವು ಆಡುವ ಮಾತುಗಳು ನಶಿಸಿ ಹೋಗಬಹುದು. ಆದರೆ ಬರೆದ ಕೃತಿಗಳು ಶಾಶ್ವತವಾಗಿರುತ್ತವೆ. ಬಸವರಾಜ್ ಅವರ ಕುರಿತ ಕೃತಿ ಮತ್ತೊಬ್ಬರಿಗೆ ಮಾದರಿಯಾಗುವಂತಿದೆ ಎಂದು ಹೇಳಿದರು.

ಸಾಹಿತಿ ಡಾ.ಎನ್.ಜೆ. ಶಿವಕುಮಾರ್ ಕೃತಿಯ ಬಗ್ಗೆ ಮಾತನಾಡುತ್ತಾ, ಡಾ. ಜಿಸಿ. ಬಸವರಾಜ್ ಅವರು ಸರಳ ಸಜ್ಜನಿಕೆಯ ವ್ಯಕ್ತಿ. ಹಸನ್ಮುಖಿಯಾಗಿ ಸದಾ ಲವಲವಿಕೆಯಿಂದ ಕೂಡಿದವರು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ತರಬೇತಿ ಪಡೆದು ಸಾಕಷ್ಟು ಅನುಭವ ಪಡೆದಿದ್ದಾರೆ. ಸಾಹಿತ್ಯ, ಸಾಂಸ್ಕೃತಿಕ ಲೋಕದಲ್ಲೂ ತೊಡಗಿಸಿಕೊಂಡಿರುವ ಬಹುಮುಖ ಪ್ರತಿಭೆ ಎಂದು ಬಣ್ಣಿಸಿದರು.

ಉಪನ್ಯಾಸಕ ಬಸವರಾಜ ಹನುಮಲಿ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ವೈಯಕ್ತಿಕ ಜೀವನ ಅನುಭವಿದೆ, ಮತ್ತೊಬ್ಬರ ಪ್ರಾಣ ರಕ್ಷಣೆಗೆ ಮುಂದಾಗುವ ವೈದ್ಯಸೇವೆ ಅನನ್ಯವಾದದ್ದು ಎಂದರು. ಜೆಜೆಎಂ ಮೆಡಿಕಲ್ ಕಾಲೇಜು ನಿರ್ದೇಶಕ ಡಾ. ಎಂ.ಜಿ. ರಾಜಶೇಖರ್ ಕೃತಿ ಲೋಕಾರ್ಪಣೆಗೊಳಿಸಿದರು.

ಚಿತ್ರದುರ್ಗ ಮುರುಘಾ ಮಠದ ಉಸ್ತುವಾರಿ ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಖ್ಯಾತ ವೈದ್ಯ ಡಾ.ಸಿದ್ಧಲಿಂಗಪ್ಪ ಎಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಡಾ.ಜಿ.ಸಿ. ಬಸವರಾಜ ಅವರಿಗೆ ಗೌರವ ಅಭಿನಂದನೆ ಸಲ್ಲಿಸಲಾಯಿತು. ಒಬಿಜಿ ಪ್ರಸೂತಿ ತಜ್ಞರ ಸಂಘದ ಅಧ್ಯಕ್ಷರಾದ ಡಾ.ಜಿ.ಬಿ. ಶಿಲ್ಪ ಅತಿಥಿಗಳನ್ನು ಸ್ವಾಗತಿಸಿದರು. ಸಾಫ್ಟ್‌ವೇರ್ ಇಂಜಿನಿಯರ್ ಶ್ವೇತ ಗುರುಪ್ರಸನ್ನ ವಂದಿಸಿದರು. ನಿವೃತ್ತ ಪ್ರಾಂಶುಪಾಲ ಟಿ.ಪಿ. ಜ್ಞಾನಮೂರ್ತಿ ನಿರೂಪಿಸಿದರು. ಶಿವರುದ್ರಾಚಾರ್ ಹಾಗೂ ಸಂಗಡಿಗರು ವಚನ ಗೀತೆ ಹಾಡಿದರು.

# ಸಹಭಾಗಿತ್ವದೊಂದಿಗೆ ಬಾಹ್ಯಾಕಾಶ ಬೆಳವಣಿಗೆ

**(1ನೇ ಪುಟದಿಂದ)** ಹಾಗೂ ಬಾಹ್ಯಾಕಾಶ ಡಾಟಾದ ಬೇಡಿಕೆ ಕಡಿಮೆ ಇದೆ. ಹೀಗಾಗಿ ಖಾಸಗಿ ಉದ್ಯಮಗಳು ತಮ್ಮ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯ ಹುಡುಕಾಟದಲ್ಲಿ ತೊಡಗಿವೆ.

ಈ ವಿಷಯದಲ್ಲಿ ಸ್ವಲ್ಪ ಯಶಸ್ಸು ದೊರೆಯುತ್ತಿದೆ. ಸರ್ಕಾರಿ ಸಂಸ್ಥೆಗಳಿಂದ ಬೇಡಿಕೆ ಬರುತ್ತಿದೆ ಎಂದು ಗೋಯಂಕ ಹೇಳಿದ್ದಾರೆ.

ಬೆಂಗಳೂರಿನ ಪಿಕ್ಸೆಲ್ ಕಂಪನಿಯು ಅಮೆರಿಕದ ನ್ಯಾಷನಲ್ ರಿಕೊನ್ನೈಸಾನ್ಸ್ ಕಚೇರಿಯ ಉಪಗ್ರಹ ಚಿತ್ರಗಳ ಕಾರ್ಯ ಗುತ್ತಿಗೆ ಪಡೆದಿದ್ದನ್ನು ಅವರು ಉದಾಹರಿಸುತ್ತಾರೆ.

ಜಾಗತಿಕ ಬಾಹ್ಯಾಕಾಶ ಆರ್ಥಿಕತೆಯಲ್ಲಿ ಭಾರತದ ಪಾಲು ಕಡಿಮೆ ಇದೆ. 2020ರಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತ ಕೇವಲ ಶೇ. 2.1ರಷ್ಟು ಪಾಲು ಹೊಂದಿತ್ತು. ಖಾಸಗಿ ವಲಯದ ಪ್ರವೇಶದೊಂದಿಗೆ ಈ ಪರಿಸ್ಥಿತಿ ಸುಧಾರಿಸುವ ನಿರೀಕ್ಷೆ ಇದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಖಾಸಗಿ ವಲಯವನ್ನು ಬಾಹ್ಯಾಕಾಶ ವಲಯಕ್ಕೆ ತೆರೆದಿದ್ದಾರೆ.

ಮೂರು ವರ್ಷಗಳಲ್ಲಿ 150ಕ್ಕೂ ಹೆಚ್ಚು ನವೋದ್ಯಮಗಳು ಆರಂಭವಾಗಿವೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.

# ಓಡುವ ವಯಸ್ಸಿಗೆ ತಡೆಯುಂಟೆ, ವೃದ್ಧಾಪ್ಯಕ್ಕೆ ಮದ್ದುಂಟೆ?

## ವಯಸ್ಸಾಗುವ ಪ್ರಕ್ರಿಯೆ ತಡೆಯಲು ಸಂಕೀರ್ಣತೆಯೇ ಅಡ್ಡಿ

ವಾಷಿಂಗ್ಟನ್, ಜು. 9 – ವಯಸ್ಸಾಗುವುದು ಎಂದರೇನು? ಸಮಯ ಕಳೆಯುತ್ತಾ ಹೋದಂತೆ ವಯೋಮಾನದಲ್ಲಿ ಆಗುವ ಏರಿಕೆಯೇ ವಯಸ್ಸಾಗುವುದು ಎಂದು ಸರಳವಾಗಿ ಹೇಳಬಹುದು. ಆದರೆ, ಕೆಲವರಿಗೆ ಹೆಚ್ಚು ವಯಸ್ಸಾದರೂ ಯುವಕರಂತೆ ಇರುತ್ತಾರೆ, ಇನ್ನು ಕೆಲವರು ಕಡಿಮೆ ವಯಸ್ಸಿನಲ್ಲೇ ಮುದುಕರಂತಾಗುತ್ತಾರೆ. ಹೀಗಿರುವಾಗ ವಯಸ್ಸು ಗುರುತಿಸುವುದು ಹೇಗೆ?

ಕ್ಯಾಲೆಂಡರ್ ಆಧಾರದ ಮೇಲೆ ವಯಸ್ಸು ಅಳೆಯಬೇಕೇ ಅಥವಾ ವ್ಯಕ್ತಿಗಳು ಎಷ್ಟರ ಮಟ್ಟಿಗೆ ರೋಗ, ಗಾಯಗಳು ಹಾಗೂ ಸಾವಿನ ಸಂಭವನೀಯತೆ ಎದುರಿಸುವ ಸಾಮರ್ಥ್ಯ ಹೊಂದಿರುತ್ತಾರೆ ಎಂಬುದರ ಮೇಲೆ ವಯಸ್ಸಾಗುವುದನ್ನು ಅಳೆಯಬೇಕೇ?

ವಯಸ್ಸಾಗುವುದು ಎಂಬುದಕ್ಕೆ ಬೇರೆ ಬೇರೆ ವ್ಯಾಖ್ಯಾನಗಳು ಇರಬಹುದು. ಆದರೆ, ಸಮಯ ಕಳೆದಂತೆ ರೋಗ, ಗಾಯ ಹಾಗೂ ಸಾವಿನ ಅಪಾಯಗಳು ಹೆಚ್ಚಾಗುವುದನ್ನೇ ವಯಸ್ಸಾಗುವುದು ಎಂಬುದನ್ನು ಬಹುತೇಕ ವಿಜ್ಞಾನಿಗಳು ಒಪ್ಪುತ್ತಾರೆ ಎಂದು ಅಮೆರಿಕದ ಮಿಚಿಗನ್ ಎಲನ್ ಕ್ವಾರಲ್ಸ್ ತಿಳಿಸುತ್ತಾರೆ.

**ವಯಸ್ಸು ತಡೆಯಲಾದೀತೇ?**

ವಯಸ್ಸನ್ನು ಕೇವಲ ಅಳೆಯುವುದಷ್ಟೇ ಅಲ್ಲದೇ, ವಯಸ್ಸಾಗುವುದನ್ನು ತಡೆಯುವ ಸಾಧ್ಯತೆಯ ಬಗ್ಗೆ ಹಿಂದಿನಿಂದಲೂ ವಿಜ್ಞಾನಿಗಳು ಅಧ್ಯಯನ ಮಾಡುತ್ತಲೇ ಇದ್ದಾರೆ. ಯಾವುದೇ ಒಂದು ಗುಳಿಗೆ ನೀಡಿ ವೃದ್ಧಾಪ್ಯವನ್ನು ತಡೆದೇ ಬಿಡಬಹುದು ಎನ್ನಲಾಗದು. ಏಕೆಂದರೆ ವಯಸ್ಸಾಗುವುದು ಸರಳ ಪ್ರಕ್ರಿಯೆ ಅಲ್ಲ, ಇದು ಬಹು ಅಂಶಗಳನ್ನು ಒಳಗೊಂಡಿದೆ. ವಯಸ್ಸಾಗುವ ಪ್ರಕ್ರಿಯೆ ಸಂಕೀರ್ಣವಾಗಿರುವ ಕಾರಣ ಒಂದೇ ಮದ್ದಿನಿಂದ ಪರಿಹಾರ ಸಾಧ್ಯವಾಗದು ಎಂದು ಕ್ವಾರಲ್ಸ್ ಹೇಳುತ್ತಾರೆ.

**ಜೀವಕೋಶಗಳ ಸಮಸ್ಯೆ**

ವಯಸ್ಸಾಗುವಿಕೆ ದೇಹದ ಒಳಗೆ ಆಗುವ ಬದಲಾವಣೆಯಷ್ಟೇ ಅಲ್ಲದೇ, ಪರಿಸರದಲ್ಲಿ ಆಗುವ ಬದಲಾವಣೆಗಳಿಂದಲೂ ಪ್ರಭಾವಿತವಾಗುತ್ತದೆ ಎಂದವರು ತಿಳಿಸಿದ್ದಾರೆ.

ದೇಹದಲ್ಲಿ ಟ್ರಿಲಿಯನ್‌ಗಟ್ಟಲೇ ಜೀವಕೋಶಗಳಿವೆ. ಇದು ದೇಹದ ಕಾರ್ಯಗಳನ್ನು ಮಾಡುವ ಜೊತೆಗೆ, ತಾನೂ ಸಹ ಜೀವಂತವಾಗಿರುವ ಕಾರ್ಯ ಮಾಡುತ್ತದೆ. ಆದರೆ, ಜೀವಕೋಶಗಳ ಈ ಪ್ರತಿಯೊಂದು ಕೆಲಸಕ್ಕೂ ಅಡ್ಡಿ ಇಲ್ಲವೇ ಹಾನಿ ಎದುರಾಗಬಹುದು. ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸುವುದರಲ್ಲೇ ಜೀವಕೋಶಗಳು ದಿನ ಕಳೆಯುತ್ತವೆ.

ಸಮಯ ಕಳೆಯುತ್ತಾ ಸಾಗಿದಂತೆ ದೇಹವನ್ನು ಸಮಸ್ಥಿತಿಯಲ್ಲಿ ನಿರ್ವಹಿಸುವ ಜೀವಕೋಶಗಳ ಸಾಮರ್ಥ್ಯ ಕಡಿಮೆಯಾಗುತ್ತಾ ಹೋಗುತ್ತದೆ. ದೇಹದ ಕಾರ್ಯಕ್ಷಮತೆ ಕುಂದುತ್ತಾ ಸಾಗುವುದನ್ನು ಇಲ್ಲವೇ ಹಾನಿಯಾಗುವುದನ್ನು ತಡೆಯಲು ಜೀವಕೋಶಗಳಿಗೆ ಸಾಧ್ಯವಾಗುವುದಿಲ್ಲ. ಈ ಎಲ್ಲ ವಿಷಯಗಳ ಕಾರಣದಿಂದ ವಯಸ್ಸಾಗುತ್ತದೆ. ಸಮಯ ಕಳೆದಂತೆ ಜೀವಕೋಶಗಳ ಪ್ರತಿಯೊಂದು ಕಾರ್ಯದ ಮೇಲೂ ಪರಿಣಾಮವಾಗುತ್ತದೆ ಎಂಬುದನ್ನು ದಶಕಗಳ ಅಧ್ಯಯನ ತೋರಿಸಿಕೊಟ್ಟಿದೆ.

**ಡಿ.ಎನ್.ಎ. ನಿರ್ವಹಣೆ**

ಜೀವಕೋಶಗಳಿಗೆ ವಯಸ್ಸಾದಂತೆ ಡಿ.ಎನ್.ಎ. ಹಾಗೂ ಪ್ರೋಟೀನ್‌ಗಳು ಹೇಗೆ ಬದಲಾಗುತ್ತವೆ ಎಂಬುದರ ಕಡೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಡಿ.ಎನ್.ಎ. ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವುದು ಜೀವಕೋಶದ ಪ್ರಮುಖ ಕೆಲಸವಾಗಿದೆ.

ಪ್ರೋಟೀನ್‌ಗಳು ಜೀವಕೋಶದ ಕೆಲಸಗಾರರಂತೆ. ಜೀವಕೋಶಗಳು ಹಲವಾರು ಕೆಲಸಗಳನ್ನು ನಿರ್ವಹಿಸುತ್ತವೆ. ಪ್ರೋಟೀನ್‌ಗೆ ಹಾನಿಯಾದರೆ ಅದನ್ನು ರಿಪೇರಿ ಮಾಡುವ ಇಲ್ಲವೇ ವಿಲೇವಾರಿ ಮಾಡುವ ಕೆಲಸ ಜೀವಕೋಶದಲ್ಲಿ ನಡೆಯುತ್ತದೆ. ಆದರೆ, ವಯಸ್ಸಾಗುವುದರೊಂದಿಗೆ ಈ ಸೂಕ್ಷ್ಮ ಪ್ರಕ್ರಿಯೆ ಮೇಲೆ ಪರಿಣಾಮವಾಗುತ್ತದೆ.

**ಸಂಕೀರ್ಣ ವ್ಯವಸ್ಥೆ**

ಜೀವಕೋಶದಲ್ಲಿ ನಡೆಯುವ ಕ್ರಿಯೆಗಳು, ಜೀವಕೋಶದ ಕಾರ್ಯನಿರ್ವಹಣೆ, ಅಂಗಗಳ ಕಾರ್ಯನಿರ್ವಹಣೆ ಹಾಗೂ ಪರಿಸರ ಸೇರಿಕೊಂಡು ಸಂಕೀರ್ಣವಾದ ವ್ಯವಸ್ಥೆಗೆ ಕಾರಣವಾಗುತ್ತವೆ. ಅಂಗವೊಂದು ಕಾರ್ಯನಿರ್ವಹಿಸಬೇಕಾದರೆ, ಅದರಲ್ಲಿನ ಬಹುತೇಕ ಜೀವಕೋಶಗಳು ಸರಿಯಾಗಿರಬೇಕು. ಜೀವಿಯೊಂದು ಬದುಕಬೇಕಾದರೆ, ದೇಹದ ಎಲ್ಲ ಅಂಗಗಳು ಸರಿಯಾಗಿರಬೇಕು.

ವಯಸ್ಸಾಗುತ್ತಾ ಹೋದಂತೆ ಹಲವಾರು ಹಂತಗಳಲ್ಲಿ ಸಮಸ್ಯೆ ಉಂಟಾಗಬಹುದು. ಜೀವಕೋಶದಿಂದ ಹಿಡಿದು ಜೀವಿಯವರೆಗೆ ಎಲ್ಲೆಡೆ ಸಮಸ್ಯೆ ಕಂಡು ಬರಬಹುದು.

**ವಯಸ್ಸು ತಡೆ ಕ್ರಮಗಳು**

ವಯಸ್ಸಾಗುವುದನ್ನು ತಡೆಯಲು ಯಾವುದೇ ರಾಮಬಾಣವಿಲ್ಲ. ಆದರೂ, ಕೆಲ ಪ್ರಕ್ರಿಯೆಗಳು ವಯಸ್ಸಾಗುವುದನ್ನು ನಿಧಾನ ಮಾಡುತ್ತವೆ ಎಂಬುದು ಪ್ರಯೋಗಾಲಯಗಳಲ್ಲಿ ಸಿದ್ಧವಾಗಿದೆ. ಇಲಿ, ನೊಣ ಹಾಗೂ ಮಂಗಗಳೂ ಸೇರಿದಂತೆ ಹಲವಾರು ಪ್ರಾಣಿಗಳ ಮೇಲೆ ಪ್ರಯೋಗಗಳು ನಡೆದಿವೆ.

ಪ್ರಾಣಿಗಳಲ್ಲಿ ಪೌಷ್ಠಿಕಾಂಶದ ಕೊರತೆಯಾಗದ ರೀತಿಯಲ್ಲಿ ಕ್ಯಾಲೊರಿಗಳ ಮೇಲೆ ನಿರ್ಬಂಧ ಹೇರುವುದು ಈ ರೀತಿಯ ಒಂದು ಪ್ರಯೋಗವಾಗಿದೆ. ವಿಭಜನೆಯಾಗುವುದನ್ನು ನಿಲ್ಲಿಸಿರುವ ವಯಸ್ಸಾದ ಜೀವಕೋಶಗಳನ್ನು ಸುಯೋಜಿತವಾಗಿ ನಾಶ ಮಾಡುವುದು ಮತ್ತೊಂದು ಪ್ರಯೋಗವಾಗಿದೆ.

ಆದರೆ, ಈ ಎಲ್ಲ ಪ್ರಯೋಗಗಳಲ್ಲಿಯೂ ಪೂರ್ಣ ಯಶಸ್ಸು ದೊರೆತಿಲ್ಲ. ಯಾವುದೇ ರೀತಿಯ ಮಧ್ಯ ಪ್ರವೇಶ ಮಾಡಿದರೂ ಅದು ದೇಹದ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತಲೇ ಇದೆ.

ಏಕೆಂದರೆ ವಯಸ್ಸಾಗುವುದಕ್ಕೆ ಒಂದೇ ಕಾರಣ ಇಲ್ಲ. ಇಬ್ಬರು ವ್ಯಕ್ತಿಗಳ ವಯಸ್ಸಾಗುವ ವಿಧಾನ ಒಂದೇ ರೀತಿ ಇರುವುದಿಲ್ಲ. ಅವರ ಜೀವಕೋಶಗಳೂ ಒಂದೇ ರೀತಿ ಇರುವುದಿಲ್ಲ. ಒಬ್ಬರ ಅಂಗ ರಚನೆ ಇನ್ನೊಬ್ಬರಿಗಿಂತ ನೂರಾರು ರೀತಿಯಲ್ಲಿ ಭಿನ್ನವಾಗಿರುತ್ತದೆ. ಹೀಗಾಗಿ ವಯಸ್ಸಾಗುವುದನ್ನು ತಡೆಯಲು ಒಬ್ಬರಿಗೆ ನೀಡುವ ಚಿಕಿತ್ಸೆಯನ್ನು ಇನ್ನೊಬ್ಬರಿಗೆ ಕೊಡಲಾಗದು. ಆದರೂ, ಬಹುಮುಖಿ ಕಾರ್ಯನಿರ್ವಹಣೆಯಲ್ಲಿ ತೊಡಗುವ ಜೀವಕೋಶಗಳ ಪ್ರಕ್ರಿಯೆಯನ್ನು ಗುರಿಯಾಗಿಟ್ಟುಕೊಂಡು ನಡೆಸಲಾಗುವ ಸಂಶೋಧನೆಗಳು ಸಕಾರಾತ್ಮಕ ಫಲಿತಾಂಶ ನೀಡುವ ಆಶಯ ಇದೆ. ಇದು ಜೀವನದ ಆರೋಗ್ಯ ಸುಧಾರಣೆಗೆ ನೆರವಾಗಬಹುದು. ಈ ದಿಸೆಯಲ್ಲಿ ಆಗುವ ಬೆಳವಣಿಗೆಗಳಿಂದ 'ಆಯುರಾರೋಗ್ಯ' ವೃದ್ಧಿಸಬಹುದು.


# ಮರು ವಿನ್ಯಾಸಗೊಳಿಸಿದ ಬೆಳೆ ವಿಮೆ ಯೋಜನೆ ಕಂತು ಕಟ್ಟಲು ಸೂಚನೆ

**ಚನ್ನಗಿರಿ**

ಚನ್ನಗಿರಿ,ಜು.9- 2023-24ನೇ ಸಾಲಿಗೆ ಅನ್ವಯವಾಗುವಂತೆ ಅಡಿಕೆ, ಕಾಳುಮೆಣಸು, ದಾಳಿಂಬೆ, ಮಾವು ಮತ್ತು ವೀಳ್ಯದೆಲೆ ಬೆಳೆಗಳಿಗೆ ಪ್ರಕೃತಿ ವಿಕೋಪಗಳು, ಹವಾಮಾನ ವೈಪರೀತ್ಯಗಳಾದ ಅತಿವೃಷ್ಟಿ, ಅನಾವೃಷ್ಟಿ, ಬಿರುಗಾಳಿ, ಆಲಿಕಲ್ಲು ಮಳೆ, ಪ್ರವಾಹ, ಸಿಡಿಲಿನಿಂದ ಉಂಟಾಗುವ ಬೆಂಕಿ ಅವಘಡ ಇತ್ಯಾದಿ ಕಾರಣಗಳಿಂದ ಸಂಭವಿಸಬಹುದಾದ ಬೆಳೆ ಹಾನಿಯ ನಷ್ಟದ ಪರಿಹಾರವನ್ನು ಬೆಳೆ ವಿಮೆ ಘಟಕ (ಹಳ್ಳಿ/ಗ್ರಾಮ ಪಂಚಾಯತಿ/ ಹೋಬಳಿ) ವಾರು ನಿರ್ಧರಿಸಿ ಬೆಳೆ ನಷ್ಟದ ಪರಿಹಾರ ನೀಡುವುದರ ಮೂಲಕ ರೈತರಿಗೆ ನೆರವಾಗುವುದು ಮರುವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಅಡಿಕೆ, ದಾಳಿಂಬೆ, ಮಾವು, ಕಾಳುಮೆಣಸು ಮತ್ತು ವೀಳ್ಯದೆಲೆ ಬೆಳೆಗಾರರು ವಿಮಾ ಕಂತು ಕಟ್ಟಲು 15-07-2023 ಕೊನೆಯ ದಿನವಾಗಿರುತ್ತದೆ ಹಾಗೂ ಮಾವು ಬೆಳೆಗೆ ದಿನಾಂಕ 31-07-2023 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಹೋಬಳಿ ಮಟ್ಟದ ಅಧಿಕಾರಿಗಳು ಹಾಗೂ ಈ ಕಛೇರಿಯನ್ನು ರೈತರು ಸಂಪರ್ಕಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ತಿಳಿಸಿದ್ದಾರೆ.


SMART CITY CABS, DAVANAGRE
Pickup & drop 99/- / 4 Km




above per km. Rs. 25/- waiting charges. Per hour Rs. 100/- 2-4-8-12 hours package. city srvices & out of stations Available.
School, College, Marriage & package trips
4,6,12,21,25,33,40,50 Seater Vehicles Avialable (AC / Non-AC)
08192 255555, 94811 79933, 99868 18205



ACCOMMODATION AVAILABLE FOR LEASE / RENT
Total Carpet area of 1426 Sft. in Ground Floor suitable for office/Bank or any other business purposes in Narasaraja Road [D.No.160/1 (Old); 199/1 (New)]
INTERESTED PARTIES MAY CONTACT AT:
SREE KODANDARAMADEVARU TEMPLE ASSOCIATION
#56/1,2, Hanumanthappa Buildings
Poona-Bangalore Road, DAVANGERE - 577 002.
Ph. : 94498 28834

## ಸೋಮೇಶ್ವರ ಶಾಲೆಯಲ್ಲಿ ಗುರುಪೂರ್ಣಿಮೆ



ದಾವಣಗೆರೆ, ಜು. 9- ವ್ಯಾಸ ಮಹರ್ಷಿಗಳ ಜನ್ಮ ದಿನ ಹಾಗೂ ಆಷಾಢ ಮಾಸದ ಮೊದಲ ಹುಣ್ಣಿಮೆಯ ದಿನದಂದು ನಗರದ ಶ್ರೀ ಸೋಮೇಶ್ವರ ಶಾಲೆಯಲ್ಲಿ ಗುರು ಪೂರ್ಣಿಮೆಯನ್ನು ಆಚರಿಸಲಾಯಿತು.

ಗಾಯತ್ರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಪ್ರಾಚಾರ್ಯರಾದ ಪ್ರಭಾವತಿ ಉಪಸ್ಥಿತರಿದ್ದು ಮಾತನಾಡಿದರು.

ಪೂರ್ವ ಪ್ರಾಥಮಿಕ ಹಂತದ ಮಕ್ಕಳು ವಿವಿಧ ರೀತಿಯ ಗುರುವರ್ಯರ ವೇಷಭೂಷಣ ಧರಿಸಿ ಗುರು ಒಬ್ಬ ಸರ್ವೋತ್ತಮ ಎಂಬುದನ್ನು ಸಾರಿದರೆ, ಶಾಲೆಯ 9 ಹಾಗೂ 10 ನೇ ತರಗತಿ ವಿದ್ಯಾರ್ಥಿನಿಯರು ಗುರು ಒಬ್ಬ ಸಾಕಾರಮೂರ್ತಿ ಎಂಬುದನ್ನು ತಮ್ಮ ಹಾಡಿನ ಮೂಲಕ ಮನರಂಜಿಸಿದರು. ಇನ್ನೂ 7ನೇ ತರಗತಿ ವಿದ್ಯಾರ್ಥಿನಿಯಾದ ಕು.ಶರಣ್ಯ ಎಂ.ವಿ. ಗುರುಪೂರ್ಣಿಮೆಯ ಮಹತ್ವ ಹಾಗೂ ಹಿನ್ನೆಲೆಯನ್ನು ತಿಳಿಸಿಕೊಟ್ಟರು.

ಆಡಳಿತಾಧಿಕಾರಿ ಹರೀಶ್ ಬಾಬು, ಮುಖ್ಯೋಪಾಧ್ಯಾಯರಾದ ಶ್ರೀಮತಿ ಮಾಲಾ, ಬೋಧಕ-ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

## ಬಸಾಪುರ ತರಳಬಾಳು ಶಾಲೆಯಲ್ಲಿ ಯೋಗ ದಿನಾಚರಣೆ



ದಾವಣಗೆರೆ, ಜು.9- ನಗರದ ಬಸಾಪುರದಲ್ಲಿರುವ ಶ್ರೀ ತರಳಬಾಳು ನರ್ಸರಿ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಮಕ್ಕಳಿಗೆ ವಿವಿಧ ಯೋಗಾಸನಗಳನ್ನು ಮಾಡಿಸಿ, ಅದರ ಪ್ರಯೋಜನಗಳ ಬಗ್ಗೆ ತಿಳಿಸಲಾಯಿತು. ಶಾಲಾ ಸ್ಥಳೀಯ ಸಲಹಾ ಸಮಿತಿಯವರು, ಪೋಷಕರು ಭಾಗವಹಿಸಿದ್ದರು.

## ಜಿಲ್ಲೆಯಾದ್ಯಂತ ಮುಸುಕಿನ ಜೋಳದಲ್ಲಿ ಸೈನಿಕ ಹುಳುವಿನ ಬಾಧೆ

ದಾವಣಗೆರೆ, ಜು. 9- ಜಿಲ್ಲೆಯಾದ್ಯಂತ ಮುಸುಕಿನ ಜೋಳದಲ್ಲಿ ಸೈನಿಕ (ಲದ್ದಿ) ಹುಳುವಿನ ಬಾಧೆ ಕಾಣಿಸಿಕೊಂಡಿದ್ದು, ಹುಳುಗಳು ಎಲೆಗಳನ್ನು ಕೆರೆದು ತಿನ್ನುವುದರಿಂದ ನೀಳವಾದ, ಚಿಂದಿಯಂತಾದ ರಂಧ್ರಗಳು ಕಾಣಿಸಿಕೊಳ್ಳುತ್ತವೆ. ಎಲೆ ಸುಳಿಯನ್ನು ತಿಂದು ಹಾಳು ಮಾಡುತ್ತವೆ. ಆ ಸುಳಿಯಲ್ಲಿ ತೇವದಿಂದ ಕೂಡಿದ ಕಂದು ಬಣ್ಣದ ಹಿಕ್ಕೆಗಳನ್ನು ಕಾಣಬಹುದು.

ಮೊಟ್ಟೆಗಳ ಗುಂಪು ಹಾಗೂ ಮೊದಲ ಹಂತದ ಮರಿಗಳಿರುವ ಎಲೆಗಳನ್ನು ಕಿತ್ತು ನಾಶಪಡಿಸುವುದು. ಹೊಲದಲ್ಲಿ ಅಲ್ಲಲ್ಲಿ ಕವಲೊಡೆದ ರೆಂಬೆಗಳನ್ನು ನೆಟ್ಟು ಪಕ್ಷಿಗಳನ್ನು ಆಕರ್ಷಿಸುವುದು. ಮೊಟ್ಟೆಗಳ ಪರತಂತ್ರ ಜೀವಿಯಾದ ಟ್ರೈಕೊಗ್ರಾಮ ಪ್ರೀಟಿಯೋಸಂನ್ನು ಎಕರೆಗೆ 50000 ಮೊಟ್ಟೆಗಳಂತೆ ನಿರ್ಧರಿತ ಅಂತರದಲ್ಲಿ ಬಿಡುವಂತೆ ಜಂಟಿ ಕೃಷಿ ನಿರ್ದೇಶಕರು ಸಲಹೆ ನೀಡಿದ್ದಾರೆ.

ಲದ್ದಿ ಹುಳುವಿನಿಂದ ಶೇ.10 ರಷ್ಟು ಹಾನಿಯಾಗಿದ್ದಲ್ಲಿ ಶೇ. 5 ರ ಬೇವಿನ ಕಷಾಯ (ಅಜಾಡಿರೆಕ್ಟಿನ್ 1500 ಪಿಪಿಎಂ) ವನ್ನು 5 ಮಿ.ಲೀ. ಪ್ರತಿ ಲೀಟರ್‌ಗೆ ಬೆರೆಸಿ ಸಿಂಪಡಿಸುವುದು. ಶೇ. 20 ರಷ್ಟು ಹಾನಿಯಾಗಿದ್ದಲ್ಲಿ 0.4ಗ್ರಾಂ. ಎಮಾಮೆಕ್ಟಿನ್ ಬೆನ್‌ಜೋಯೇಟ್ ಶೇ. ಎಸ್.ಜಿ. ಅಥವಾ 0.3 ಮಿ.ಲೀ. ಸ್ಪೈನೋಸಾಡ್ 4 ಎಸ್.ಸಿ. ಅಥವಾ 2 ಗ್ರಾಂ ಥೈಯೋಡಿಕಾರ್ಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. 10 ಕೆಜಿ ಅಕ್ಕಿ ಅಥವಾ ಗೋದಿ ತೌಡಿಗೆ 1 ಕೆಜಿ ಬೆಲ್ಲ ಹಾಗೂ ಸ್ವಲ್ಪ ನೀರನ್ನು ಬೆರೆಸಿಟ್ಟು ಮಾರನೇ ದಿನ 100 ಗ್ರಾಂ ಥೈಯೋಡಿಕಾರ್ಬ್ ಕೀಟನಾಶಕವನ್ನು ಮಿಶ್ರ ಮಾಡಿ ಬೆಳೆಯ ಸುಳಿಯಲ್ಲಿ ಉದುರಿಸುವಂತೆ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

## ಪಂಚಮಸಾಲಿ ಪ್ರತಿಭಾ ಪುರಸ್ಕಾರ

ದಾವಣಗೆರೆ, ಜು.9- ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಜಿಲ್ಲಾ ಘಟಕದ ವತಿಯಿಂದ 2023ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಜಿಲ್ಲೆಯ ಪಂಚಮಸಾಲಿ ಸಮಾಜದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ 'ಸ್ವಾಭಿಮಾನ ಪ್ರತಿಭಾ ಪುರಸ್ಕಾರ'ಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಶೇ. 90ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳು ಸಮಾಜದ ಕಛೇರಿಯಲ್ಲಿ ಅಥವಾ ಸಮಾಜದ ಅಂತರ್ಜಾಲ ವೆಬ್‌ಸೈಟ್ www.panchama sali.org ನಲ್ಲಿ ಅರ್ಜಿಯನ್ನು ಪಡೆದು, ನಾಳೆಯೊಳಗೆ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : ದೂರವಾಣಿ (08192) 222008.

## ನಿತ್ಯ ಯೋಗದಿಂದ ಮಾನಸಿಕ ಶಾಂತಿ



### ನಗರದ ಎ.ಆರ್.ಜಿ ಕಾಲೇಜಿನಲ್ಲಿ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಬೋರಯ್ಯ

ದಾವಣಗೆರೆ, ಜು. 9- ನಿತ್ಯ ಯೋಗದಿಂದ ಮಾನಸಿಕ ಶಾಂತಿ ಸಿಗುವುದರ ಜೊತೆಗೆ ಆಯಸ್ಸು ಮತ್ತು ಆರೋಗ್ಯ ಇಮ್ಮಡಿಗೊಳಿಸುತ್ತದೆ.

ಜಗತ್ತಿನಾದ್ಯಂತ ಜೂನ್ 21 ಯೋಗ ದಿನವೆಂದು ಆಚರಿಸಲಾಗುತ್ತದೆ. ನಮ್ಮ ಜೀವನದ ಉಸಿರಿರುವವರೆಗೂ ಆಚರಣೆಗಳನ್ನು ಮಾಡೋಣ ಮತ್ತು ಭಾರತವನ್ನು ಸದೃಢಗೊಳಿಸೋಣ ಎನ್ನುವ ಮಾತುಗಳನ್ನು ಪ್ರಾಂಶುಪಾಲ ಡಾ. ಜಿ.ಬಿ. ಬೋರಯ್ಯ ತಿಳಿಸಿದರು.

ನಗರದ ಎ.ಆರ್.ಜಿ. ಕಾಲೇಜಿನಲ್ಲಿ ಕಳೆದ ವಾರ ಏರ್ಪಡಿಸಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳ ಕಾಲ ಋಷಿ, ಮುನಿಗಳು ಯೋಗ ಮತ್ತು ಧ್ಯಾನದಿಂದ ಬದುಕಿದ್ದರು. ಪಂಚಭೂತಗಳು ನಮ್ಮ ದೇಹದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಲೌಖಿಕ ಜಗತ್ತಿನಲ್ಲಿ ಎಲ್ಲವನ್ನು ಬಳಸಿಕೊಂಡು, ಕೊನೆಯವರೆಗೂ ರೋಗರುಜಿನಗಳಿಂದ ಮುಕ್ತರಾಗಿ ಸಮಚಿತ್ತದ ಮನಸ್ಸನ್ನು ಹೊಂದುವುದರ ಮೂಲಕ ನಮ್ಮ ದೇಹವನ್ನು ಸಾರ್ಥಕಪಡಿಸಿಕೊಳ್ಳಬಹುದು ಎಂದರು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕ ಗಣೇಶ, ಯೋಗದ ಮಹತ್ವ ಮತ್ತು ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಬಗ್ಗೆ ಮಾತನಾಡಿದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ ಅನಿತಕುಮಾರಿ, ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ. ಹೆಚ್.ಆರ್. ತಿಪ್ಪೇಸ್ವಾಮಿ, ಕ್ರೀಡಾ ವಿಭಾಗದ ಸಂಚಾಲಕ ಪ್ರೊ ಆನಂದ, ಎನ್.ಸಿ.ಸಿ. ಲೆಪ್ಟಿನೆಂಟ್ ಪ್ರೊ. ರಮೇಶ್ ಪೂಜಾರ, ಗ್ರಂಥಾಲಯ ವಿಭಾಗದ ಡಾ. ಚಮನ್‌ಸಾಬ್, ಮತ್ತು ಪ್ರೊ. ರಶ್ಮಿ ಪಿ, ಅಧೀಕ್ಷಕ ಜಿ.ಆರ್. ಕರಿಬಸಪ್ಪ, ಸಲ್ಮಾ, ಕವಿತಾ ಪಾಟೀಲ, ಬೇಬಿ ಅಮೀನಾ ಮೊದಲಾದವರು ಉಪಸ್ಥಿತರಿದ್ದರು.

ಅಶ್ವಿನಿಬಾಯಿ, ಪಲ್ಲವಿ ಅವರು ಯೋಗಾಸನದ ವಿವಿಧ ಆಸನಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಟ್ಟರು.

## ಸಹ ಶಿಕ್ಷಕ ಹುದ್ದೆಗೆ ಮಾಜಿ ಸೈನಿಕರಿಂದ ಅರ್ಜಿ ಆಹ್ವಾನ

ದಾವಣಗೆರೆ, ಜು.9- ಚಿತ್ರದುರ್ಗ ದಲ್ಲಿರುವ ಶ್ರೀ ಕಾಲಭೈರವ ವಸತಿ ಪ್ರೌಢಶಾಲೆಯಲ್ಲಿ ಖಾಲಿ ಇರುವ ಸಹ ಶಿಕ್ಷಕ ಹುದ್ದೆಗೆ ಮಾಜಿ ಸೈನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಮಾಜಿ ಸೈನಿಕರ ಮೀಸಲಾತಿಯಡಿಯಲ್ಲಿ (ಬಿಂದು-40) ಖಾಲಿ ಇರುವ ಸಹ ಶಿಕ್ಷಕ ಹುದ್ದೆಗೆ ಬಿ.ಎ. ಬಿ.ಇಡಿ. ವಿದ್ಯಾರ್ಹತೆ ಪಡೆದಿರುವ ಮಾಜಿ ಸೈನಿಕ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿದ್ದು, ಮಾಜಿ ಸೈನಿಕರ ಮೂಲ ದಾಖಲೆಯೊಂದಿಗೆ ಅರ್ಜಿಯನ್ನು ಇದೇ ದಿನಾಂಕ 13ರಂದು ಮಧ್ಯಾಹ್ನ 1 ಗಂಟೆಯೊಳಗಾಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಕಛೇರಿಗೆ ಖುದ್ದಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಕಛೇರಿಯ ದೂ.08182-220925ಗೆ ಸಂಪರ್ಕಿಸಬಹುದೆಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಅರಣ್ಯದಲ್ಲಿ ಕುರಿ ಮೇಯಿಸಲು ಅನುಮತಿಗಾಗಿ ಮನವಿ



ದಾವಣಗೆರೆ, ಜು.9 - ಮಳೆಗಾಲ ಪ್ರಾರಂಭವಾದ ಹಿನ್ನೆಲೆಯಲ್ಲಿ ಅಲೆಮಾರಿ ಕುರಿಗಾಯರುಗಳಿಗೆ ಅರಣ್ಯ ಪ್ರದೇಶದಲ್ಲಿ ಕುರಿ ಮೇಯಿಸಲು ಅನುಮತಿ ನೀಡಬೇಕೆಂದು ದಾವಣಗೆರೆಯಲ್ಲಿ ರಾಜ್ಯ ಅಲೆಮಾರಿ ಕುರುಬರ ಕುರಿಗಾಹಿಗಳ ಸಂಘದ ರಾಜ್ಯಾಧ್ಯಕ್ಷ ಎಸ್.ಎಸ್. ಗಿರೀಶ್ ನೇತೃತ್ವದಲ್ಲಿ ಅರಣ್ಯ ಸಚಿವರಿಗೆ ಮನವಿ ಸಲ್ಲಿಸಿದರು.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಖಾಸಗಿ ಕಾರ್ಯಕ್ರಮದ ಪ್ರಯುಕ್ತ ಕಳೆದ ವಾರ ನಗರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಮನವಿ ಸಲ್ಲಿಸಲಾಯಿತು.

ಮಳೆಗಾಲ ಆರಂಭ ಹಿನ್ನೆಲೆಯಲ್ಲಿ ಹೊಲ, ಗದ್ದೆಗಳಲ್ಲಿ ಬಿತ್ತನೆ ಕಾರ್ಯ ಆರಂಭವಾಗಿದೆ ಹೀಗಾಗಿ ಮೇವು ಸಿಗದೆ ಕಾರಣ ಕುರಿಗಳನ್ನು ಮೇಯಿಸಲು ತೊಂದರೆಯಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ ಅರಣ್ಯ ಪ್ರದೇಶದಲ್ಲಿ ಕುರಿಗಳನ್ನು ಮೇಯಿ ಸಲು ಹೋದರೆ ಅರಣ್ಯ ಸಿಬ್ಬಂದಿ ಕುರಿ ಗಾಹಿಗಳ ಮೇಲೆ ಹಲ್ಲೆಯಂತಹ ಪ್ರಕರಣ ಬೆಳಕಿಗೆ ಬಂದಿವೆ.

ಹೀಗಾಗಿ ಮಳೆಗಾಲ ಮುಗಿಯುವವರೆಗೂ ಅಲೆಮಾರಿ ಕುರಿಗಾಯಿಗಳು ಅರಣ್ಯ ಪ್ರದೇಶಗಳಲ್ಲಿ ಕುರಿ ಮೇಯಿಸಲು ಮತ್ತು ಕುರಿಗಾಹಿಗಳು ಗುಡಾರ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಲಾ ಯಿತು. ಇದರಿಂದ ಕುರಿ ಹಿಕ್ಕಿ ಅರಣ್ಯ ಪ್ರದೇಶದಲ್ಲಿ ಬೀಳುವುದರಿಂದ ಅರಣ್ಯ ಪ್ರದೇಶವು ಕೂಡ ಫಲವತ್ತಾಗುತ್ತದೆ ಮತ್ತು ಯಾವುದೇ ಮರ ಅಥವಾ ಗಿಡಗಳಿಗೆ ಹಾನಿಯಾಗದಂತೆ ಕುರಿ ಮೇಯಿಸುತ್ತೇವೆ ಹೀಗಾಗಿ ಅನುಮತಿ ನೀಡುವಂತೆ ರಾಜ್ಯ ಅಲೆಮಾರಿ ಕುರುಬರ ಕುರಿಗಾಹಿಗಳ ಸಂಘದಿಂದ ಅರಣ್ಯ ಸಚಿವರಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಸಚಿವರು ಕೂಡ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಕಪ್ಪ, ಖಜಾಂಚಿ ದೀಪಕ್ ಜೋಗಪ್ಪನವರ್, ಕಾರ್ಯದರ್ಶಿ ಶ್ರೀನಿವಾಸ್ ಮೌರ್ಯ, ಪ್ರಸನ್ನ ಬೆಳಕೆರೆ, ನಲ್ಕುಂದ ಬಸವರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಅಹವಾಲು ಸ್ವೀಕಾರ

ದಾವಣಗೆರೆ, ಜು. 9- ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪೂರೆ ಅವರು ನಾಡಿದ್ದು ದಿನಾಂಕ 12 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ನಗರದ ಪ್ರವಾಸಿ ಮಂದಿರದಲ್ಲಿ ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಸಾರ್ವಜನಿಕರು ತಮ್ಮ ದೂರು ಹಾಗೂ ಅಹವಾಲುಗಳನ್ನು ಸಲ್ಲಿಸಬಹುದು. ನ್ಯಾಯಾಲಯದಲ್ಲಿ ವಿಚಾರಣೆ ಬಾಕಿ ಇದ್ದರೆ ಅಂತಹ ದೂರುಗಳನ್ನು ಸ್ವೀಕರಿಸಲಾಗುವುದಿಲ್ಲ.

## ಸರ್ಕಾರಿ ಶಾಲೆಗಳಿಗೇ ಮಕ್ಕಳನ್ನು ಸೇರಿಸಿ



### ಹೊನ್ನಾಳಿ ತಾಲೂಕು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮನ್ವಯ ಸಮಿತಿ ಉಪಾಧ್ಯಕ್ಷ ಕೋರಿ ಯೋಗೀಶ್ ಕುಳಗಟ್ಟೆ ಮನವಿ

ಹೊನ್ನಾಳಿ, ಜು.9- ಹೊನ್ನಾಳಿ ತಾಲೂಕು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮನ್ವಯ ಸಮಿತಿ ಉಪಾಧ್ಯಕ್ಷರನ್ನಾಗಿ ಕೋರಿ ಯೋಗೀಶ್ ಕುಳಗಟ್ಟೆ ಅವರನ್ನು ನೇಮಕ ಮಾಡಲಾಗಿದೆ ಎಂದು ಎಸ್.ಡಿ.ಎಂ.ಸಿ. ತಾಲ್ಲೂಕು ಅಧ್ಯಕ್ಷ ಎ. ಎಸ್. ಶಿವಲಿಂಗಪ್ಪ ತಿಳಿಸಿದರು.

ತಾಲ್ಲೂಕಿನ ಸಾಸ್ವೆಹಳ್ಳಿ ಕೆ.ಪಿ.ಎಸ್. ಶಾಲೆಯಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ನೂತನವಾಗಿ ಎಸ್.ಡಿ.ಎಂ.ಸಿ. ಉಪಾಧ್ಯಕ್ಷರಾಗಿ ಆಯ್ಕೆಯಾದ ಕೋರಿ ಯೋಗೀಶ್ ಕುಳಗಟ್ಟೆ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಪ್ರತಿಭಾವಂತರಾಗಿದ್ದು, ಖಾಸಗಿ ಶಾಲಾ ಶಿಕ್ಷಕರನ್ನು ಮೀರಿಸುವಂತಹ ಎಲ್ಲಾ ರೀತಿಯ ಅರ್ಹತೆ ಮತ್ತು ಪ್ರತಿಭೆಯು ಇರುತ್ತದೆ, ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿರುವುದಕ್ಕೆ ಸರಿಯಾದ ಕಾರಣ ಕಂಡು ಹಿಡಿದು ಪರಿಹಾರವಾಗಿ ಉತ್ತಮ ಶಿಕ್ಷಣ, ಕಲಿಕಾ ವಾತಾವರಣವನ್ನು ಸರ್ಕಾರಿ ಶಾಲಾ ಶಿಕ್ಷಕರು ಒದಗಿಸಿಕೊಟ್ಟಿದ್ದೇ ಆದರೆ ಸರ್ಕಾರಿ ಶಾಲೆಗಳಿಗೆ ಮಕ್ಕಳ ಸಂಖ್ಯೆ ಕೊರತೆ ಸಮಸ್ಯೆ ಇರುವುದಿಲ್ಲ ಎಂದು ಹೇಳಿದರು.

ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಲಭ್ಯಗಳಿದ್ದು, ಪೋಷಕರು ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ದಾಖಲಿಸುವ ಮೂಲಕ ಸರ್ಕಾರಿ ಶಾಲೆಗಳ ಉಳಿವಿಗಾಗಿ ಸಹಕರಿಸಬೇಕು ಎಂದು ಮನವಿ ಮಾಡಿದರು.

ರಾಜ್ಯ ಎಸ್.ಡಿ.ಎಂ.ಸಿ. ಸಂಘಟನಾ ಕಾರ್ಯದರ್ಶಿ ಎಲ್. ರುದ್ರನಾಯ್ಕ ಮಾತನಾಡಿ, ಸರ್ಕಾರಿ ಶಾಲೆಗಳು ಉಳಿದು ಬೆಳೆಯಬೇಕು. ಖಾಸಗಿ ಶಾಲೆಗಳ ಪೈಪೋಟಿಯಿಂದ ಆಯಾ ಗ್ರಾಮದ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರುವಂತೆ ಮಾಡಬೇಕು. ಶಾಲೆಗಳಲ್ಲಿ ಸಿಗುವ ಉಚಿತ ಪಠ್ಯಪುಸ್ತಕ, ಮಧ್ಯಾಹ್ನದ ಬಿಸಿ ಊಟ, ಶೂ ಭಾಗ್ಯ, ಸ್ಕಾಲರ್ ಶಿಪ್ ಬಗ್ಗೆ ಜನರಲ್ಲಿ ಜಾಗೃತಿ ಎಸ್.ಡಿ.ಎಂ.ಸಿ. ಸದಸ್ಯರು ಮೂಡಿಸಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಸದಸ್ಯರಾದ ರಂಜಿತ ಉಜ್ಜಿನಮಠ, ಶಿವಮೂರ್ತಿ, ಮಲ್ಲಿಕಾರ್ಜುನ್, ಶಿಕ್ಷಕರಾದ ಈಶ್ವರಪ್ಪ, ಪದ್ಮಶ್ರೀ, ಅನುಷ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ನಾಳೆ ರಾಷ್ಟ್ರಮಟ್ಟದ ವಿಚಾರ ಸಂಕಿರಣ

ದಾವಣಗೆರೆ, ಜು.9- ಆರ್.ಎಲ್. ಕಾನೂನು ಕಾಲೇಜು ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯದ ಅಪರಾಧಿಕ ಮತ್ತು ವಿಧಿ ವಿಜ್ಞಾನ ವಿಭಾಗದ ವತಿಯಿಂದ 'ಫೋರೆನ್ಸಿಕ್ ಎವಿಡೆನ್ಸ್ ಇನ್ ಕೋರ್ಟ್ ಟ್ರಯಲ್ಸ್' ವಿಷಯದ ಬಗ್ಗೆ ರಾಷ್ಟ್ರಮಟ್ಟದ ವಿಚಾರ ಸಂಕಿರಣವನ್ನು ನಾಡಿದ್ದು ದಿನಾಂಕ 11 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ದಾವಿವಿ ಕುಲಪತಿ ಡಾ. ಬಿ.ಡಿ. ಕುಂಬಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ನಿರ್ದೇಶಕ ಪ್ರೊ. ದಿನೇಶ್ ರಾವ್, ನಿವೃತ್ತ ಪ್ರಾಧ್ಯಾಪಕ ಡಾ. ನಟರಾಜ್ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳುವರು. ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್ ಅಧ್ಯಕ್ಷತೆ ವಹಿಸುವರು.

ಅದೇ ದಿನ ಸಂಜೆ 5 ಗಂಟೆಗೆ ನಡೆಯುವ ಸಮಾರೋಪ ಸಮಾರಂಭವನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಉದ್ಘಾಟಿಸುವರು. ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್ ಅಧ್ಯಕ್ಷತೆ ವಹಿಸುವರು. ನಿವೃತ್ತ ಪ್ರಾಧ್ಯಾಪಕ ಡಾ. ನಟರಾಜ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು.


**ಸೈಟ್ ಮಾರಾಟಕ್ಕೆ**
(ರಿಜಿಸ್ಟರ್ ಖರ್ಚು+ಕಮೀಷನ್ ಸೇರಿ)
ಕಿರಣ್ ಭೂಸನೂರ್ (ಏಜೆಂಟ್)
97315-63409
20X30 ಪೂರ್ವ, J.H. ಪಟೇಲ್ (25 ಲಕ್ಷ)
ಕರ್ನಾಟಕ ಗೃಹ ಮಂಡಳಿ 20X30
ಪೂರ್ವ (15 ಲಕ್ಷ) ಉತ್ತರ (12 ಲಕ್ಷ)

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಪೂರ್ವ-ಉತ್ತರ ಕಾರ್ನರ್ 30x43 ಪೂರ್ವ, 40x60 ಪಶ್ಚಿಮ, ಜೆ.ಹೆಚ್ ಪಟೇಲ್ ಬಡಾವಣೆಯ ಪೋದಾರ್ ಸ್ಕೂಲ್ ಸುತ್ತ-ಮುತ್ತ ಹೊಸ ಬಡಾವಣೆಯಲ್ಲಿ 30x50 ಪೂರ್ವ 60 ಅಡಿ ರಸ್ತೆಗೆ ಹೊಂದಿಕೊಂಡು ಅಕ್ಕ-ಪಕ್ಕ, 30x40 ಪಶ್ಚಿಮ ಅಕ್ಕ-ಪಕ್ಕ,
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ ಡಬಲ್ ಬೆಡ್ ರೂಂ ಮನೆಗಳು ಆಫೀಸ್‌ಗೆ ಯೋಗ್ಯವಿರುವ ಮೂರು ಬೆಡ್ ರೂಂ ಮನೆ ಮೊದಲನೇ ಬಸ್ ಸ್ಟ್ಯಾಂಡ್ ಹತ್ತಿರ ಇಂಡಿಪೆಂಡೆಂಟ್ ಹೌಸ್, ವಿದ್ಯಾನಗರ ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆ, ವಿನಾಯಕ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಕೆ.ಬಿ. ಬಡಾವಣೆ ಸೈಟು ಮಾರಾಟಕ್ಕಿದೆ**
ಕೆ.ಬಿ. ಬಡಾವಣೆ 5ನೇ ಕ್ರಾಸ್, ಬ್ರಷ್‌ಮ್ಯಾನ್ ಹತ್ತಿರ, 15x44 ಅಳತೆಯ ಬಿಟ್ ಆಫ್ ಲ್ಯಾಂಡ್ 6 ಅಡಿ ಅಂದರೆ 15x50 ಒಟ್ಟು ಅಳತೆಯ ದಕ್ಷಿಣ ದಿಕ್ಕಿನ ಸೈಟು ಮಾರಾಟಕ್ಕಿದೆ. ಮಾಲೀಕರು :
99861 46807

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಜಯನಗರ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು, ಜಮೀನುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಮಳಿಗೆಗಳು ಬಾಡಿಗೆ ಇವೆ**
ಜಿಲ್ಲಾ ಕ್ರೀಡಾಂಗಣದ ಹತ್ತಿರ ಒಂದನೇ ಮಹಡಿಯಲ್ಲಿ 10 ಅಡಿx25 ಅಡಿ ಅಳತೆಯ ಒಂದು ಮಳಿಗೆ ಮತ್ತು 2ನೇ ಮಹಡಿಯಲ್ಲಿ 25 ಅಡಿx25 ಅಡಿ ಅಳತೆಯ ಒಂದು ಮಳಿಗೆ ಬಾಡಿಗೆ ಇದೆ. ಸಂಪರ್ಕಿಸಿ :
94498 30566

**ಬಾಡಿಗೆಗೆ ಇದೆ**
ದಾವಣಗೆರೆ ಅಶೋಕ ರಸ್ತೆಯಲ್ಲಿ ನ್ಯೂ ಹೋಟೆಲ್ ಭೀಮ ನೆಲ ಮಳಿಗೆ ಬಾಡಿಗೆಗೆ ಇದೆ.
ಅಳತೆ : 35x62. ಸಂಪರ್ಕಿಸಿ.
90082 27199

**ಮನೆಗಳು ಮಾರಾಟಕ್ಕಿವೆ**
# 24, ಶ್ರೀ ದೇವರಾಜ ಅರಸ್ ಬಡಾವಣೆ, "ಬಿ" ಬ್ಲಾಕ್, 2ನೇ ಹಂತ, ಎಸ್.ಪಿ. ಆಫೀಸ್ ಎದುರುಗಡೆ ರಸ್ತೆ, ದಾವಣಗೆರೆಯಲ್ಲಿರುವ ಗ್ರೌಂಡ್ ಫ್ಲೋರ್, 2 ಮತ್ತು ಫಸ್ಟ್ ಫ್ಲೋರ್ 2
94489 63300

**EC / ಇಸಿ, E-swathu, Khatha Change Building Licence & Other Property Documents**
96118-66449

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 1BHK, 2BHK, ಸಿಂಗಲ್ ಬಾತ್ ರೂಂ ಮನೆ ಬಾಡಿಗೆಗೆ ಇದೆ. ಸಿದ್ದವೀರಪ್ಪ ಬಡಾವಣೆ, 3ನೇ ಕ್ರಾಸ್, ದಾವಣಗೆರೆ.
(ಸಸ್ಯಹಾರಿ ಕುಟುಂಬದವರಿಗೆ ಮಾತ್ರ)
99005 47475

**ಕಂಪನಿಗಳಿಗೆ ತಕ್ಷಣ ಬೇಕಾಗಿದ್ದಾರೆ**
SSLC, PUC, ITI, Diploma, Degree, ಪಾಸ್ / ಫೇಲ್.
ನೇರ ನೇಮಕಾತಿ.
ಸಂಬಳ : 18000/- ದಿಂದ 70000/-.
ವಸತಿ, ಊಟದ ವ್ಯವಸ್ಥೆ ಇದೆ.
96862 20858

**ಜಮೀನು ಮಾರಾಟಕ್ಕಿದೆ**
ಮಾನಹಳ್ಳಿಯಲ್ಲಿ 2 ಎಕರೆ ತೆಂಗಿನ ತೋಟ 3 ಎಕರೆ ಗದ್ದೆ ಒಟ್ಟು 5 ಎಕರೆ ದಾವಣಗೆರೆಯಿಂದ 6 ಕಿಲೋಮೀಟರ್.
ಹರೀಶ್
98861 45736, 80734 67637

**ಆತಿಥ್ಯ ರೆಸ್ಟೋರೆಂಟ್**
ಶುದ್ಧ ತಾಜಾ ಮಸಾಲಾ ದೋಸೆ ಹಿಟ್ಟು ದೊರೆಯುತ್ತದೆ.
6366104640

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಹಾಗೂ ಹೆಲ್ಪರ್‌ಗಳಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ. ಡಿಗ್‌ಜಾಮ್ ಲೇಡಿಸ್‌ವೇರ್ ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
89518 96908

**ತಕ್ಷಣ ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆಯರು ಪಾರ್ಟ್ ಟೈಂ ಕೆಲಸಕ್ಕೆ, ಅಂಗಡಿಯಲ್ಲಿ ಸೇಲ್ಸ್ ಗರ್ಲ್ ಮಹಿಳೆಯರು ಬೇಕಾಗಿದ್ದಾರೆ.
ಮೊ. : 88614 38237

**HOUSE FOR RENT**
2 BHK North facing with Borewell & Muncipal water and parking facility available at 11th Main, Opp. Indoor Stadium, S.S. Layout A Block.
AHMED 94481 34006

**2 BHK HOUSE FOR RENT/LEASE**
near podar international in J.H. Patel Badavane, Davangere.
95358 41058, 88617 11072

**ದತ್ತು ಸ್ವೀಕಾರ ಪ್ರಮಾಣ ಪತ್ರ**
ಕಾಳಪ್ಪ ಎಂ.ಎನ್. ಬಿನ್ ನಿಂಗಪ್ಪ 50 ವರ್ಷ, ಶ್ರೀಮತಿ ಮಂಜಮ್ಮ ಕೋಂ ಕಾಳಪ್ಪ 35 ವರ್ಷ, ವಾಸ ಮಿಟ್ಲಕಟ್ಟೆ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ ವಾಸಿಯಾದ ನಾವು ನಮ್ಮಗಳ ಮಗನಾದ ಕುಮಾರಸ್ವಾಮಿ.ಕೆ ಇವನು ದ್ವಿತೀಯ ಪಿ.ಯು.ಸಿ. ಎಸ್.ಎಲ್.ಪಿ.ಯು. ಕಾಲೇಜು ದಾವಣಗೆರೆ ಇಲ್ಲಿ ವ್ಯಾಸಂಗ ಮಾಡುತ್ತಿದ್ದು, ನಮ್ಮ ಮಗನನ್ನು ನಾವುಗಳು ಸ್ವ ಇಚ್ಛೆಯಿಂದ ಒಂದನೇ ಪ್ರಮಾಣಕರ್ತರ ಖಾಸಾ ಸಹೋದರನಾದ ನಾಗರಾಜ್ ಎಂ.ಎನ್. ಬಿನ್ ನಿಂಗಪ್ಪ ಇವರಿಗೆ ಸಂತಾನವಿಲ್ಲದ ಪ್ರಯುಕ್ತ ನಮ್ಮ ಮಗನಾದ ಕುಮಾರಸ್ವಾಮಿ.ಕೆ. ವಯಸ್ಸು 18 ವರ್ಷ ಇವನನ್ನು ಕಾನೂನು ಪ್ರಕಾರ ದತ್ತು ನೀಡಿರುತ್ತೇವೆ. ಸದರಿ ದತ್ತು ಪತ್ರದ ಮೂಲಕ ನಮ್ಮ ಮಗನ ಶಾಲಾ ದಾಖಲೆಯಲ್ಲಿ ನಮ್ಮಗಳ ಹೆಸರಿಗೆ ಬದಲಾಗಿ ದತ್ತು ಪಡೆದಿರುವ ನಾಗರಾಜ್ ಎಂ.ಎನ್. ಮತ್ತು ಪತ್ನಿಯಾದ ಶ್ರೀಮತಿ ಮಂಜಮ್ಮ ಇವರುಗಳ ಹೆಸರುಗಳನ್ನು ನಮೂದು ಮಾಡಲು ನಮ್ಮಗಳ ಸಂಪೂರ್ಣ ಒಪ್ಪಿಗೆ ಇರುತ್ತದೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.
ಕಾಳಪ್ಪ ಎಂ.ಎನ್.

**COMMERCIAL FOR RENT**
Old P.B. Road, Beside Shrigandha Lodge, Davangere.
Ground Floor-800 Sq.ft.
1st Floor - 4000 Sq.ft.
2nd Floor - 4000 Sq.ft.
Terrace Floor-4000 Sq.ft.
Basement - 4000 Sq.ft.
Contact :
94480 28103

**ಸುವರ್ಣಾವಕಾಶ**
ಕುಕ್ಕಿಂಗ್ ಟ್ರೈನಿಂಗ್ ಆಗಿ ಬೆಸ್ಟ್ ಹೋಟೆಲ್ಸ್ ನಲ್ಲಿ ಕುಕ್ಕಿಂಗ್ ಜಾಬ್ ಮಾಡಲು ಅವಕಾಶ
Gents & Ladies ಎಲ್ಲರಿಗೂ
Call : 81475 47421

**PART TIME JOBS**
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ
(ಕೋರಿಯರ್ ಸೌಲಭ್ಯವಿದೆ)
91487 33213

**ಮಾರಾಟಕ್ಕಿದೆ**
ದಾವಣಗೆರೆ, ಹರಪನಹಳ್ಳಿ ಮುಖ್ಯ ರಸ್ತೆಯಲ್ಲಿ ಮಾಗಾನಹಳ್ಳಿ ಹತ್ತಿರ 10 ಗುಂಟೆ ಜಮೀನು ಹಾಗೂ ಕಂಚಿಕೇರಿ ಹತ್ತಿರ ಜಮೀನು ಮಾರಾಟಕ್ಕಿದೆ.
99726 75759

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಸಂಬಳ ಸಂಬಳ
8000-11000
+91 88845 95873
+91 87920 48458

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ.
89048 09492

**ಸ್ಲೀಪಿಂಗ್ ಪಾರ್ಟ್ನರ್ ಬೇಕಾಗಿದ್ದಾರೆ**
ನಮ್ಮ ಟ್ರೇಡಿಂಗ್ ಬ್ಯುಸಿನೆಸ್ ನಲ್ಲಿ ಹೂಡಿಕೆ ಮಾಡಿ, ಪ್ರತಿ ತಿಂಗಳು ಸ್ಥಿರ ಹಾಗೂ ಉತ್ತಮ ಲಾಭ ಗಳಿಸಿ.
76767 50280

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**Finance Advisor**
Full Times Job's Female.
Job Role Telecaller
Work time : 9.30AM to 6.30 PM & every Sunday holiday.
Salary : 6,000 to 10,000 +Incentives.
Qualification : 10th to 12 PUC or Degree.
Age Limit : 19 to 29.
Freshers & experience call or whatsapp
77959 44991, 96201 50544

**WANTED**
LADY TEACHERS
1) Head Masters - 2 Post.
2) B.Sc, B.Ed - 2 Post.
S.R.P Group of Institution
17tj Cross, Anjaneya Badavane, Davanagere-04.
91645 05229, 97439 24203, 91136 31266

**ಹಿರಿಯರ ನಾಗರಿಕ ಆರೈಕೆ ಕೇಂದ್ರ**
ವಯೋವೃದ್ಧರನ್ನು ಮತ್ತು ಅನಾರೋಗ್ಯ ಪಿಡೀತ ಬೆಡ್ ರಿಡನ್ ಪೇಷೆಂಟ್‌ಗಳನ್ನು ನಮ್ಮಲ್ಲಿಯೇ, ಇರಿಸಿಕೊಂಡು ಊಟ, ವಸತಿಯೊಂದಿಗೆ ಅವರ ಹೆಚ್ಚಿನ ಆರೈಕೆ ಮಾಡಲಾಗುವುದು.
63635 85792

**WANTED**
Om Dental Care `Ram & Co Circle' Davanagere.
1) BDS Dentist
2) Attender
Contact :
90669 93738

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಹೋಂ ನರ್ಸಿಂಗ್ ಸರ್ವೀಸ್ ಹೆಲ್ತ್‌ಕೇರ್ ಮಹಿಳೆಯರು & ಪುರುಷರು**
ಸ್ನಾನ, ಡೈಪರ್ ಚೇಂಜ್ 1/2 ಗಂಟೆ 1,2ರವರೆಗೂ ಗಂಟೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಸಿಗುತ್ತಾರೆ. ಬೇಕಾದವರು ಕರೆ ಮಾಡಿ ವಯಸ್ಸಾದ ಜೇಂಟ್ಸ್ & ಲೇಡಿಸ್ ಇವರಿಗೆ ಬೇಕಾದವರು ಕರೆ ಮಾಡಿ. ಕೆಲಸಕ್ಕೆ ಬೇಕಾದವರು ಈ ನಂಬರಿಗೆ ಕರೆ ಮಾಡಿ. 24 ಗಂಟೆ ನಮಗೆ ಕಲಸಕ್ಕೆ ಮಹಿಳೆಯರು, ಪುರುಷರು ಬೇಕಾದವರು ಈ ನಂಬರಿಗೆ ಕರೆ ಮಾಡಿ. ಹೆಚ್ಚಿನ ಮಾಹಿತಿಗಾಗಿ ಈ ನಂಬರಿಗೆ ಕರೆ ಮಾಡಿ.
ಶಿಲ್ಪಾ 91644 93271

**ಅಡಿಕೆ ಸಸಿಗಳಿಗಾಗಿ ಸಂಪರ್ಕಿಸಿರಿ**
ಫೋ. :99866 17127

**ವಿಶೇಷ ತರಬೇತಿ**
ವಿಶೇಷ ಚೇತನ-ದಿವ್ಯಾಂಗ, ವಾಕ್-ಶ್ರವಣ ಸಮಸ್ಯೆ, ದೃಷ್ಟಿ ಸಮಸ್ಯೆಯ ಮಕ್ಕಳಿಗೆ ನುರಿತ ತರಬೇತುದಾರ ಶಿಕ್ಷಕರಿಂದ ವಿಶೇಷ ತರಬೇತಿ ನೀಡಲಾಗುತ್ತದೆ. ಜ್ಞಾನಧಾರೆ ಪುನರುತ್ಥಾನ ವಿದ್ಯಸಂಸ್ಥೆ (ರಿ) ಸಂಪರ್ಕಿಸಿ.
95903 80251, 63616 66308
(ಹಾಸ್ಟೆಲ್ ವ್ಯವಸ್ಥೆ ಇರುತ್ತದೆ.)

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಲಕ್ಷ್ಮಿ ಗ್ಯಾಸ್ ಏಜೆನ್ಸಿ
ಓಲ್ಡ್ ಪಿ.ಬಿ. ರೋಡ್, ಹರಿಹರ - 577601.
ಫೋ. : 08192 240125
78992 02555

**ನಂ.1. ವಶೀಕರಣಂ**
ಕನ್ನಡ, ತೆಲುಗು, ಹಿಂದಿ ಭಾಷೆಯಲ್ಲಿ ಭವಿಷ್ಯ, ಸ್ತ್ರೀ-ಪುರುಷರ ಎಲ್ಲಾ ರೀತಿಯ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಶ್ರೀ ಲಕ್ಷ್ಮಿಕಾಂತ್ ಗುರೂಜಿ, ಆಂಧ್ರಪ್ರದೇಶ ಲಾಯರ್ ರಸ್ತೆ, ದಾವಣಗೆರೆ.
9740064163

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

**2BR HOUSE FOR RENT**
in 1st Floor, Anjaneya Badavane, 6th cross. Ph. 94484 54760 and # 3683/9, Anjaneya Badavane, 6th cross, is for Sale. for Rs. 1.85cr. Intrested Please Contract :
94484 54760

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000ರೂ ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

# ಸಾಲುಮರದ ವೀರಾಚಾರಿ ಹೆಸರಿನಲ್ಲಿ ಅಧ್ಯಯನ ಕೇಂದ್ರ ತೆರೆಯಲು ಸಚಿವರಿಗೆ ಮನವಿ



ದಾವಣಗೆರೆ, ಜು.9- ಪರಿಸರ ಸಂರಕ್ಷಣೆ ವೇದಿಕೆ ದಾವಣಗೆರೆ ಘಟಕದ ವತಿಯಿಂದ ಪರಿಸರ ಪ್ರೇಮಿ ಸಾಲುಮರದ ವೀರಾಚಾರಿಯವರ ಹೆಸರಿನಲ್ಲಿ ಅಧ್ಯಯನ ಕೇಂದ್ರ ತೆರೆಯಲು ಅರಣ್ಯಜೀವಿ ಪರಿಸ್ಥಿತಿ ಹಾಗೂ ಪರಿಸರ ಕಲ್ಯಾಣ ಇಲಾಖೆ ಸಚಿವ ಈಶ್ವರ ಖಂಡ್ರೆಯವರಿಗೆ ಮನವಿ ಮಾಡಿದ್ದಾರೆ.

ಹರಿಹರ ತಾಲ್ಲೂಕಿನ ಮಿಟ್ಲಕಟ್ಟಿ ಗ್ರಾಮದ ಸಾಲುಮರದದ ವೀರಾಚಾರಿಯವರು ಸುಮಾರು 7 ಕಿ.ಮೀ. ದೂರದವರೆಗೆ ರಸ್ತೆ ಬದಿಯಲ್ಲಿ ಸಾವಿರಾರು ಗಿಡಗಳನ್ನು ನೆಟ್ಟು ಹೆಮ್ಮರವನ್ನಾಗಿಸಿ ಸಮಾಜಕ್ಕೆ ದೊಡ್ಡ ಕೊಡುಗೆ ನೀಡಿದ್ದು, ಇದರ ಜೊತೆಗೆ ರಾಜ್ಯದ ತುಂಬೆಲ್ಲಾ ಸಂಚರಿಸಿ ಹಲವಾರು ಕಡೆ ಸಾವಿರಾರು ಗಿಡಗಳನ್ನು ನೆಟ್ಟು ಜಾಗೃತಿ ಮೂಡಿಸಿದ್ದಾರೆ. ಇದನ್ನು ಗಮನಿಸಿ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ಅವರಿಗೆ ನೀಡಿ ಗೌರವಿಸಿದೆ.

ಇತ್ತೀಚೆಗೆ ಇವರು ಬಡ ಜನರಿಗೆ ನ್ಯಾಯಬೆಲೆ ಅಂಗಡಿ ಯಲ್ಲಿ ನ್ಯಾಯವಾದ ರೀತಿಯಲ್ಲಿ ಪಡಿತರ ಅಕ್ಕಿ ದೊರೆತಿಲ್ಲವೆಂದು ಕಾನೂನಿನ ಮುಖಾಂತರ ಹೋರಾಟ ನಡೆಸಿ, ನ್ಯಾಯ ಸಿಗದಿದ್ದರೆ ನೇಣಿಗೆ ಶರಣು ಎಂದು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರು. ಇದನ್ನು ಗಮನಿಸಿ, ಜಿಲ್ಲೆಯಲ್ಲಿ 10 ಎಕರೆಗಿಂತ ಹೆಚ್ಚಿನ ಸ್ಥಳದಲ್ಲಿ ದಿವಂಗತ ಸಾಲುಮರದ ವೀರಾಚಾರಿಯವರ ಹೆಸರಿನಲ್ಲಿ ಅಧ್ಯಯನ ಕೇಂದ್ರ ಮಾಡಿ, ಅದರಲ್ಲಿ ಪರಿಸರ, ಪ್ರಾಣಿ, ಪಕ್ಷಿ ಜೀವ ವ್ಯವಸ್ಥೆ ಬಗ್ಗೆ ಮಕ್ಕಳಿಗೆ ವಿಶೇಷ ಶಿಕ್ಷಣ ಸಿಗುವಂತೆ ಮಾಡುವುದಕ್ಕಾಗಿ ಅಧ್ಯಯನ ಕೇಂದ್ರ ಆರಂಭಿಸುವಂತೆ ಈ ಮೂಲಕ ಈಶ್ವರ ಖಂಡ್ರೆಯವರಿಗೆ ಮನವಿ ಮಾಡಿದ್ದಾರೆ.

# ಕಥಾ ಶೈಲಿ, ವಿನ್ಯಾಸದಲ್ಲಿ ಯಾವುದೂ ಅಂತಿಮವಲ್ಲ

ದಾವಣಗೆರೆ, ಜು.9- ವಸ್ತು, ಪಾತ್ರ, ಭಾಷೆ, ನಿರೂಪಣೆಯ ಒಟ್ಟು ಮೊತ್ತವೇ ಒಂದು ಉತ್ತಮ ಕಥೆ ಎಂದು ಡಾ. ಎಚ್. ಎಸ್. ಸತ್ಯನಾರಾಯಣ ಅಭಿಪ್ರಾಯ ಪಟ್ಟರು.

ವೀರಲೋಕ ಬುಕ್ಸ್ ಮತ್ತು ಸಿದ್ಧಗಂಗಾ ಶಾಲೆಯ ಸಹಯೋಗದಲ್ಲಿ ನಗರದಲ್ಲಿ ನಡೆಯುತ್ತಿರುವ ದೇಸಿ ಜಗಲಿ ಕಥಾ ಕಮ್ಮಟದಲ್ಲಿ ಕಥೆಯ ವಸ್ತು ಮತ್ತು ವಿನ್ಯಾಸ ಕುರಿತು ಮಾತನಾಡಿದರು.

ಮಾಸ್ತಿ, ತೇಜಸ್ವಿ, ಲಂಕೇಶ್, ಅನಂತ ಮೂರ್ತಿ, ಶಾಂತಿನಾಥ ದೇಸಾಯಿ ಮುಂತಾದ ಕನ್ನಡದ ಶ್ರೇಷ್ಠ ಕಥೆಗಾರರದು ಒಂದೊಂದು ಶೈಲಿ, ವಿನ್ಯಾಸವಿತ್ತು. ಯಾವುದೂ ಅಂತಿಮ ವಲ್ಲ. ಹೊಸ ತಲೆಮಾರಿನ ಕಥೆಗಾರರಲ್ಲಿ ಹಲವು ಪ್ರಯೋಗಶೀಲತೆಗಳು ನಡೆದಿವೆ.

ಸಂಕೀರ್ಣವಾದ ವಸ್ತುವನ್ನು ಸರಳಗೊಳಿಸಬಾರದು ಸರಳವಾದ ವಸ್ತುವನ್ನು ಸಂಕೀರ್ಣಗೊಳಿಸಬಾರದು ಎಂಬುದು ಲಂಕೇಶರ ಅಭಿಪ್ರಾಯವಾಗಿತ್ತು. ತೇಜಸ್ವಿಯವರು ತಮ್ಮ ಸುತ್ತಲಿನ ಸಣ್ಣ ಸಣ್ಣ ಸಂಗತಿಗಳನ್ನು ಕಥೆಯನ್ನಾಗಿಸಿ, ಓದುಗರಲ್ಲಿ ಕುತೂಹಲ, ಆಸಕ್ತಿ ಮೂಡಿಸುವಂತೆ ಬರೆಯುತ್ತಿದ್ದರು. ಅವರ 'ಕೃಷ್ಣೇಗೌಡನ ಆನೆ' ಭಾರತೀಯ ಸಾಹಿತ್ಯದ ಹತ್ತು ವರ್ಷಗಳ ಅವಧಿಯಲ್ಲಿ ಬಂದಂತಹ ಶ್ರೇಷ್ಠ ಕಥೆಯಾಗಿತ್ತು ಎಂದರು.




ದೇಸಿ ಜಗಲಿ ಕಥಾ ಕಮ್ಮಟದಲ್ಲಿ ಡಾ. ಸತ್ಯನಾರಾಯಣ

ಬರಹಗಾರನಿಗೆ ಪರಂಪರೆಯನ್ನು ಅನುಸರಿಸಲು ಸವಾಲುಗಳಿರುವಂತೆ ಅಘೋಷಿತ ಜವಾಬ್ದಾರಿಗಳೂ ಇರುತ್ತವೆ. ದೇವರಾಜ ಅರಸು ಉಳುವವನೇ ಭೂಮಿ ಒಡೆಯ ಕಾನೂನು ಜಾರಿಗೊಳಿಸಲು ಕಾರಂತರ 'ಚೋಮನ ದುಡಿ' ಕಾದಂಬರಿ ಪ್ರೇರಣೆಯಾಗಿತ್ತು ಎಂದು ಸತ್ಯನಾರಾಯಣ ತಿಳಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಪತ್ರಕರ್ತ - ಸಾಹಿತಿ ಬಿ.ಎನ್. ಮಲ್ಲೇಶ್ ಮಾತನಾಡಿ, ಕಥಾ ಪರಂಪರೆಗೆ ಬಹಳ ದೊಡ್ಡ ಇತಿಹಾಸವಿದೆ. ಮಾಸ್ತಿ, ಗೊರೂರು, ಲಂಕೇಶ್ ಇನ್ನೂ ಅನೇಕ ಹಿರಿಯ ಕಥೆಗಾರರು ಕಥಾ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ನಮ್ಮ ಕಾಲದಲ್ಲಿ ಕಥಾ ಸ್ವರೂಪಕ್ಕೆ ಪ್ರಭಾವಿತರಾಗಿ ನಾನು ಕೂಡ ಕಥೆಗಳನ್ನು ಬರೆದಿದ್ದುಂಟು. ದಾವಣಗೆರೆ ವಲಯದಲ್ಲಿ ಈ ಅಪರೂಪದ ಕಥಾ ಕಮ್ಮಟವನ್ನು ವೀರಲೋಕ ಮತ್ತು ಇಂದ್ರಕುಮಾರ್, ಫೈಜ್ನಟ್ರಾಜ್ ಹಾಗು ಪಾಪುಗುರು ಈ ಮೂವರು ಸೇರಿ ಆಯೋಜಿಸಿ ಮಹತ್ವದ ಕೆಲಸ ಮಾಡಿದ್ದಾರೆ. ಈ ಕಮ್ಮಟಗಳು ಅಕ್ಷರಗಳನ್ನು ಮುರಿದು ಕಟ್ಟುವುದು ಇಲ್ಲ, ಕಟ್ಟಿ ಮುರಿಯುವುದು ಹೇಗೆ ಎಂಬುದನ್ನು ಹೇಳಿಕೊಡುತ್ತವೆ ಎಂದರು.

ಹಿರಿಯ ಕಥೆಗಾರ ಬಾ.ಮ. ಬಸವರಾಜಯ್ಯ ಸಮಾರೋಪ ನುಡಿಗಳನ್ನಾಡುತ್ತಾ, ಕಥೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬದ ಕೊಂಡಿಗಳು, ಅವು ಎಂದಿಗೂ ನಮ್ಮನ್ನು ಅಂಟಿಕೊಂಡೇ ಇರುತ್ತವೆ. ಆದರೆ ನಾವು ಕಥೆಗಾರರಾಗಿ ಅದರ ಒಳಹುಗಳನ್ನು ಸೂಕ್ಷ್ಮವಾಗಿ ಗಮನಿಸಿ ಕಥೆ ಬರೆಯಬೇಕೆಂದರು.

ಕಥೆಗಾರರಾದ ಸದಾಶಿವ ಸೊರಟೂರು, ಇಂದ್ರಕುಮಾರ್, ಫೈಜ್ ನಟರಾಜ್ ಭಾಗವಹಿಸಿದ್ದರು. ಕಮ್ಮಟದಲ್ಲಿ ನಾನು ಮೆಚ್ಚಿದ ಕಥೆ ಕುರಿತು ಶಿಬಿರಾರ್ಥಿಗಳೊಂದಿಗೆ ಚರ್ಚೆ, ಸಂವಾದಗಳು ನಡೆದವು. ಪಾಪುಗುರು ಮತ್ತು ನಾಗರಾಜ ಸಿರಿಗೆರೆ ಕಮ್ಮಟವನ್ನು ನಿರ್ವಹಿಸಿದರು.

# ಜೈನಮುನಿ ಹತ್ಯೆಗೆ ಶ್ರೀ ರಂಭಾಪುರಿ ಜಗದ್ಗುರುಗಳ ಖಂಡನೆ



ದಾವಣಗೆರೆ, ಜು.9- ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ಗ್ರಾಮದ ಜೈನಮುನಿ ಕಾಮಕುಮಾರ ನಂದಿ ಮಹಾರಾಜರ ಬರ್ಬರ ಹತ್ಯೆಯನ್ನು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ತೀವ್ರವಾಗಿ ಖಂಡಿಸಿದ್ದಾರೆ.

ನಗರದ ಶ್ರೀಮದ್ ಅಭಿನವ ರೇಣುಕ ಮಂದಿರದಲ್ಲಿ ಇಂದು ಪತ್ರಿಕಾ ಹೇಳಿಕೆ ನೀಡಿರುವ ಜಗದ್ಗುರುಗಳು, ಅಹಿಂಸಾ ಮಾರ್ಗದಲ್ಲಿ ಸಾಗುತ್ತಿದ್ದ ಮತ್ತು ತಮ್ಮ ಕೈಯ್ಯಿಂದ ಬಡ ಜನರಿಗೆ ಉಪಕಾರ ಮಾಡುತ್ತಿದ್ದ ಜೈನಮುನಿ ಕಾಮಕುಮಾರ ನಂದಿ ಮುನಿಗಳ ಅಮಾನುಷ ಹತ್ಯೆ ಇಡೀ ನಾಗರಿಕ ಪ್ರಪಂಚ ತಲೆ ತಗ್ಗಿಸುವಂತಹ ಘಟನೆಯಾಗಿದೆ ಎಂದಿದ್ದಾರೆ.

ಮಾನವೀಯತೆ ಇಲ್ಲದ ದುಷ್ಟಶಕ್ತಿಗಳು ಈ ಕೃತ್ಯ ಎಸೆಗಿದ್ದು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯನ್ನು ಸರ್ಕಾರ ವಿಧಿಸುವಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕೆಂದು ಬಯಸಿದ ಜಗದ್ಗುರುಗಳು, ಧಾರ್ಮಿಕ ಮತ್ತು ಸಾಮಾಜಿಕ ಕಳಕಳಿಯಿಂದ ಕಾರ್ಯ ನಿರ್ವಹಿಸುವವರಿಗೆ ಸರ್ಕಾರ ರಕ್ಷಣೆ ಕೊಡಬೇಕೆಂದು ಒತ್ತಾಯಪಡಿಸಿದ್ದಾರೆ. ಅಲ್ಲದೇ ಇಂತಹ ಘಟನೆ ಮುಂದೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆಂದರು.

ಇದೇ ಸಂದರ್ಭದಲ್ಲಿ ಪಶ್ಚಿಮ ಬಂಗಾಲದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳಲ್ಲಿ ಸಂಘರ್ಷ ಉಂಟಾಗಿ 12 ಜನರು ಸಾವಿಗೀಡಾಗಿದ್ದು ನೋವಿನ ಸಂಗತಿ. ರಾಜಕೀಯ ಅಧಿಕಾರ ಪಡೆಯಲು ವ್ಯಾಪಕವಾದ ಸಂಘರ್ಷಗಳು ಇತ್ತೀಚೆಗೆ ಹೆಚ್ಚೆಚ್ಚು ನಡೆಯುತ್ತಿರುವುದು ಒಳ್ಳೆಯದಲ್ಲ. ರಾಜಕೀಯ ಧುರೀಣರು ಉದ್ರೇಕ ಭಾವನೆಗಳಿಂದ ಆಗುವ ಅನಾಹುತಕ್ಕೆ ಅವಕಾಶ ಕೊಡದೇ ಜನ ಸಮುದಾಯ ಪರಸ್ಪರ ಶಾಂತಿ, ಸಾಮರಸ್ಯದಿಂದ ಬಾಳಲು ಶ್ರಮಿಸಬೇಕೆಂದು ತಿಳಿಸಿದ್ದಾರೆ.

# ಮಲೇಬೆನ್ನೂರು : ಲಯನ್ಸ್ ಕ್ಲಬ್‌ನಿಂದ ವನಮಹೋತ್ಸವ



ಮಲೇಬೆನ್ನೂರು, ಜು.9- ಇಲ್ಲಿನ ಲಯನ್ಸ್ ಕ್ಲಬ್ ವತಿಯಿಂದ ಪಟ್ಟಣದ ಡಾ. ರಾಜ್‌ಕುಮಾರ್ ಬಡಾವಣೆಯಲ್ಲಿ ಗಿಡಗಳನ್ನು ನೆಡುವ ಮೂಲಕ ವನಮಹೋತ್ಸವ ಆಚರಿಸಲಾಯಿತು.

ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್, ಕಾರ್ಯದರ್ಶಿ ಸಿರಿಗೆರೆ ಸಿದ್ದಪ್ಪ, ಖಜಾಂಚಿ ಭರಮಳ್ಳಿ ಮಂಜುನಾಥ್, ಲಯನ್ಸ್ ವಿದ್ಯಾಸಂಸ್ಥೆಯ ಅಧ್ಯಕ್ಷ ಬಿ.ಚಿದಾನಂದಪ್ಪ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಎನ್.ಜಿ.ಶಿವಾಜಿ ಪಾಟೀಲ್, ಓ.ಜಿ.ರುದ್ರಗೌಡ್ರು, ಪುರಸಭೆ ಸದಸ್ಯ ಬೆಣ್ಣೆಹಳ್ಳಿ ಸಿದ್ದೇಶ್, ಬಸವ ಬಳಗದ ಅಧ್ಯಕ್ಷ ವೈ.ನಾರೇಶಪ್ಪ, ಓ.ಜಿ.ಕುಮಾರ್, ಉಡೇದರ ಸಿದ್ದೇಶ್, ಬೆಣ್ಣೆಹಳ್ಳಿ ಹನುಮೇಶ್ (ಬಾಬು), ಬಟ್ಟೆ ಅಂಗಡಿ ವಿಶ್ವ, ಅಂಗನವಾಡಿ ಕಾರ್ಯಕರ್ತೆ ಮಂಜುಳಾ ಸೇರಿದಂತೆ ಬಸವ ಬಳಗ, ಅಕ್ಕನ ಬಳಗ ಮತ್ತು ಕದಳಿ ಮಹಿಳಾ ವೇದಿಕೆಯ ಸದಸ್ಯರು ವನಮಹೋತ್ಸವದಲ್ಲಿ ಭಾಗವಹಿಸಿದ್ದರು.

# ಬಜೆಟ್‌ನಲ್ಲಿ ಬಿಸಿಯೂಟ ತಯಾರಕರನ್ನು ಕಡೆಗಣಿಸಿದ ಕಾಂಗ್ರೆಸ್ ಸರ್ಕಾರ



ದಾವಣಗೆರೆ, ಜು. 9 - ಹೊಳೆ ದಾಟಿದ ಮೇಲೆ ಅಂಬಿಗನನ್ನು ಮರೆತಂತೆ ರಾಜ್ಯ ಚುನಾವಣೆ ನಂತರ ಕಾಂಗ್ರೆಸ್ ಸರ್ಕಾರ ಬಿಸಿಯೂಟ ತಯಾರಕರನ್ನು ಕಡೆಗಣಿಸಿದೆ ಎಂದು ಎಐಟಿಯುಸಿ ಸಂ ಯೋಜಿತ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡ ರೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೂತನ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಶಾಲೆಗಳಲ್ಲಿ ಅಡುಗೆ ಕೆಲಸ ಮಾಡುತ್ತಿರುವ ಒಂದು ಲಕ್ಷದ ಇಪ್ಪತ್ತೊಂದು ಸಾವಿರ ಬಿಸಿಯೂಟ ತಯಾರಕರಿಗೆ ವೇತನ ಹೆಚ್ಚಿಸದೆ ಸರ್ಕಾರ ವಂಚಿಸಿದೆ. 2023ರ ಕರ್ನಾಟಕ ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಪ್ರಿಯಾಂಕಾ ಗಾಂಧಿಯವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಚುನಾವಣಾ ಪ್ರಚಾರದಲ್ಲಿ ಕರ್ನಾಟಕ ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಲ್ಲಿ ಆರನೇ ಗ್ಯಾರಂಟಿಯಾಗಿ ಕ್ರಮವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ, ಆಶಾ ಕಾರ್ಯಕರ್ತೆಯರಿಗೆ ವೇತನ ಹೆಚ್ಚಿಸುವುದಾಗಿ ಘೋಷಣೆ ಮಾಡಿದ್ದರು. ಅದರಂತೆ ಬಿಸಿಯೂಟ ತಯಾರಕರಿಗೂ ಮಾಸಿಕ 6,000 ರೂ. ವೇತನ ಕೊಡುವುದಾಗಿ ಘೋಷಿಸಿದ್ದರು. ಆದರೆ ರಾಜ್ಯದಲ್ಲಿ ದುಡಿಯುವ ಮಹಿಳೆಯರ ಮತ ಪಡೆದು, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ದುಡಿಯುವ ಮಹಿಳೆಯರಾದ ಬಿಸಿಯೂಟ ತಯಾರಕರನ್ನು ಕಡೆಗಣಿಸಿ ವಂಚನೆ ಎಸಗಿದೆ, ರಾಜ್ಯದ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವ ಎಸ್.ಸಿದ್ದರಾಮಯ್ಯನವರು ಕೂಡಲೇ ಬಿಸಿಯೂಟ ತಯಾರಕರಿಗೆ 6000 ರೂಪಾಯಿಗೆ ವೇತನ ಹೆಚ್ಚಿಸಬೇಕೆಂದು ಬಿಸಿಯೂಟ ತಯಾರಕರ ಫೆಡರೇಷನ್ ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ.

ದುಡಿಯುವ ಮಹಿಳೆಯರನ್ನು ಸುಳ್ಳು ಹೇಳಿ ವಂಚಿಸಿದರೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಫೆಡರೇಷನ್ ರಾಜ್ಯ ಅಧ್ಯಕ್ಷ ಕಾಂ. ಹೊನ್ನಪ್ಪ ಮರೆಮ್ಮನವರ್ ಮತ್ತು ರಾಜ್ಯ ಖಜಾಂಚಿ ಕಾಂ. ರುದ್ರಮ್ಮ ಬೆಳಗೆರೆ ಮತ್ತು ಇತರೆ ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

# ಇಂದು ಜೈನ ಸಮುದಾಯದಿಂದ ಡಿಸಿಗೆ ಮನವಿ

ಪ್ರಸ್ತುತ ಜೈನ ಧರ್ಮ ಅಪಾಯದಲ್ಲಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯ ಸಮೀಪ ಹಿರೆಕೋಡಿಯಲ್ಲಿ ಜೈನಮುನಿ ಕಾಮಕುಮಾರ ನಂದಿ ಮಹಾರಾಜರ ಬರ್ಬರ ಹತ್ಯೆಯಿಂದ ಜೈನ ಸಮಾಜ ಆಘಾತಗೊಂಡಿದೆ. ಜೈನ ಮುನಿಗಳಿಗೆ ರಕ್ಷಣೆ ಇಲ್ಲವಾಗಿದೆ. ಇದರಿಂದ ಇತರೆ ಜೈನ ಮುನಿಗಳು ಇದೀಗ ಅಪಾಯದ ಕಕ್ಷೆಯೊಳಗೆ ಉಸಿರು ಬಿಗಿಹಿಡಿದು ಧರ್ಮಪಾಲನೆ ಮಾಡುವಂತಾಗಿದೆ.

ಈ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಜೈನ ಸಮಾಜಕ್ಕೆ ರಕ್ಷಣೆ ಒದಗಿಸಿ, ತಪ್ಪಿತಸ್ಥರ ಮೇಲೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಆದಿನಾಥ ಜಿನ ಮಂದಿರದಲ್ಲಿ ಇಂದು ಮುನಿಶ್ರೀ 108 ಕಾಮಕುಮಾರ ನಂದಿ ಮಹಾರಾಜರಿಗೆ ಶ್ರದ್ಧಾಂಜಲಿ ಸಲ್ಲಿಸಿ, ನಂತರ ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಮೌನವಾಗಿ ತೆರಳಿ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿ, ಮನವಿ ಪತ್ರವನ್ನು ನಗರದ ಸಮಸ್ತ ಜೈನ ಸಮಾಜದ ಪರವಾಗಿ ಸಲ್ಲಿಸಲಾಗುವುದು ಎಂದು ಶ್ರೀ ಮಹಾವೀರ ಸಂಘದ ಕಾರ್ಯದರ್ಶಿ ಡಿ. ಸುನೀಲ್ ಕುಮಾರ್ ತಿಳಿಸಿದ್ದಾರೆ.

# ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಹೊಸ ಸಂಗ್ರಹ ಸ್ಪಾರ್ಕ್ಲ್ ಆಫ್ ಹೆವೆನ್‌ಗೆ ಚಾಲನೆ

ದಾವಣಗೆರೆ, ಜು. 9- ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ತನ್ನ ಉಪ ಬ್ರಾಂಡ್ ಮೈನ್ ಡೈಮಂಡ್ ವಜ್ರಾಭರಣಗಳ ನವೀನ ಸಂಗ್ರಹ ಸ್ಪಾರ್ಕ್ಲೇ ಆಫ್ ಹೆವನ್‌ಗೆ ಗ್ರಾಹಕರಾದ ಡಾ. ರಕ್ಷಾ ಸಿ. ದಲಾಲ್ ಮತ್ತು ಡಾ. ಶ್ರೂಶಿತ ಚಾಲನೆ ನೀಡಿದರು.

ಆಧುನಿಕ ಮಹಿಳೆಗಾಗಿ ತಯಾರಿಸಿದ ಅದ್ಭುತ ಸಂಗ್ರಹವು ಸಂಕೀರ್ಣ ವಜ್ರಗಳ ಸಾಮರಸ್ಯದ ಸಂಯೋಜನೆಯನ್ನು ಪ್ರದರ್ಶಿಸುತ್ತದೆ. ಕೇವಲ ರೂ. 30 ಸಾವಿರದಿಂದ ಆರಂಭವಾಗುವ ಬೆಲೆಗಳಲ್ಲಿ ಈ ಅಸಾಧಾರಣ ಆಭರಣಗಳು ಲಭ್ಯವಿವೆ. ಆಕರ್ಷಕ ಮತ್ತು ಸರಳವಾದ ನೆಕ್ಲೇಸ್‌ಗಳು, ಕಿವಿಯೋಲೆಗಳು, ಉಂಗುರಗಳು, ಬಳೆಗಳು, ಬ್ರೇಸ್‌ಲೆಟ್‌ಗಳು ಮುಂತಾ ದವುಗಳನ್ನು ಒಳಗೊಂಡು ರೋಮಾಂಚಕಾರಿ ಸಂದ ರ್ಭವನ್ನು ವೃದ್ಧಿಸಲು ಪರಿಪೂರ್ಣ ಆಯ್ಕೆಗಳಾಗಿದೆ.

ಚಾಲನೆಯ ಬಗ್ಗೆ ಪ್ರತಿಕ್ರಿಯಿಸಿದ ಅಧ್ಯಕ್ಷ ಎಂ.ಪಿ. ಅಹ್ಮದ್ ಅವರು, ಗ್ರಾಹಕರಿಗೆ 'ಸ್ಪಾರ್ಕ್ಲೇ ಆಫ್ ಹೆವನ್' ಸಂಗ್ರಹವನ್ನು ಪರಿಚಯಿಸಲು ನಾವು ರೋಮಾಂಚನಗೊಂಡಿದ್ದೇವೆ. ಮಲಬಾರ್‌ನ ಇತರೆ ವಿಶೇಷ ಸಂಗ್ರಹಗಳಂತೆ ಈ ಸಂಗ್ರಹದ ಪ್ರತಿ ಆಭರಣವೂ ಗ್ರಾಹಕರ ವಿಶೇಷ ಮೆಚ್ಚುಗೆ ಪಡೆಯುವುದೆಂದು ನಾವು ಭಾವಿಸುತ್ತೇವೆ ಎಂದರು.




# ಹರಪನಹಳ್ಳಿಯಲ್ಲಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ



ಹರಪನಹಳ್ಳಿ, ಜು.9- ತಾಲ್ಲೂಕಿನ ಎರಡೆತ್ತಿನ ಬಳಿ ಅರಣ್ಯ ಇಲಾಖೆಯಿಂದ ಆಯೋಜಿಸಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಆರ್‌ಎಫ್‌ಓ ಕೆ.ಮಲ್ಲಪ್ಪ, ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್, ತಹಶೀಲ್ದಾರ್ ಶಿವಕುಮಾರ್ ಬಿರಾದಾರ್, ತಾ.ಪಂ ಇಒ ಕೆ.ಆರ್.ಪ್ರಕಾಶ್, ಪುರಸಭೆ ಸದಸ್ಯರಾದ ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ, ಲಾಟಿ ದಾದಾಪೀರ್, ಗೊಂಗಡಿ ನಾಗರಾಜ್, ಮುಖಂಡರಾದ ಎಚ್. ವಸಂತಪ್ಪ, ವೈ.ಕೆ.ಬಿ.ದುರುಗಪ್ಪ, ಎಲ್. ಮಂಜ್ಯಾನಾಯ್ಕ್, ಮತ್ತೂರು ಬಸವರಾಜ್, ಹರಿಯಮ್ಮನಹಳ್ಳಿ ಶಿವರಾಜ್ ಪ್ರಸಾದ್ ಸೇರಿದಂತೆ ಇತರರು ಇದ್ದರು.

# ಸಿಟಿ ಕೋ-ಆಪರೇಟಿವ್ ಬ್ಯಾಂಕಿನಿಂದ ಸಚಿವ ಎಸ್ಸೆಸ್ಸೆಂಗೆ ಸನ್ಮಾನ



ದಾವಣಗೆರೆ, ಜು. 9 - ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಮತ್ತು ಶಾಮನೂರು ಶಿವಶಂಕರಪ್ಪ ಅವರನ್ನು ನಗರದ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್. ಜೆ. ಗುರುಸಿದ್ದಯ್ಯ, ಉಪಾಧ್ಯಕ್ಷ ನಿರಂಜನ್ ನಿಶಾನಿಮಠ್ ಭೇಟಿಯಾಗಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕ ಮಹೇಶ್ವರಪ್ಪ, ರವೀಂದ್ರನಾಥ್, ವಿಕಾಸ್, ಎನ್.ವಿ.ಬಂಡಿವಾಡ, ಬ್ಯಾಂಕ್ ಮ್ಯಾನೇಜರ್ ಮಂಜುನಾಥ ಹಾಗೂ ಸಿದ್ದೇಶ್, ಚಂದ್ರಶೇಖರ್ ಹಾಗೂ ಮತ್ತಿತರರಿದ್ದರು.

# ಸೇಂಟ್ ಜಾನ್ಸ್ ವಿದ್ಯಾ ಸಂಸ್ಥೆಯಲ್ಲಿ ಮಾತಾಪಿತೃಗಳ ನಮನ ಕಾರ್ಯಕ್ರಮ

ದಾವಣಗೆರೆ, ಜು. 9- ಗುರುವೆಂದರೆ ಕೇವಲ ವ್ಯಕ್ತಿಯಲ್ಲ. ಅಜ್ಞಾನದಿಂದ ಜ್ಞಾನದ ಕಡೆಗೆ ಕರೆದೊಯ್ಯುವ ಶಕ್ತಿ ಎಂಬಂತೆ ಗುರುಪೂರ್ಣಿಮೆಯ ಅಂಗವಾಗಿ ಸೇಂಟ್ ಜಾನ್ಸ್ ವಿದ್ಯಾಸಂಸ್ಥೆಯಲ್ಲಿ ಮಾತಾ-ಪಿತೃಗಳ ನಮನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಸ್ಥೆಯ ಕಾರ್ಯದರ್ಶಿ ಟಿ.ಎಂ. ಉಮಾಪತಯ್ಯ ಮಾತಾ-ಪಿತೃಗಳ ನಮನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಇಂದಿನ ಮಕ್ಕಳಿಗೆ ಗುರು, ಹಿರಿಯರಲ್ಲಿ ಗೌರವ ಭಾವನೆ ಕಡಿಮೆಯಾಗುತ್ತಿದ್ದು, ಉತ್ತಮ ಸಂಸ್ಕಾರ, ಮಾನವೀಯ ಮೌಲ್ಯಗಳ ಕೊರತೆ ಕಾಣುತ್ತಿದ್ದು, ಬಾಲ್ಯದಿಂದಲೇ ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಸಚ್ಚಾರಿತ್ರ್ಯವನ್ನು ರೂಢಿಸಿ, ಉತ್ತಮ ಪ್ರಜೆಗಳಾಗುವಂತೆ ಬೆಳೆಸಿ ಎಂದು ಸಲಹೆ ನೀಡಿದರು.

ಗುರುವಿನ ಸಮ್ಮುಖದಲ್ಲಿ ಮುದ್ದು ಮಕ್ಕಳು ಪೂಜಾ ವಿಧಿ, ವಿಧಾನಗಳ ಮೂಲಕ ತಮ್ಮ ತಂದೆ-ತಾಯಿಗಳ ಚರಣಗಳಿಗೆ ಪೂಜೆಯನ್ನು ಸಲ್ಲಿಸಿ, ಪೋಷಕರಿಂದ ಆಶೀರ್ವಾದ ಪಡೆಯುವುದರ ಮೂಲಕ ಸನಾತನ ಸಂಸ್ಕೃತಿಯನ್ನು ಸಾರವನ್ನು ಕಣ್ಮುಂದೆ ತಂದರು.

ಸಂಸ್ಥೆಯ ಪ್ರಾಂಶುಪಾಲ ಆರ್. ಸೈಯ್ಯದ್ ಆರಿಫ್ ಹಾಗೂ ಶ್ರೀಮತಿ ಪ್ರೀತಾ ಟಿ. ರೈ, ಉಪಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ ಹಾಗು ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಸರ್ಕಾರದ ಮಟ್ಟದಲ್ಲಿ ಪತ್ರಕರ್ತರ ಪರ ಕೆಲಸ

## ಕಾರ್ಯನಿರತ ಪತ್ರಕರ್ತರ ಸಂಘದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್

ಉಡುಪಿ, ಜು.9- ಸಮಾಜದ ಅಂಕು - ಡೊಂಕುಗಳನ್ನು ತಿದ್ದಿ, ಸಾಮರಸ್ಯ, ಸತ್ಯದ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡುತ್ತಿರುವ ಪತ್ರಕರ್ತರು ಕುಟುಂಬವನ್ನು ತ್ಯಜಿಸಿ, ರಾತ್ರಿ - ಹಗಲೆನ್ನದೇ ದುಡಿಯುತ್ತಾರೆ. ಸಮಾಜದ ಒಳಿತಿಗಾಗಿ ಸದಾ ಚಿಂತಿಸುವ ಪತ್ರಕರ್ತರು ಅವರ ಮಕ್ಕಳ ಭವಿಷ್ಯದ ಬಗ್ಗೆಯೂ ಚಿಂತಿಸಬೇಕಿದೆ ಎಂದು ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಲಹೆ ನೀಡಿದರು.



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಬೆಂಗಳೂರು), ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ರಜತ ಮಹೋತ್ಸವ ಸಮಿತಿ ಹಾಗೂ ಕಸ್ತೂರಬಾ ಆಸ್ಪತ್ರೆ ಮಣಿಪಾಲ ಇವರ ಸಹಯೋಗದಲ್ಲಿ ಮಣಿಪಾಲ ಕೆಎಂಸಿ ಆಸ್ಪತ್ರೆಯ ಡಾ. ಟಿಎಂಎ ಪೈ ಆಡಿಟೋರಿಯಂನಲ್ಲಿ ಶನಿವಾರ ನಡೆದ ರಾಜ್ಯದ ಪತ್ರಕರ್ತರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಂವಿಧಾನ ಪುಸ್ತಕವನ್ನು ಅನಾವರಣಗೊಳಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪತ್ರಕರ್ತರಿಗೂ ಸಾಕಷ್ಟು ಸಮಸ್ಯೆಗಳಿವೆ. ಈಗಲೂ ನಿವೇಶನಕ್ಕಾಗಿ ಪತ್ರಕರ್ತರು ಹೋರಾಡಬೇಕಾಗಿದೆ. ಪತ್ರಕರ್ತರ ಏಳಿಗೆಗಾಗಿ ಸರ್ಕಾರದ ಮಟ್ಟದಲ್ಲಿ ಮುಂದೆ ನಿಂತು ಕೆಲಸ ಮಾಡಿಸಿಕೊಡುತ್ತೇನೆ. ರಾತ್ರಿ - ಹಗಲು, ಚಳಿ - ಮಳೆ ಎನ್ನದೇ ಸುದ್ದಿ ಮಾಡುವ ಪತ್ರಕರ್ತರ ಶ್ರಮವನ್ನು ಕಣ್ಣಾರೆ ಕಂಡಿದ್ದೇನೆ. ಖಂಡಿತವಾಗಿಯೂ ನಿಮ್ಮೆಲ್ಲರ ಶ್ರಮಕ್ಕೆ ಫಲ ಸಿಗುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕರ್ತೆಯಾಗಿ ಆರಂಭಗೊಂಡ ನನ್ನ ರಾಜಕೀಯ ಜೀವನ ಇಂದು ಪ್ರತಿಭಾವಂತರ ಜಿಲ್ಲೆಯ ಉಸ್ತುವಾರಿ ಸಚಿವೆಯಾಗಿ ನಿಮ್ಮ ಮುಂದೆ ನಿಂತಿದ್ದೇನೆ. ಇದು ನನ್ನ ಶ್ರಮಕ್ಕೆ ಸಿಕ್ಕ ಪ್ರತಿಫಲ. ತಂದೆ-ತಾಯಿ ಕಷ್ಟಪಟ್ಟು ತಮ್ಮ ಭವಿಷ್ಯದ ಬಗ್ಗೆ ಕನಸು ಕಂಡಿದ್ದಾರೆ. ಅವರ ಕನಸನ್ನು ನನಸು ಮಾಡುವ ಗುರುತರವಾದ ಜವಾಬ್ದಾರಿ ನಿಮ್ಮ ಮೇಲಿದೆ. ಅವರ ಕನಸನ್ನು ನನಸುಗೊಳಿಸಲು ನೀವೆಲ್ಲರೂ ಸನ್ನದ್ದರಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿಧಾನಸಭಾ ಸಭಾಪತಿ ಯು.ಟಿ.ಖಾದರ್ ಮಾತನಾಡಿ, ನಮ್ಮ ಸಂಪ್ರದಾಯ, ಆಚಾರ - ವಿಚಾರಗಳು ಪಾರಂಪರಿಕವಾಗಿ ಬೆಳೆದು ನಿಲ್ಲಬೇಕಾದರೆ ಅದಕ್ಕೆ ಪತ್ರಕರ್ತರ ಕೊಡುಗೆ ಅಪಾರವಾದುದು. ಯುವ ಪೀಳಿಗೆಗೆ ನಮ್ಮ ಸಂಪ್ರದಾಯಗಳನ್ನು ವರ್ಗಾಯಿಸುವ ದೊಡ್ಡ ಶಕ್ತಿಯಾಗಿ ಮಾಧ್ಯಮದ ಪಾಲು ಬಹಳಷ್ಟಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಸದಸ್ಯ ಪತ್ರಕರ್ತರ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಣಿಪಾಲ ಮಾಹೆ ಪ್ರೊ ಚಾನ್ಸಲರ್ ಡಾ.ಎಚ್.ಎಸ್.ಬಲ್ಲಾಳ್, ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ, ಮಣಿಪಾಲ ಕಸ್ತೂರಬಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ್ ಶೆಟ್ಟಿ, ಜಿಲ್ಲಾಧಿಕಾರಿ ಎಂ. ಕೂರ್ಮರಾವ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಕ್ಷಯ ಮಚ್ಚಿಂದ್ರ ಹಾಕೆ ಮುಖ್ಯ ಅತಿಥಿಗಳಾಗಿದ್ದರು.

ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಅಧ್ಯಕ್ಷ ರಾಜೇಶ್ ಶೆಟ್ಟಿ ಅಲೆವೂರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ರಜತ ಮಹೋತ್ಸವ ಸಮಿತಿಯ ಸಂಚಾಲಕ ಮಹಮ್ಮದ್ ಶರೀಫ್ ಕಾರ್ಕಳ ಸ್ವಾಗತಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಸಿ. ಲೋಕೇಶ್ ಪುರಸ್ಕೃತರ ಪಟ್ಟಿ ವಾಚಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ನಜೀರ್ ಪೊಲ್ಯ ವಂದಿಸಿದರು. ಕೋಶಾಧಿಕಾರಿ ಉಮೇಶ್ ಮಾರ್ಪಳ್ಳಿ ದಾನಿಗಳ ಪಟ್ಟಿ ವಾಚಿಸಿದರು. ಪತ್ರಕರ್ತ ಕೆ.ಸಿ.ರಾಜೇಶ್ ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮಕ್ಕೆ ಮೊದಲು ಕಲಾಮಯಂ ತಂಡದಿಂದ ಜಾನಪದ ಕಾರ್ಯಕ್ರಮ ನಡೆಯಿತು.

# ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೆರವು

ದಾವಣಗೆರೆ, ಜು. 9- ಧಾರವಾಡದ ವಿದ್ಯಾಪೋಷಕ ಸಂಸ್ಥೆಯ ನರ್ಚರ್ ಮೆರಿಟ್ ಯೋಜನೆಯಡಿಯಲ್ಲಿ 2023-24 ನೇ ಶೈಕ್ಷಣಿಕ ಸಾಲಿಗಾಗಿ ವೃತ್ತಿಪರ (ಇಂಜಿನಿಯರಿಂಗ್, ಮೆಡಿಕಲ್) ಪದವಿ ಸೇರಬಯಸುವ, ಆರ್ಥಿಕ ಸಂಕಷ್ಟದಲ್ಲಿರುವ ಅರ್ಹ ಪ್ರತಿಭಾನ್ವಿತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆರ್ಥಿಕ ನೆರವು ನೀಡಲಾಗುವುದು.

ವಿದ್ಯಾರ್ಥಿನಿಯರು ಮೊದಲನೇ ಸಲ ಪಿಯುಸಿ ದ್ವಿತೀಯ ವರ್ಷದ ಪರೀಕ್ಷೆಯನ್ನು 2023 ರಲ್ಲಿ ಬರೆದಿರಬೇಕು. ಶೇ. 80 ಕ್ಕಿಂತ ಹೆಚ್ಚು ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ದ್ವಿತೀಯ ಪಿಯುಸಿ ನಂತರ ಇಂಜಿನಿಯರಿಂಗ್, ಮೆಡಿಕಲ್ ವಿಭಾಗಗಳಿಗೆ ಪ್ರವೇಶ ಬಯಸುವವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಇಂಜಿನಿಯರಿಂಗ್ ಸೇರಬಯಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಿಇಟಿ ಪರೀಕ್ಷೆಯಲ್ಲಿ 25000 ಕ್ಕಿಂತ ಕಡಿಮೆ ರ್‍ಯಾಂಕ್‌ನೊಂದಿಗೆ ಉತ್ತೀರ್ಣರಾಗಿರಬೇಕು. ಮೆಡಿಕಲ್ ಸೇರಬಯಸುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು 3000 ಕ್ಕಿಂತ ಕಡಿಮೆ ರ್‍ಯಾಂಕ್ ಹಾಗೂ ಅಖಿಲ ಭಾರತ ರ್‍ಯಾಂಕಿಂಗ್‌ನಲ್ಲಿ 60000 ಕ್ಕಿಂತ ಕಡಿಮೆ ರ್‍ಯಾಂಕ್‌ನೊಂದಿಗೆ ಉತ್ತೀರ್ಣರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ 15000 ಕ್ಕಿಂತ ಕಡಿಮೆ ಇರಬೇಕು.

ಧನಸಹಾಯದ ಅರ್ಜಿಯನ್ನು ವಿದ್ಯಾಪೋಷಕ ಸಂಸ್ಥೆ www. vidyaposhak.ngo ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿ ದಾಖಲಾತಿ ಗಳನ್ನು ಅಪ್‌ಲೋಡ್ ಮಾಡಿ ಇದೇ ದಿನಾಂಕ 20 ರೊಳಗಾಗಿ ಸಲ್ಲಿಸ ಬೇಕು. ಹೆಚ್ಚಿನ ಮಾಹಿತಿಗಾಗಿ 9066116482 ಗೆ ಸಂಪರ್ಕಿಸಬಹುದು.

# ಲೆಕ್ಕ ರಾಮಯ್ಯನ ಲೇಖ ಪರ್ಫೆಕ್ಟ್

ದಾವಣಗೆರೆ, ಜು. 9 - ಜನರ ನಿರೀಕ್ಷೆ ಮೀರಿ ಆರ್ಥಿಕ ಶಿಸ್ತನ್ನು ಕಾಪಾಡಿ ಎಲ್ಲರೂ ಅಚ್ಚರಿ ಪಡುವಂತೆ ಕೇವಲ ಮೂರು ಇಲಾಖೆಯಿಂದ 5 ಭಾಗ್ಯಗಳಿಗೂ ಹಣವನ್ನು ಒದಗಿಸಿ ಜನಸಾಮಾನ್ಯರ ಮೇಲೆ ಹೆಚ್ಚಿನ ಹೊರೆ ಹೊರಿಸದೆ, ಇರುವ ವಿಪುಲ ಅವಕಾಶಗಳನ್ನು ಸಮರ್ಥವಾಗಿ ಬಳಸಿ ಅತ್ಯುತ್ತಮವಾಗಿ ಮುಂಗಡ ಪತ್ರವನ್ನು ಮಂಡಿಸಿದ್ದಾರೆ. ಜನಪ್ರಿಯ ಯೋಜನೆಗೆ ಹೆಚ್ಚು ಒತ್ತು ಕೊಟ್ಟರೂ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಿದ್ದಾರೆ. ಹಾಗಾಗಿ ಲೆಕ್ಕ ರಾಮಯ್ಯನ ಲೇಖ ಪರ್ಫೆಕ್ಟ್..



**ಡಾ. ಸುಜಿತ್ ಕುಮಾರ್ ಎಸ್. ಹೆಚ್.**
ಪ್ರಾಧ್ಯಾಪಕರು ಹಾಗೂ ವಿಭಾಗದ
ಮುಖ್ಯಸ್ಥರು, ಬಿಐಇಟಿ, ಸೆಬಿ ಸಂಪನ್ಮೂಲ ವ್ಯಕ್ತಿ

## ಎಸ್ಸೆಸ್ಸೆಂಗೆ ರಂಭಾಪುರಿ ಶ್ರೀ ಗುರುರಕ್ಷೆ



ದಾವಣಗೆರೆ, ಜು. 9 - ರಂಭಾಪುರಿ ಜಗದ್ಗುರು ಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ನಗರದ ಅಭಿನವ ರೇಣುಕಾ ಮಂದಿರಕ್ಕೆ ಇಂದು ಸಂಜೆ ಆಗಮಿಸಿದ್ದ ಸಂದರ್ಭದಲ್ಲಿ, ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಶ್ರೀ ಜಗದ್ಗುರುಗಳವರನ್ನು ಗೌರವಿಸಿ, ಗುರು ರಕ್ಷೆ ಪಡೆದರು.

ಈ ಸಂದರ್ಭದಲ್ಲಿ ವಿನಾಯಕ ಬಸ್ ಮಾಲೀಕ ಎಂ.ಎನ್. ಹರೀಶ್ , ಭುವನೇಶ್ವರಿ ರೈಸ್ ಮಿಲ್ ರಾಜು, ರುದ್ರಮುನಿ ಸ್ವಾಮಿ, ಹೆಚ್.ಬಿ. ಅಜ್ಜಪ್ಪ, ಪ್ರಗತಿ ಶಶಿಕುಮಾರ್, ಆರ್.ಟಿ ಪ್ರಶಾಂತ್ ದುಗ್ಗತ್ತಿಮಠ್, ದೇವರಮನಿ ಯೋಗೀಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ದಾವಣಗೆರೆ ಕ್ಲಬ್‌ನಿಂದ ಎಸ್ಸೆಸ್ಸೆಂಗೆ ಸನ್ಮಾನ



ದಾವಣಗೆರೆ, ಜು. 9 - ದಾವಣಗೆರೆ ಕ್ಲಬ್ ಮ್ಯಾನೇಜಿಂಗ್ ಕಮಿಟಿ ವತಿಯಿಂದ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ದಾವಣಗೆರೆ ಕ್ಲಬ್ ಅಧ್ಯಕ್ಷ ಎ.ಬಿ. ಚಂದ್ರಶೇಖರ್, ಕಾರ್ಯದರ್ಶಿ ಪಲ್ಲಾಗಟ್ಟಿ ರವಿಶಂಕರ್, ನಿರ್ದೇಶಕರಾದ ಎಸ್.ಕೆ. ಪ್ರಶಾಂತ್ ಗುಪ್ತ, ಬಾದಾಮಿ ಮಲ್ಲಿಕಾರ್ಜುನ್, ಅಭಿಷೇಕ್ ಬೇತೂರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಮುಕ್ತಾ ಶ್ರೀನಿವಾಸ ಪ್ರಭುಗೆ ಯೋಗ ಸ್ಪರ್ಧೆಯಲ್ಲಿ ಚಿನ್ನದ ಪದಕ



ದಾವಣಗೆರೆ, ಜು. 9- ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಇತ್ತೀಚಿಗೆ ಜಿಲ್ಲಾ ಯೋಗ ಒಕ್ಕೂಟ ಹಾಗೂ ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಯೋಗ ಸ್ಪರ್ಧೆಯಲ್ಲಿ ಯೋಗ ಸಾಧಕಿ ಶ್ರೀಮತಿ ಮುಕ್ತಾ ಶ್ರೀನಿವಾಸ ಪ್ರಭು ಅವರು ಪ್ರಥಮ ಬಹುಮಾನದೊಂದಿಗೆ ಚಿನ್ನದ ಪದಕ ಪಡೆದಿದ್ದಾರೆ.

## ಓಪನ್ ಟೆನ್ನಿಸ್ ಪಂದ್ಯಾವಳಿ : ಚಿ।। ಶ್ಲೋಕ್ ಆಳಂದ್‌ಗೆ ಟ್ರೋಫಿ



ಪಾಂಡಿಚೆರಿ,ಜು. 9 - ಇಲ್ಲಿ ಈಚೆಗೆ ಏರ್ಪಡಾಗಿದ್ದ ಓಪನ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಸೊಲ್ಲಾಪುರದ ಎಂಎಸ್‌ಎಲ್‌ಟಿಎ ಟೆನ್ನಿಸ್ ಸೆಂಟರ್‌ನ ವಿದ್ಯಾರ್ಥಿ ಚಿ।। ಶ್ಲೋಕ್ ಆಳಂದ್ ಅವರನ್ನು ಜಂಟಿ ವಿಜೇತ ಎಂದು ಘೋಷಿಸಲಾಯಿತು.

ಪಾಂಡಿಚೆರಿಯ ಮುಖ್ಯ ಮಂತ್ರಿ ಎನ್. ರಂಗಸ್ವಾಮಿ ಅವರು ಶ್ಲೋಕ್ ಆಳಂದ್‌ಗೆ ಟ್ರೋಫಿಯೊಂದಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಪಾಂಡಿಚೆರಿ ಟೆನ್ನಿಸ್ ಅಸೋಸಿಯೇಷನ್ ಅಧ್ಯಕ್ಷ ಪಳನಿ ವೇಲು ಮತ್ತಿತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚಿ।। ಶ್ಲೋಕ್ ಆಳಂದ್, ಸೊಲ್ಲಾಪುರದ ಇಂಜಿನಿಯರ್ ಸ್ವಪ್ನಿಲ್ ಮತ್ತು ಶ್ರೀಮತಿ ಮೋನಿಕಾ ದಂಪತಿ ಪುತ್ರ ಹಾಗೂ ದಾವಣಗೆರೆಯ ಶ್ರೀ ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ ಮತ್ತು ಶ್ರೀಮತಿ ಮೈತ್ರಾ ದಂಪತಿ ಮೊಮ್ಮಗ.

## ಭಾರತದ 150 ಕಲಾಕೃತಿಗಳು ವಾಪಸ್

ಹಂಪಿ, ಜು. 9 – ಮುಂದಿನ ಆರು ತಿಂಗಳಲ್ಲಿ ಭಾರತದ 150 ಕಲಾಕೃತಿಗಳನ್ನು ಅಮೆರಿಕದಿಂದ ಮರಳಿಸಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಸಂಸ್ಕೃತಿ ಸಚಿವಾಲಯದ ಕಾರ್ಯದರ್ಶಿ ಗೋವಿಂದ್ ಮೋಹನ್, 1970ರ ಒಡಂಬಡಿಕೆಯ ಅನ್ವಯ ವಿವಿಧ ದೇಶಗಳಲ್ಲಿರುವ ಕಲಾಕೃತಿಗಳನ್ನು ವಾಪಸ್ ತರುವ ಪ್ರಯತ್ನ ನಡೆಸಲಾಗುತ್ತಿದೆ ಎಂದಿದ್ದಾರೆ. ಈ ಒಡಂಬಡಿಕೆಯ ಅನ್ವಯ ಅಕ್ರಮವಾಗಿ ಸಾಂಸ್ಕೃತಿಕ ಆಸ್ತಿಗಳನ್ನು ಕಳ್ಳಸಾಗಣೆ ಮಾಡುವಂತಿಲ್ಲ.

ಜಿ20 ದೇಶಗಳ ಜೊತೆ ಈ ಬಗ್ಗೆ ಚರ್ಚೆ ನಡೆಲಾಗಿದೆ. ದ್ವಿಪಕ್ಷೀಯವಾಗಿ ಅಮೆರಿಕದಂತಹ ದೇಶಗಳ ಜೊತೆ ಮಾತುಕತೆ ನಡೆದಿದೆ. ಮುಂದಿನ ಆರು ತಿಂಗಳಲ್ಲಿ ಅಮೆರಿಕದಿಂದ 150 ಕಲಾಕೃತಿಗಳು ವಾಪಸ್ ಬರುವ ನಿರೀಕ್ಷೆ ಇದೆ ಎಂದೂ ಅವರು ತಿಳಿಸಿದ್ದಾರೆ.

# ಪ್ರತಿಯೊಂದು ಜೀವರಾಶಿಗೂ ಅದಮ್ಯ ಚೇತನ ನೀಡುವ ಶಕ್ತಿ ಸಂಗೀತಕ್ಕಿದೆ

### ವಿಶ್ವ ಸಂಗೀತ ದಿನಾಚರಣೆ ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ

ದಾವಣಗೆರೆ, ಜು.9- ಸಂಗೀತದಲ್ಲಿ ಅನೇಕ ಪ್ರಕಾರಗಳಿದ್ದು, ಜಾನಪದ ಸಂಗೀತದಿಂದ ಹಿಡಿದು ಶಾಸ್ತ್ರೀಯ ಸಂಗೀತದವರೆಗೆ ವೈವಿಧ್ಯವಾದ ರೂಪವನ್ನು ತಾಳಿದೆ. ವಿಶ್ವದ ಪ್ರತಿಯೊಂದು ಜೀವರಾಶಿಗೂ ಅದಮ್ಯ ಚೇತನ ನೀಡುವ ಶಕ್ತಿ ಸಂಗೀತಕ್ಕಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ ಹೇಳಿದರು.

ಸಂಗೀತವನ್ನು ಮುಖ್ಯವಾಗಿ ಹಿಂದೂಸ್ತಾನಿ ಹಾಗೂ ಕರ್ನಾಟಕ ಸಂಗೀತವೆಂದು ವಿಭಾಗ ಮಾಡಿ ನೋಡಲಾಗುತ್ತಿದೆ. ಸಂಗೀತ ಕ್ಷೇತ್ರದಲ್ಲಿ ಅನನ್ಯ ಕೊಡುಗೆ ನೀಡಿರುವ, 'ಭಾರತ ರತ್ನ' ಪ್ರಶಸ್ತಿಗೆ ಭಾಜನರಾಗಿರುವ ಶ್ರೀಮತಿ ಲತಾ ಮಂಗೇಶ್ಕರ್, ಭೀಮಸೇನ್ ಜೋಶಿ ಹಾಗೂ ಶ್ರೀಮತಿ ಗಂಗೂಬಾಯಿ ಹಾನಗಲ್ ಅವರುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಲೇಬೇಕು ಎಂದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಅದಮ್ಯ ಕಲಾ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಇವರ ಸಂಯುಕ್ತ ಆಶ್ರಯದಲ್ಲಿ ಇಂದು ಏರ್ಪಡಿಸಿದ್ದ ವಿಶ್ವ ಸಂಗೀತ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಗೀತಕ್ಕೆ ಯಾವುದೇ ಪ್ರದೇಶ, ಭಾಷೆಗೂ ಮೀರಿ ತನ್ನ ಛಾಪನ್ನು ಮೂಡಿಸುವ ಶಕ್ತಿ ಇದೆ ಎಂಬುದಾಗಿ ತಿಳಿಸಿದರು. ಈ ನಿಟ್ಟಿನಲ್ಲಿ ನಗರದಲ್ಲಿ ಅನೇಕ ಸಾಂಸ್ಕೃತಿಕ



ಸಂಸ್ಥೆಗಳು ಸಂಗೀತದ ಅಭಿರುಚಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇಂತಹ ಕಾರ್ಯವನ್ನು ಅದಮ್ಯ ಕಲಾ ಸಂಸ್ಥೆಯು ಕೂಡ ಮಾಡುತ್ತಿರುವುದು ಶ್ಲಾಘನೀಯ ಎಂದು ವಾಮದೇವಪ್ಪ ತಿಳಿಸಿದರು.

ಇದೇ ಸಂದರ್ಭದಲ್ಲಿ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಬೆಂಗಳೂರಿನ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಮಾಜಿ ಸದಸ್ಯರಾದ ವಿದ್ವಾನ್ ಎಂ. ದ್ವಾರಕೀಶ್ ಮಾತನಾಡಿ, ತಮ್ಮ ಸಂಗೀತವು ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಗೆ ತುಂಬಾ ಪ್ರಭಾವ ಬೀರುತ್ತದೆ.

ವಿಶ್ವ ಸಂಗೀತ ದಿನಾಚರಣೆ 1982 ರಲ್ಲಿ ಫ್ರಾನ್ ಸರ್ಕಾರದ ಸಚಿವರು ಪ್ರಥಮವಾಗಿ ಆರಂಭಿಸಿದರು. ಇದು ಇಂದು ವಿಶ್ವದಾದ್ಯಂತ ಆಚರಿಸಲ್ಪಡುತ್ತಿದೆ. ಇದರಿಂದ ಸಂಗೀತಕ್ಕೆ ತನ್ನದೇ ಆದ ಮಹತ್ವ ಇದೆ ಎಂದು ತಿಳಿಸಿದರು.

ಸಂಗೀತದಲ್ಲಿ ತೊಡಗಿಸಿಕೊಳ್ಳುವುದರಿಂದ ಮಾನಸಿಕ ಉಲ್ಲಾಸ, ನೆಮ್ಮದಿ, ಏಕಾಗ್ರತೆ ಹಾಗೂ ಶ್ರದ್ಧೆ ಬೆಳೆಸಿಕೊಳ್ಳಲು ಸಹಕಾರಿಯಾಗಿದೆ ಎಂದು ಸ್ವಾರಸ್ಯಕರವಾದ ಉಪನ್ಯಾಸವನ್ನು ದ್ವಾರಕೀಶ್ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅದಮ್ಯ ಕಲಾ ಸಂಸ್ಥೆಯ ಕಾರ್ಯದರ್ಶಿ ಗೌಡ್ರ ಚನ್ನಬಸಪ್ಪ ವಹಿಸಿದ್ದರು. ಅದಮ್ಯ ಕಲಾ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಗೀತಾ ಮಾಲತೇಶ್, ಮುಖ್ಯ ಅತಿಥಿಗಳಾದ ವೀರೇಶ್ವರ ಪುಣ್ಯಾಶ್ರಮದ ಸಹ ಕಾರ್ಯದರ್ಶಿ ಜಾಲಿಮರದ ಕರಿಬಸಪ್ಪ, ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ, ಹಿರಿಯ ಅಧಿಕಾರಿ ವಿಶ್ವನಾಥ್ ಮುದಜ್ಜಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ ಮತ್ತಿತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಂತರ ವೈವಿಧ್ಯಮಯವಾದ ಸಂಗೀತ ಕಾರ್ಯಕ್ರಮಗಳು ಕಲಾ ರಸಿಕರನ್ನು ತಲೆದೂಗಿಸುವಂತೆ ಮಾಡಿದವು.

ವಿದುಷಿ ಶ್ರೀಮತಿ ಗೀತಾ ಮಹಾಂತೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀಮತಿ ಡಾ. ಆಶಾ ಭಾನುಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ರಕ್ಷಿತಾ ವಂದಿಸಿದರು.

### ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ನೇತೃತ್ವದಲ್ಲಿ ರೈತರ ನಿಯೋಗದಿಂದ

# ಸಾಲಮನ್ನಾ ಹಣ ಬಿಡುಗಡೆಗೆ ಸಚಿವರಿಗೆ ಮನವಿ

ದಾವಣಗೆರೆ, ಜು.9- ಹಿಂದಿನ ಸರ್ಕಾರ ಮಾಡಿದ್ದ ರೈತರ ಸಾಲಮನ್ನಾ ಹಣ ಬಿಡುಗಡೆಗೆ ಒತ್ತಾಯಿಸಿ ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ನೇತೃತ್ವದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರು, ರೈತರ ನಿಯೋಗ ಬೆಂಗಳೂರಿನಲ್ಲಿ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರಿಗೆ ಮನವಿ ಸಲ್ಲಿಸಿತು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಕೊಡಗನೂರು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತರು ಸಾಲ ತೆಗೆದುಕೊಂಡಿದ್ದರು. ಹಿಂದಿನ ಸರ್ಕಾರ ಮಾಡಿದ್ದ ಸಾಲ ಮನ್ನಾ ಯೋಜನೆಯಡಿ 54 ಲಕ್ಷ ರೂ. ಸಾಲ ಮನ್ನಾ ಆಗಬೇಕಿತ್ತು. ಆದರೆ ಆಡಿಟ್ ಸಮಸ್ಯೆಯಿಂದ ಸಾಲ ಮನ್ನಾ ಆಗಿರಲಿಲ್ಲ. ಹೀಗಾಗಿ ಅಂದು ಸಾಲ ಪಡೆದಿದ್ದ ರೈತರು ಇತ್ತ ಸಾಲ ಮನ್ನಾ ಆಗದೆ, ಅತ್ತ ಸಾಲ ಮರುಪಾವತಿ ಮಾಡಲು ಆಗದೇ ತೊಂದರೆಯಲ್ಲಿ



ಸಿಲುಕುವಂತಾಗಿದೆ.

ಇನ್ನು ಹೊಸ ಸಾಲ ಕೊಡುವಂತೆ ಅರ್ಜಿ ಸಲ್ಲಿಸಿದರೆ ನೀವು ಹಳೆಯ ಸಾಲ ತೀರಿಸಿದರೆ ಮಾತ್ರ ಹೊಸ ಸಾಲ ಕೊಡುತ್ತೇವೆ ಎಂದು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಹೇಳಲಾಗುತ್ತಿದೆ. ಇದರಿಂದಾಗಿ ನಮಗೆ ಬಹಳ ತೊಂದರೆ ಆಗಿದೆ ಎಂದು ರೈತರು ಸಹಕಾರ ಸಚಿವರಿಗೆ ಮನವರಿಕೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಕೆ.ಎಸ್.ಬಸವಂತಪ್ಪ, ಸಾಲ ಮನ್ನಾ ಯೋಜನೆಯಡಿ ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಅಂದಾಜು 1 ಕೋಟಿ ರೂ. ಹಣ ಬಿಡುಗಡೆಯಾಗಬೇಕಿದೆ. ಇದರಲ್ಲಿ ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಕೊಡಗನೂರು ಕೃಷಿ ಪತ್ತಿನ ಸಹಕಾರ ಸಂಘಕ್ಕೆ 54 ಲಕ್ಷ ರೂ. ಹಣ ಬಿಡುಗಡೆ ಆಗಬೇಕು. ಹಣ ಬಿಡುಗಡೆ ಆಗದ ಪರಿಣಾಮ ಈ ಭಾಗದ ರೈತರು ಹೊಸ ಸಾಲ ಪಡೆಯಲು ಆಗದೆ ಕೃಷಿ ಚಟುವಟಿಕೆ ಮಾಡಲು ತೊಂದರೆ ಅನುಭವಿಸುವಂತಾಗಿದೆ.

ಕೂಡಲೇ ಸಾಲ ಮನ್ನಾದ ಹಣ ಬಿಡುಗಡೆ ಮಾಡುವಂತೆ ಶಾಸಕರು ಸಚಿವರಲ್ಲಿ ಮನವಿ ಮಾಡಿದರು.

ರೈತ ನಿಯೋಗದ ಮನವಿ ಆಲಿಸಿದ ಸಹಕಾರ ಸಚಿವ ಕೆ.ಎನ್. ರಾಜಣ್ಣ, ಈ ಬಗ್ಗೆ ಪರಿಶೀಲನೆ ನಡೆಸಿ ಹಣ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಕೊಡಗನೂರು ಸಹಕಾರ ಸಂಘದ ಅಧ್ಯಕ್ಷ ಶಂಕರಮೂರ್ತಿ, ಉಪಾಧ್ಯಕ್ಷ ಫಾರೂಕ್ ಅಹ್ಮದ್, ನಿರ್ದೇಶಕರಾದ ಕೆ.ಶಿವಮೂರ್ತಿ, ಬಿ.ಎಂ.ಜಯದೇವಪ್ಪ, ಕೆ.ಜಿ.ಜಯಣ್ಣ, ಮಾಣಿಕ್‌ರಾವ್, ತಿಪ್ಪಣ್ಣ, ಶಕೀಲ ಬಾನು, ಸುರೇಶ್, ರತ್ನಮ್ಮ, ರಾಜಶೇಖರ್, ರೈತ ಮುಖಂಡ ರೇವಣ್ಣ ಸೇರಿದಂತೆ ರೈತರು ನಿಯೋಗದಲ್ಲಿದ್ದರು.

## ಅಮರನಾಥ ಯಾತ್ರೆಯಿಂದ ಸುರಕ್ಷಿತವಾಗಿ ಹಿಂತಿರುಗಿದ ಶಾಮನೂರಿನ ಕುಟುಂಬ



ದಾವಣಗೆರೆ, ಜು. 9 - ಅಮರನಾಥ ಯಾತ್ರೆಗೆ ಹೋಗಿದ್ದ ನಗರದ ನಾಲ್ಕು ಜನರು ಸುರಕ್ಷಿತವಾಗಿ ವಾಪಾಸ್ ಬಂದಿದ್ದಾರೆ.

ಎನ್.ಆರ್. ಗೀತಾ, ಬಿ.ಜಿ. ಪುಷ್ಪಾ, ಎನ್.ವಿ. ಉಷಾರಾಣಿ, ಸಿ.ಹೆಚ್. ಚಂದ್ರಿಕ ಅವರುಗಳು ಅಮರನಾಥ ಯಾತ್ರೆ ಕೈಗೊಂಡಿದ್ದು, ಕಳೆದ ವಾರ ಅಮರನಾಥ ದರ್ಶನ ಪಡೆದ ಅವರು ಮಳೆ ಪ್ರಾರಂಭವಾದ್ದರಿಂದ ಎರಡು ದಿನ ಶ್ರೀನಗರದಲ್ಲಿ ತಂಗಿದ್ದು, ನಾಳೆ ದಾವಣಗೆರೆಗೆ ಆಗಮಿಸುತ್ತಿದ್ದಾರೆ.

## ರಾಷ್ಟ್ರೀಯ ಪವರ್‌ಲಿಫ್ಟಿಂಗ್ ತರಬೇತುದಾರರಾಗಿ ದಾದಾಪೀರ್ ಆಯ್ಕೆ



ದಾವಣಗೆರೆ, ಜು.9- ಆಂಧ್ರಪ್ರದೇಶದ ವಿಜಯನಗರಂ ರಾಜ್ಯಂನಲ್ಲಿ ನಾಡಿದ್ದು ದಿನಾಂಕ 11 ರಿಂದ 19 ರವರೆಗೆ ನಡೆಯಲಿರುವ ರಾಷ್ಟ್ರೀಯ ಪವರ್‌ಲಿಫ್ಟಿಂಗ್ ಶಿಪ್ ತರಬೇತಿದಾರರಾಗಿ ಏಕಲವ್ಯ ಪ್ರಶಸ್ತಿ ಪುರಸ್ಕೃತರೂ, ಅಂತರರಾಷ್ಟ್ರೀಯ ಕ್ರೀಡಾಪಟು ಹೆಚ್. ದಾದಾಪೀರ್ ಆಯ್ಕೆಯಾಗಿದ್ದಾರೆ.

# ಜನಪದ ಕಲೆಗಳೇ ಗ್ರಾಮೀಣರ ಜೀವಾಳ



### ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್‌ಕುಮಾರ್

ದಾವಣಗೆರೆ, ಜು. 9 - ಜನಪದ ಕಲೆ ಮತ್ತು ಕಲಾವಿದರು ಗ್ರಾಮೀಣ ಭಾರತದ ತಾಯಿ ಬೇರು ಇದ್ದಂತೆ. ಜನ ಜೀವನ ಮತ್ತು ಉನ್ನತ ಸಾಂಸ್ಕೃತಿಕ ಪರಂಪರೆ ಬಿಂಬಿಸುವ ಜನಪದ ಕಲೆಗಳು ಗ್ರಾಮೀಣ ಭಾರತದ ಜೀವಾಳವಾಗಿವೆ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್.ಅರುಣ್‌ಕುಮಾರ್ ಅಭಿಪ್ರಾಯಪಟ್ಟರು.

ಶ್ರೀ ಬಸವೇಶ್ವರ ಗ್ರಾಮೀಣ ಸಾಂಸ್ಕೃತಿಕ ಕಲಾ ವೇದಿಕೆ (ಎಲೆಬೇತೂರು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು) ಇವರ ಸಂಯುಕ್ತ ಆಶ್ರಯದಲ್ಲಿ ಬಸಾಪುರದ ಆರಾಧ್ಯ ಬಡಾವಣೆಯಲ್ಲಿನ ಶ್ರೀ ರೇವಣಸಿದ್ದೇಶ್ವರ ಪ್ರೌಢಶಾಲೆ ಮತ್ತು ಶ್ರೀಮತಿ ನಾಗಮ್ಮ ಶಾಲೆಯ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಿಚಾರ ಗೋಷ್ಠಿ ಮತ್ತು ಬಯಲಾಟ ಪ್ರದರ್ಶನದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಆಧುನಿಕತೆಯ ಗಾಢ ಪ್ರಭಾವದಿಂದ ನಮ್ಮ ಶ್ರೀಮಂತ ಜನಪದ ಕಲಾಪ್ರಕಾರಗಳು ನಶಿಸುತ್ತಿವೆ. ನಮ್ಮ ಜೊತೆ ಬದುಕುತ್ತಿರುವ ಕಲಾವಿದರನ್ನು ಕಡೆಗಣಿಸುವ ಸಂಪ್ರದಾಯ ಬೆಳೆಯುತ್ತಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಂ.ಎಸ್.ನಾಗರಾಜು ಮೆಳ್ಳೇಕಟ್ಟೆ ಮಾತನಾಡಿ, ಜನಪದ ಪ್ರದರ್ಶನಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡೆಯಬೇಕು. ವಿದ್ಯಾರ್ಥಿಗಳಲ್ಲಿ ಈ ಬಗ್ಗೆ ಆಸಕ್ತಿ ಹೆಚ್ಚುವಂತೆ ಅರಿವು ಮೂಡಿಸಬೇಕು. ಅಲ್ಲದೇ ಈ ಕಲೆಗಳ ಬಗ್ಗೆ ಹೆಚ್ಚು ಗೌರವ ಬೆಳೆಯುವಂತೆ ಕಲಾವಿದರಿಗೆ ಪ್ರೋತ್ಸಾಹ ನೀಡಬೇಕಾಗಿದೆ ಎಂದು ತಿಳಿಸಿದರು.

ಕರ್ನಾಟಕ ಬಯಲಾಟ ಅಕಾಡೆಮಿಯ ಮಾಜಿ ಸದಸ್ಯ ಹೆಚ್.ತಿಪ್ಪೇಸ್ವಾಮಿ ಬಯಲಾಟದ ಸಾಹಿತ್ಯ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ರೇವಣಸಿದ್ದೇಶ್ವರ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯಿನಿ ಕೆ.ಜಿ.ಸೌಭಾಗ್ಯಮ್ಮ, ವಕೀಲ ಆರ್.ಯೋಗೀಶ್ವರಪ್ಪ, ಹವ್ಯಾಸಿ ಗ್ರಾಮೀಣ ವಿವಿಧ ಕಲಾವಿದರ ಒಕ್ಕೂಟದ ಅಧ್ಯಕ್ಷ ಎನ್.ಎಸ್. ರಾಜು, ಬಸವೇಶ್ವರ ಗ್ರಾಮೀಣ ಕಲಾ ವೇದಿಕೆಯ ಅಧ್ಯಕ್ಷ ಎನ್.ಎ.ವೀರಭದ್ರಯ್ಯ, ಕಾರ್ಯದರ್ಶಿ ನೀರ್ಥಡಿ ಬಸವರಾಜಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪರಮೇಶ್ವರಪ್ಪ ಸಿರಿಗೆರೆ, ಸಿ.ಹೊನ್ನೂರು ಸ್ವಾಮಿ ಇತರರು ಇದ್ದರು.

ಕಾರ್ಯಕ್ರಮದಲ್ಲಿ ಬಯಲಾಟ ಪ್ರದರ್ಶನ, ತೊಗಲು ಬೊಂಬೆಯಾಟದ ಪ್ರದರ್ಶನ ನಡೆಯಿತು.


## ರಾಹುಲ್ ಅನರ್ಹತೆ : ಜು. 12ರಂದು ಕಾಂಗ್ರೆಸ್‌ನಿಂದ ಸತ್ಯಾಗ್ರಹ



ನವದೆಹಲಿ, ಜು. 9 – ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅನರ್ಹತೆಗೆ ಸಂಬಂಧಿಸಿದಂತೆ, ಬಿಜೆಪಿ ಕುತಂತ್ರ ಮಾಡುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಜುಲೈ 12ರಂದು ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ಮಹಾತ್ಮಗಾಂಧಿ ಪ್ರತಿಮೆ ಎದುರು ಮೌನ ಸತ್ಯಾಗ್ರಹ ನಡೆಸುವುದಾಗಿ ತಿಳಿಸಿದೆ.

ಅದಾನಿ ಸಮೂಹದ ಜೊತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೊಂದಿರುವ ಸಂಬಂಧಗಳನ್ನು ರಾಹುಲ್ ಗಾಂಧಿ ಬಯಲಿಗೆ ಎಳೆಯುತ್ತಿದ್ದರು. ಹೀಗಾಗಿ ಬಿಜೆಪಿ ಕುತಂತ್ರ ನಡೆಸಿ ಸಂಸತ್ತಿನಿಂದ ಅನರ್ಹಗೊಳಿಸಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.




# ಎಲೆ ಮರೆಯಂತಿದ್ದ ಕಲಾವಿದರನ್ನು ಮುನ್ನೆಲೆಗೆ ತಂದ ಶಿವರುದ್ರಪ್ಪ



### ಸಾಹಿತಿ ಲೋಕೇಶ ಅಗಸನಕಟ್ಟೆ

ದಾವಣಗೆರೆ, ಜು. 9- ಎಲೆ ಮರೆಯಂತಿದ್ದ ಅನೇಕ ಕಲಾವಿದರನ್ನು ಮುನ್ನೆಲೆಗೆ ತಂದ ಕೀರ್ತಿ ಎಸ್.ಹೆಚ್. ಶಿವರುದ್ರಪ್ಪ ಅವರದ್ದು ಎಂದು ಸಾಹಿತಿ ಡಾ.ಲೋಕೇಶ್ ಅಗಸನಕಟ್ಟೆ ಹೇಳಿದರು.

ಎಸ್.ಹೆಚ್. ಶಿವರುದ್ರಪ್ಪ ರವರ ಅಭಿನಂದನಾ ಸಮಿತಿ ಬೆಂಗಳೂರು ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ 'ಸಗಣೇರ ಶಿವರುದ್ರಪ್ಪನವರ ಬದುಕು, ಸೇವೆ' ಕೃತಿ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಕಲೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ನೀಡಲಾಗುವ ಅತ್ಯುನ್ನತ ಪ್ರಶಸ್ತಿಗಳ ಆಯ್ಕೆ ವಿಚಾರದಲ್ಲಿ ಶಿವರುದ್ರಪ್ಪ ಅವರು ಕಲಾವಿದರ ಬಗ್ಗೆ ವಿಸ್ತೃತ ಮಾಹಿತಿ ಹೊಂದಿರುತ್ತಿದ್ದರು. ಅವರ ಆಯ್ಕೆಗೆ ಸೂಚಿಸಿದ ಹೆಸರಿನ ಬಗ್ಗೆ ಯಾರೇ ಅಪಸ್ವರ ಎತ್ತಿದರೂ ಅದನ್ನು ಸಮರ್ಥಿಸಿಕೊಂಡು ಒಪ್ಪಿಸುವ ಕೌಶಲ್ಯತೆ ಅವರಲ್ಲಿತ್ತು ಎಂದು ಹೇಳಿದರು.

ಕಾರ್ಯಕ್ರಮವೊಂದಕ್ಕೆ ಗೋವಾಗೆ ಆಗಮಿಸಿದ್ದ ಅವರು, ಜೋಯಿಡಾಗೆ ತೆರಳಿ ಯಕ್ಷಗಾನ ಮಹಿಳಾ ಕಲಾವಿದರನ್ನು ಗುರುತಿಸಿ ರಾಷ್ಟ್ರಕ್ಕೆ ಪರಿಚಯಿಸಿದ್ದರು. ಎಲ್ಲಾ ಜಾತಿ ವರ್ಗದ ಕಲಾವಿದರನ್ನೂ ಒಳಗೊಳ್ಳುವ ಗುಣ ಅವರಲ್ಲಿತ್ತು ಎಂದು ಹೇಳಿದರು.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಕೃತಿ ಬಗ್ಗೆ ಮಾತನಾಡುತ್ತಾ ಜನಮುಖಿ, ಸರಳ ಸಜ್ಜನ ಅಧಿಕಾರಿಗಳಲ್ಲಿ ಶಿವರುದ್ರಪ್ಪ ಅವರೂ ಒಬ್ಬರು ಎಂದರು. ಕಲೆ ಹಾಗೂ ಕಲಾವಿದರ ಆಪ್ತ ಒಡನಾಡಿಯಾಗಿ ಶಿವರುದ್ರಪ್ಪ ಅವರು ಕಾರ್ಯ ನಿರ್ವಹಿಸಿದ್ದರು. ಅವಕಾಶ ಕೇಳಿದ ಕಲಾವಿದರನ್ನು ಗುರುತಿಸಿ, ಪ್ರೋತ್ಸಾಹಿಸುವ ಕೆಲಸವನ್ನು ಒಬ್ಬ ಅಧಿಕಾರಿಯಾಗಿ ಪ್ರಾಮಾಣಿಕತೆಯಿಂದ ಮಾಡಿದ್ದರು ಎಂದರು.

ಹಿರಿಯ ವಿದ್ವಾಂಸ ಡಾ.ಟಿ. ಗೋವಿಂದರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತ್ಯಾವಣಿಗೆ ವಕೀಲರಾದ ಸಾಹುಕಾರ ವಿನಯಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಉಪಸ್ಥಿತರಿದ್ದರು.

ಅಭಿನಂದನಾ ಸಮಿತಿ ಸಂಘಟಕರಾದ ಬಿ.ಪರಶುರಾಮ್ ಸ್ವಾಗತಿಸಿದರು. ಎನ್.ಎಸ್. ರಾಜು ಕಾರ್ಯಕ್ರಮ ನಿರೂಪಿಸಿದರು. ವಿಠ್ಠಲರಾವ್ ಪ್ರಾರ್ಥಿಸಿದರು.